ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 15 | ಸಂಚಿಕೆ 24 | ಜೂನ್ 7–13 2021 | ಪುಟ 16 | ರೂ.10/-

https://janashakthi.wordpress.com e-mail : js_weekly@gmail.com



ಮೈಥಿಲಿ ಎಂಬ ಮಮತೆಯ ಮಡಿಲು, ಸಮತೆಯ ಒಡಲು....



ತೇಜಪಾಲ್ ಪ್ರಕರಣ ತೀರ್ಪು: ಮಹಿಳೆಯರ ಸುರಕ್ಷಿತತೆಗೆ ಮಾರಕ



ಹ್ರಾಂ ಹ್ರೂಂ ವಿಜ್ಞಾನ ಮತ್ತು ಹ್ರಾಂ ಹ್ರೂಂ ಅರ್ಥಶಾಸ್ತ್ರ



ಲಸಿಕೆ ಪೂರೈಕೆಯ ತುರ್ತು ವಿಸ್ತರಣೆ "ಆಗಬೇಕಾಗಿದೆ ಮತ್ತು ಸಾಧ್ಯವಿದೆ" – ಎಐಪಿಎಸ್‌ಎನ್



ಮೋದಿ ಸರಕಾರದ 'ತರ್ಕಹೀನ' ಲಸಿಕೆ ನೀತಿ –11 ಸಿಎಂಗಳಿಗೆ ಕೇರಳ ಸಿಎಂ ಪತ್ರ

ಜೂನ್ 1: ರಾಜ್ಯಾದ್ಯಂತ "ಜೀವ ಉಳಿಸಿ–ಜೀವನ ರಕ್ಷಿಸಿ" ಅಭಿಯಾನ

ಮನರೇಗದಲ್ಲಿ ಪ್ರವರ್ಗವಾರು ಕೂಲಿಪಾವತಿ ಬಗ್ಗೆ ಕೇಂದ್ರ ಸರಕಾರದ ಸಲಹಾ ಆದೇಶ
"ಆಶಯ ಪ್ರಶ್ನಾರ್ಹವಾಗಿದೆ ಮತ್ತು ಈ ಕ್ರಮದ ಪರಿಕಲ್ಪನೆ ಅಧಿಕಾರಶಾಹಿಯಾಗಿದೆ"
ಗ್ರಾಮೀಣಾ ಅಭಿವೃದ್ಧಿ ಮಂತ್ರಿಗಳಿಗೆ ಬೃಂದಾ ಕಾರಟ್ ಪತ್ರ

ಮಾರ್ಚ್ 2ರಂದು ಕೇಂದ್ರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತು ರಾಜ್ಯ ಮಂತ್ರಾಲಯದಿಂದ ರಾಜ್ಯ ಸರಕಾರಗಳಿಗೆ ಒಂದು ಸಲಹಾ ಪತ್ರದ ಸ್ವರೂಪದಲ್ಲಿ ಒಂದು ಆದೇಶವನ್ನು ಕಳಿಸಲಾಗಿದೆ. ಇದು ಮನರೇಗದ ಅಡಿಯಲ್ಲಿ ಉದ್ಯೋ ಕೇಳುವವರಿಗೆ ಪರಿಶಿಷ್ಟ ಜಾತಿ. ಪಂಗಡ ಮತ್ತು ಇತರರು ಎಂದು ಪ್ರವರ್ಗವಾರು ಕೂಲಿ ಪಾವತಿಯನ್ನು ಕುರಿತಾದ್ದು.

ಮನರೇಗ ಕಾಯ್ದೆಯ ಅನುಷ್ಠಾನದ ಪ್ರತಿಯೊಂದು ವಿಷಯದಲ್ಲೂ ಸಾಮಾಜಿಕ ವರ್ಗೀಕರಣವನ್ನು ಖಾತ್ರಿಪಡಿಸಬೇಕೆಂದು ಈ ಸಲಹಾಪತ್ರ ರಾಜ್ಯಗಳಿಗೆ ಆದೇಶ ನೀಡಿದೆ. ಕಾರ್ಮಿಕ ಬಜೆಟಿನಲ್ಲಿ ಪರಿಶಿಷ್ಟ ಜಾತಿ/ ಪಂಗಡಗಳ ಕುಟುಂಬಗಳ ನಡುವೆ ಕೆಲಸಕ್ಕೆ ಬರಬಹುದಾದ ಬೇಡಿಕೆ ಮತ್ತು ಅದಕ್ಕೆ ಮಾಡಬೇಕಾದ ವೆಚ್ಚ, ಈ ಪ್ರವರ್ಗಗಳಿಗೆ ಕೂಲಿ ಪಾವತಿಗಳ ರಾಜ್ಯ ಮಟ್ಟದ ಲೆಕ್ಕಪತ್ರ, ಬಳಕೆ ಪ್ರಮಾಣ ಪತ್ರ ಮುಂತಾದ ಎಲ್ಲ ಅಂಶಗಳಲ್ಲಿ ಈ ವರ್ಗೀಕರಣ ಇರಬೇಕು ಎಂದು ಈ ಆದೇಶ ಹೇಳುತ್ತದೆ.

ಇದೊಂದು ವಿಪರೀತ ಅಧಿಕಾರಶಾಹೀಕರಣದ ಕ್ರಮವಾಗಿದ್ದು, ಇದರ ಅಗತ್ಯವಾದರೂ ಏನು ಎಂಬ ಬಗ್ಗೆ ಯಾವುದೇ ಕಾರಣವನ್ನು ಕೊಡಲಾಗಿಲ್ಲ ಎಂದು ಈ ಬಗ್ಗೆ ಸ್ಪಷ್ಟೀಕರಣ ಕೇಳಿ ಹಿರಿಯ ಸಿಪಿಐ(ಎಂ) ಮುಖಂಡರಾದ ಬೃಂದಾ ಕಾರಟ್ ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಿಗಳಿಗೆ ಜೂನ್ 4ರಂದು ಪತ್ರ ಬರೆದಿದ್ದಾರೆ.

ಹಿಂದಿನ ಅನುಭವಗಳ ಆಧಾರದಲ್ಲಿ ಹೇಳುವುದಾದರೆ ಈ ಆದೇಶದಿಂದ ಕೂಲಿ ಪಾವತಿಯಲ್ಲಿ ವಿಳಂಬವಾಗುತ್ತದೆ, ಮುಖ್ಯವಾಗಿ ಇದು ಪರಿಶಿಷ್ಟ ಜಾತಿ/ ಪಂಗಡಗಳ ಜನಗಳಿಗೆ ಕೂಲಿ ಪಾವತಿಯನ್ನೆ ಹೆಚ್ಚಾಗಿ ಬಾಧಿಸುತ್ತದೆ, ಅವರು ಈ ಪ್ರತ್ಯೇಕ ಲೆಕ್ಕಪತ್ರ ಮತ್ತು ಬ್ಯಾಂಕಿಂಗ್ ವಿಧಾನಗಳಿಗೆ ಬಲಿಯಾಗಬೇಕಾಗುತ್ತದೆ ಎಂದು ಬೃಂದಾ ಅವರು ತಮ್ಮ ಪತ್ರದಲ್ಲಿ ಹೇಳಿದ್ದಾರೆ.

ಇಂತಹ ವರ್ಗೀಕರಣದ ಅಗತ್ಯವೇನು ಎಂಬುದಕ್ಕೆ ಈ ಸಲಹಾಪತ್ರ ಸುಸಂಗತ ಕಾರಣವನ್ನೇನೂ ಕೊಡುವುದಿಲ್ಲ. ಆದರೆ ಒಂದೆಡೆಯಲ್ಲಿ "ಸಂಬಂಧಪಟ್ಟ ಎಲ್ಲರೂ ಕಾಲಬದ್ಧ ರೀತಿಯಲ್ಲಿ ಕ್ರಮಗಳನ್ನು ಖಾತ್ರಿಪಡಿಸಬೇಕು, ಅದಕ್ಕನುಗುಣವಾಗಿ ಹಣ ಬಿಡುಗಡೆಯಾಗುವಂತೆ ಈ ಮೂಲಕ ಮಾಡಬಹುದು" ಎಂಬ ಉಲ್ಲೇಖವಿದೆ. ಇದು ಸರಕಾರದ 'ಆಶಯಗಳ ಬಗ್ಗೆ ಗಂಭೀರ ಸಂದೇಹಗಳನ್ನು ಎಬ್ಬಿಸುತ್ತದೆ ಎಂದು ಬೃಂದಾ ಕಾರಟ್ ಅವರು ತಮ್ಮ ಪತ್ರದಲ್ಲಿ ಹೇಳಿದ್ದಾರೆ.

ಮನರೇಗ ಒಂದು ಸಾರ್ವತ್ರಿಕ ಕಾರ್ಯಕ್ರಮ, ಇದಕ್ಕೆ ಬಜೆಟ್ ಅನುದಾನವನ್ನು ಒಟ್ಟಾಗಿ ಕೊಡಲಾಗುತ್ತದೆ. ಇದನ್ನು ಪ್ರವರ್ಗವಾರು ವಿಭಜಿಸುವ ಒಂದು ಧೋರಣೆಯನ್ನು ಸೇರಿಸುವುದು ಈ ಕಾಯ್ದೆಯ ಹೊಸದೊಂದು ವ್ಯಾಖ್ಯಾನವಾಗುತ್ತದೆ. ಇದು ಈ ಸಾರ್ವತ್ರಿಕ ಬೇಡಿಕೆ–ಆಧಾರಿತ ಕಾರ್ಯಕ್ರಮದ ಕಾಯ್ದೆಯ ಆಧಾರವನ್ನೇ ಶಿಥಿಲಗೊಳಿಸುತ್ತದೆ. ಆದ್ದರಿಂದ ಇಂತಹ ವರ್ಗೀಕರಣದ ಏಕೆ ಬೇಕಾಗಿದೆ ಎಂಬ ಬಗ್ಗೆ ಸ್ಪಷ್ಟೀಕರಣ ಬೇಕಾಗುತ್ತದೆ.

ಅಲ್ಲದೆ ಈ ಬಗ್ಗೆ ಸಾರ್ವಜನಿಕ ಚರ್ಚೆಯೇನೂ ನಡೆದಿಲ್ಲ. ಸಂಸತ್ತಿನಲ್ಲಾಗಲೀ, ಗ್ರಾಮೀಣಾಭಿವೃದ್ಧಿ ಸ್ಥಾಯೀ ಸಮಿತಿಯಲ್ಲಾಗಲೀ ಈ ಬಗ್ಗೆ ಚರ್ಚೆ ನಡೆದಿಲ್ಲ. ಸಚಿವಾಲಯದ ವೆಬ್ ಸೈಟಿನಲ್ಲೂ ಈ ಸಲಹಾಪತ್ರದ ಬಗ್ಗೆ ಏನೂ ಮಾಹಿತಿಯಿಲ್ಲ. ಆದ್ದರಿಂದ ಈ ಬಗ್ಗೆ ಚರ್ಚೆ ನಡೆಸದೆ ಇದನ್ನು ಜಾರಿಗೆ ತರಲಾಗದು ಎಂಬುದನ್ನು ಬೃಂದಾ ಕಾರಟ್ ತಮ್ಮ ಪತ್ರದಲ್ಲಿ ಮಂತ್ರಿಗಳ ಗಮನಕ್ಕೆ ತಂದಿದ್ದಾರೆ.

ಈ ಸಾರ್ವತ್ರಿಕ ಕಾರ್ಯಕ್ರಮದ ಅಡಿಯಲ್ಲಿ ಪರಿಶಿಷ್ಟ ಜಾತಿ/ಪಂಗಡಗಳು ಮತ್ತು ಮಹಿಳೆಯರ ಹಕ್ಕುಗಳ ರಕ್ಷಣೆಯ ಪ್ರಶ್ನೆಯನ್ನು ಸಿಪಿಐ(ಎಂ) ಸದಾ ಎತ್ತಿದೆ. ಈ ಪ್ರವರ್ಗಗಳ ಫಲಾನುಭವಿಗಳಿಗೆ ತಲುಪುವ ಕನ್ವರ್ಜೆನ್ಸ್ ಕಾರ್ಯಕ್ರಮಗಳ ಉಸ್ತುವಾರಿಗೆ ವ್ಯವಸ್ಥೆ ಕಲ್ಪಿಸಬೇಕು ಎಂದು ಕೇಳಿದ್ದರೂ ಅದನ್ನಿನ್ನೂ ಮಾಡಿಲ್ಲ. ಕಾಯ್ದೆಯಲ್ಲಿ ಹೇಳಿರುವ "ಬರಿಗಾಲು ಟೆಕ್ನಿಷಿಯನ್" ಹುದ್ದೆಗೆ ಪರಿಶಿಷ್ಟ ಜಾತಿ/ಪಂಗಡಗಳ ವ್ಯಕ್ತಿಗಳ ನೇಮಕಾತಿ ಮತ್ತು ತರಬೇತಿಯ ಬಗ್ಗೆ ಯಾವ ಪ್ರಯತ್ನವನ್ನೂ ನಡೆಸಿಲ್ಲ.

ಅಲ್ಲದೆ ಪರಿಶಿಷ್ಟ ಬುಡಕಟ್ಟುಗಳ ಕುಟುಂಬಗಳಿಗೆ ಅರಣ್ಯ ಹಕ್ಕುಗಳ ಕಾಯ್ದೆಯ ಅಡಿಯಲ್ಲಿ ಕೊಟ್ಟಿರುವ ಜಮೀನು ಬಿಟ್ಟು ಬೇರೇನೂ ಆಸ್ತಿಯಿಲ್ಲದಿದ್ದರೆ ಅವರಿಗೆ ಹೆಚ್ಚುವರಿ 50 ದಿನಗಳ ಕೆಲಸ ಕೊಡಬೇಕು ಎಂದೂ ಇದೆ. ಆದರೆ ಎಷ್ಟು ಕುಟುಂಬಗಳಿಗೆ ಹೀಗೆ ವರ್ಷಕ್ಕೆ 150 ದಿನಗಳ ಕೆಲಸ ಕೊಡಲಾಗಿದೆ ಎಂಬ ಯಾವುದೇ ದಾಖಲೆ ಈ ಮಂತ್ರಾಲಯದ ಬಳಿ ಇಲ್ಲ, ಇಂತಹ ಮಾಹಿತಿ ಸಾರ್ವಜನಿಕವಾಗಿ ಲಭ್ಯವಿಲ್ಲ.

ಪರಿಶಿಷ್ಟ ಜಾತಿಗಳು ಮತ್ತು ಪಂಗಡಗಳ ಜನರ ಒಳಿತಿನ ಇಂತಹ ಮೂರ್ತ ಕ್ರಮಗಳನ್ನು ಕೈಗೊಳ್ಳುವ ಬದಲು ಇಂತಹ ಸಲಹಾ ಆದೇಶಗಳನ್ನು ಹೊರಡಿಸಿರುವುದು, ಅದರ ಆಶಯದ ದೃಷ್ಟಿಯಿಂದಲೂ ಪ್ರಶ್ನಾರ್ಹ ಮತ್ತು ಅದರ ಪರಿಕಲ್ಪನೆಯ ದೃಷ್ಟಿಯಿಂದಲೂ ಅತ್ಯಂತ ಅಧಿಕಾರಶಾಹಿ ಸ್ವರೂಪದ್ದಾಗಿದೆ ಎಂದು ಬೃಂದಾ ಕಾರಟ್ ಹೇಳಿದ್ದಾರೆ.

ನರೇಗದ ಅಡಿಯಲ್ಲಿ ಕೆಲಸಗಳ ಕೊರತೆಯೇ ಈಗಿರುವ ಪ್ರಧಾನ ಪ್ರಶ್ನೆ. ಎಪ್ರಿಲ್–ಮೇ ತಿಂಗಳಲ್ಲಿ ಪ್ರತಿ ಕುಟಂಬಕ್ಕೆ ಸರಾಸರಿ ಕೇವಲ 20 ದಿನಗಳ ಕೆಲಸ ಸಿಕ್ಕಿದೆ. ಇದು ಕಳೆದ ವರ್ಷ ಈ ಅವಧಿಯಲ್ಲಿ ಸಿಕ್ಕಿದ ಕೆಲಸಕ್ಕಿಂತಲೂ ಕಡಿಮೆ. ವಾಸ್ತವವಾಗಿ ಈ ವರ್ಷ ಕೊವಿಡ್‌ನ ಎರಡನೇ ಅಲೆ ಉದ್ಯೋಗಾವಕಾಶಗಳನ್ನು ನಿರ್ಮೂಲ ಮಾಡಿರುವಾಗ ವ್ಯಾಪಕ ಹಸಿವು ಮತ್ತು ಕೊರತೆಗಳನ್ನು ತಡೆಯಲು ನರೇಗಾದ ಅಡಿಯಲ್ಲಿ ಹೆಚ್ಚಿನ ಕೆಲಸ ಕೊಡಿಸಬೇಕಾಗಿತ್ತು. ಈ ಪ್ರಶ್ನೆಗಳನ್ನು ಪರಿಶೀಲಿಸಬೇಕು ಎಂದು ಬೃಂದಾ ಕಾರಟ್ ಗ್ರಾಮೀಣಾಭಿವೃದ್ಧಿ ಮಂತ್ರಿಗಳನ್ನು ತಮ್ಮ ಪತ್ರದಲ್ಲಿ ಕೋರಿದ್ದಾರೆ.

ವಿಶ್ವ ಸಂಸ್ಥೆಯ ಮಾನವ ಹಕ್ಕು ಮಂಡಳಿಯ ಪ್ಯಾಲೆಸ್ತೀನ್ ಮತದಾನದಲ್ಲಿ ಭಾರತದ ಗೈರುಹಾಜರಿ
ಭಾರತದ ರಾಷ್ಟ್ರೀಯ ಒಮ್ಮತದ ಉಲ್ಲಂಘನೆಯಾಗಿದೆ– ಪ್ರಧಾನಿಗಳಿಗೆ ಯೆಚುರಿ ಪತ್ರ

ವಿಶ್ವ ಸಂಸ್ಥೆಯ ಮಾನವ ಹಕ್ಕು ಮಂಡಳಿಯಲ್ಲಿ ಪ್ಯಾಲೆಸ್ತೀನೀ ಪ್ರಶ್ನೆ ಮತ್ತು ಎಲ್ಲ ಜನಗಳ ಮಾನವ ಹಕ್ಕುಗಳ ಮೇಲಿನ ನಿರ್ಣಯದ ಮೇಲಿನ ಮತದಾನದಲ್ಲಿ ಭಾರತದ ಗೈರು ಹಾಜರಿಯನ್ನು ಪ್ರತಿಭಟಿಸಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಪ್ರಧಾನ ಮಂತ್ರಿಗಳಿಗೆ ಜೂನ್ 4 ರಂದು ಪತ್ರ ಬರೆದಿದ್ದಾರೆ.

ಪ್ಯಾಲೆಸ್ತೀನೀಯರಿಗೆ ತಮ್ಮ ಸ್ವಂತ ನಾಡನ್ನು ಹೊಂದುವ ನ್ಯಾಯಬದ್ಧ ಹಕ್ಕು ಇದೆ ಎಂಬುದಕ್ಕೆ ಭಾರತೀಯ ಜನತೆಯ ಬೆಂಬಲ ಇಂದು ನಿನ್ನೆಯದಲ್ಲ. ಅದು ಸ್ವಾತಂತ್ರ್ಯ ಪೂರ್ವದಿಂದಲೂ ಇರುವ ಬೆಂಬಲ. ಇದು ನಮ್ಮ ಸ್ವಾತಂತ್ರ್ಯ ಹೋರಾಟದ ಭಾಗವಾಗಿತ್ತು. ಒಂದು ರಾಷ್ಟ್ರೀಯ ಒಮ್ಮತವಾಗಿ ಈ ಬೆಂಬಲ ಮೂಡಿ ಬಂದಿತ್ತು. ವಿಶ್ವಸಂಸ್ಥೆಯ ಮಾನವ ಹಕ್ಕು ಮಂಡಳಿಯಲ್ಲಿ ಮತದಾನದಲ್ಲಿ ಭಾರತ ಭಾಗವಹಿಸದಿರುವುದು ಈ ರಾಷ್ಟ್ರೀಯ ಒಮ್ಮತದ ಉಲ್ಲಂಘನೆಯಾಗಿದೆ ಎಂದು ಯೆಚುರಿ ತಮ್ಮ ಪತ್ರದಲ್ಲಿ ಹೇಳಿದ್ದಾರೆ.

ಭಾರತ ಸತತವಾಗಿ ವಿಶ್ವಸಂಸ್ಥೆಯ ಈ ಕುರಿತಾದ ಎಲ್ಲ ನಿರ್ಣಯಗಳನ್ನೂ ಪ್ರತಿಪಾದಿಸುತ್ತ ಬಂದಿದೆ, ಈ ನಿರ್ಣಯಗಳ ನಗ್ನ ಉಲ್ಲಂಘನೆಗಳನ್ನು ಮತ್ತು ಪ್ಯಾಲೆಸ್ತೀನೀ ನೆಲದ ಕಾನೂನುಬಾಹಿರವಾಗಿ ಆಕ್ರಮಿಸಿಕೊಂಡಿರುವುದನ್ನು ವಿರೋಧಿಸುತ್ತ ಬಂದಿದೆ. ವಿಶ್ವಸಂಸ್ಥೆಯಲ್ಲಿ ಭಾರತದ ಖಾಯಂ ಪ್ರತಿನಿಧಿ ಮೇ 17, 2021ರಂದು ಭದ್ರತಾ ಸಮಿತಿಯಲ್ಲಿ ಮಾತಾಡುತ್ತ "ನ್ಯಾಯುತ ಪ್ಯಾಲೆಸ್ತೀನೀ ಗುರಿ"ಗೆ ಭಾರತದ ಬೆಂಬಲವನ್ನು ವ್ಯಕ್ತಪಡಿಸಿದ್ದರು. ಭಾರತ ಪ್ಯಾಲೆಸ್ತೀನೀ ಪ್ರಶ್ನೆಗೆ ಎರಡು ಪ್ರಭುತ್ವಗಳ ಪರಿಹಾರವನ್ನು ಬೆಂಬಲಿಸುತ್ತ ಬಂದಿದೆ. ಸಮಾನ ಸಾರ್ವಭೌಮ ಹಕ್ಕುಗಳಿರುವ ಎರಡು ಪ್ರಭುತ್ವಗಳು, ಇವುಗಳಲ್ಲಿ ಪ್ಯಾಲೆಸ್ತೀನೀ ಪ್ರಭುತ್ವದ ರಾಜಧಾನಿ ಪೂರ್ವ ಜೆರುಸಲೇಂ ಅಗಿರಬೇಕು ಎಂಬುದು ಈ ವಿವಾದಕ್ಕೆ ಪರಿಹಾರ ಎಂಬ ಭಾರತದ ನಿಲುವನ್ನು ಅವರು ತಮ್ಮ ಭಾಷಣದಲ್ಲಿ ಪುನರುಚ್ಚರಿಸಿದ್ದರು. ಆದರೆ, ಅದಾದ ಹತ್ತು ದಿನಗಳ ನಂತರ, ಇಸ್ರೇಲ್ ಅಂತರ್ರಾಷ್ಟ್ರೀಯ ಮಾನವ ಹಕ್ಕುಗಳ ಅಧಿನಿರ್ಣಯಗಳಿಗೆ ಬದ್ಧವಾಗಿರಬೇಕು ಎಂದು ಕೇಳುವ ನಿರ್ಣಯದ ಮೇಲೆ ಮತದಾನದಲ್ಲಿ ಗೈರು ಹಾಜರಾಗುವ ಈ ಕ್ರಮ ಬಂದಿದೆ.

ಭಾರತದ ಈ ಕ್ರಮಕ್ಕೆ ಅಂತರ್ರಾಷ್ಟ್ರೀಯ ನಿರಾಶೆ, ವಿಸ್ಮಯ ಮತ್ತು ಪ್ರತಿಭಟನೆಗಳು ಸಾಲುಸಾಲಾಗಿ ವ್ಯಕ್ತವಾಗಿವೆ. ಈ ಗೈರುಹಾಜರಿ ಪ್ಯಾಲೆಸ್ತೀನಿಯರೂ ಸೇರಿದಂತೆ ಎಲ್ಲ ಜನಗಳ ಮಾನವ ಹಕ್ಕುಗಳನ್ನು ಪ್ರತಿಪಾದಿಸುವ ವಿಶ್ವಸಂಸ್ಥೆ ಮಾನವ ಹಕ್ಕುಗಳ ಮಂಡಳಿಯ ಮಹತ್ವದ ಕೆಲಸದ ಕತ್ತು ಹಿಸುಕುವಂತದ್ದು ಎಂದು ಹಲವು ಮಂದಿ ಸರಿಯಾಗಿಯೇ ಕಾಣುತ್ತಿದ್ದಾರೆ.

ಈ ತಿಪ್ಪರಲಾಗ, ಭಾರತದಲ್ಲಿ ಮಾನವ ಹಕ್ಕುಗಳನ್ನು, ಪ್ರಜಾಪ್ರಭುತ್ವ ಹಕ್ಕುಗಳನ್ನು ಮತ್ತು ನಾಗರಿಕ ಸ್ವಾತಂತ್ರ್ಯಗಳನ್ನು ಎತ್ತಿ ಹಿಡಿಯವ ಮಟ್ಟ ಭಯಾನಕ ರೀತಿಯಲ್ಲಿ ಇಳಿಯುತ್ತಿರುವ ಸಂದರ್ಭದಲ್ಲಿ ಬಂದಿದೆ ಎಂದು ಹೇಳಲೇಬೇಕಾಗಿದೆ ಎಂದು ಪ್ರಧಾನ ಮಂತ್ರಿಗಳಿಗೆ ಬರೆದಿರುವ ಪತ್ರದಲ್ಲಿ ಸೀತಾರಾಂ ಯೆಚುರಿಯುವರು ಹೇಳಿದ್ದಾರೆ. ಭಾರತದ ಈ ಗೈರುಹಾಜರಿಯನ್ನು ಭಾರತದಲ್ಲಿ ಮಾನವ ಹಕ್ಕುಗಳನ್ನು ಎತ್ತಿ ಹಿಡಿಯುವಲ್ಲಿನ ಮಟ್ಟ ಕುಸಿಯುತ್ತಿರುವುದರ ಬಗ್ಗೆ ಜಾಗತಿಕ ಆತಂಕದೊಂದಿಗೆ ತಳುಕು ಹಾಕಲಾಗುತ್ತಿದೆ ಎಂದೂ ಯೆಚುರಿಯವರು ಪ್ರಧಾನ ಮಂತ್ರಿಗಳ ಗಮನಕ್ಕೆ ತಂದಿದ್ದಾರೆ.

ಭಾರತ ಪ್ಯಾಲಿಸ್ತೀನೀ ಧ್ಯೇಯಕ್ಕೆ ತನ್ನ ನಿರಂತರ ಬೆಂಬಲವನ್ನು ಪುನರುಚ್ಚರಿಸಬೇಕು, ಅದು ಪ್ಯಾಲೆಸ್ತೀನೀ ಹೋರಾಟವನ್ನು ಬೆಂಬಲಿಸುವ ರಾಷ್ಟ್ರೀಯ ಒಮ್ಮತದಿಂದ ಹಿಂದೆ ಸರಿಯಲು ಸಾಧ್ಯವಿಲ್ಲ ಎಂದಿರುವ ಸೀತಾರಾಂ ಯೆಚುರಿಯವರು, ವಿಶ್ವಸಂಸ್ಥೆ ಮಾನವ ಹಕ್ಕುಗಳ ಮಂಡಳಿ ಈ ನಿರ್ಣಯದ ಅಂಗೀಕಾರದ ನಂತರ ರಚಿಸಿರುವ ಸ್ವತಂತ್ರ ತನಿಖಾ ಆಯೋಗದೊಂದಿಗೆ ಸಹಕರಿಸುವ ಒಂದು ನೇರ ನಿಲುವನ್ನು ತಳೆಯುವ ಬಗ್ಗೆ ತಕ್ಷಣ ಗಮನ ಹರಿಸಬೇಕು ಮತ್ತು ಇದನ್ನು ಸಕಾರಾತ್ಮಕವಾಗಿ ಪರಿಶೀಲಿಸಬೇಕು ಎಂದು ಕೋರಿದ್ದಾರೆ.

ಸಮರ್ಪಿತ ಮಾರ್ಕ್ಸ್‌ವಾದಿಯಾಗಿದ್ದ ಮೈಥಿಲಿ ಶಿವರಾಮನ್



ಮೈಥಿಲಿ ಶಿವರಾಮನ್, ದೇಶದ ಮಹಿಳಾ ಆಂದೋಲನದ ಮತ್ತು ತಮಿಳುನಾಡು ಸಿಪಿಐ(ಎಂ)ನ ಹಿರಿಯ ಮುಖಂಡರು ಮೇ 30ರಂದು ನಿಧನರಾಗಿದ್ದಾರೆ. ಅವರಿಗೆ 81 ವರ್ಷವಾಗಿತ್ತು. ಸಿಪಿಐ(ಎಂ) ಪೊಲಿಟ್ ಬ್ಯುರೊ ಆಳವಾದ ಸಂತಾಪವನ್ನು ವ್ಯಕ್ತಪಡಿಸಿದೆ.

1970ರ ದಶಕದಲ್ಲಿ ಮೈಥಿಲಿಯವರು ಚೆನ್ನೈ ನಗರದಲ್ಲಿ ಕಾರ್ಮಿಕ ಸಂಘಟನೆ ಮತ್ತು ದುಡಿಯುವ ವರ್ಗದ ಚಳುವಳಿಯಲ್ಲಿ ಒಂದು ಸಕ್ರಿಯ ಪಾತ್ರವನ್ನು ವಹಿಸಿದರು. ಅಲ್ಲದೆ ತಮಿಳುನಾಡಿನಲ್ಲಿ ಅವರು ಜನವಾದಿ ಮಹಿಳಾ ಸಂಘಟನೆಯ ಸ್ಥಾಪಕರಲ್ಲಿ ಒಬ್ಬರು. ಮುಂದೆ ಅಖಿಲ ಭಾರತಮಟ್ಟದಲ್ಲಿ ಸ್ಥಾಪನೆಗೊಂಡ ಎ.ಐ.ಡಿ.ಡಬ್ಲ್ಯು.ಎ.ನ ಉಪಾಧ್ಯಕ್ಷರಾಗಿ ಅವರು ದುಡಿದರು.

ಜಾತಿ ಮತ್ತು ಲಿಂಗ ದಮನದ ವಿರುದ್ಧ ಅವರು ಹಲವು ಹೋರಾಟಗಳಿಗೆ ನೇತೃತ್ವ ನೀಡಿದರು. ಇವುಗಳಲ್ಲಿ ಗಮನಾರ್ಹವಾದದ್ದು ವಚಥಿ ಬುಡಕಟ್ಟು ಮಹಿಳೆಯರ ಹೋರಾಟ. ಇದಕ್ಕೆ ಮೊದಲು ಅವರು 1968ರಲ್ಲಿ ಕಿಲ್ವನ್ಮಣಿಯಲ್ಲಿ ದಲಿತ ಕೃಷಿಕೂಲಿಕಾರರ ಹತ್ಯಾಕಾಂಡದ ಒಂದು ಕಟು ತನಿಖೆಯನ್ನು ನಡೆಸಿದ್ದರು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ಸಂದರ್ಭದಲ್ಲಿ ನೆನಪಿಸಿಕೊಂಡಿದೆ.

ಒಬ್ಬ ಸಮರ್ಪಿತ ಮಾರ್ಕ್ಸ್‌ವಾದಿಯಾಗಿದ್ದ ಮೈಥಿಲಿ ಎರಡು ದಶಕಗಳಿಗೂ ಹೆಚ್ಚು ಕಾಲ ತಮಿಳುನಾಡು ರಾಜ್ಯಸಮಿತಿಯ ಸದಸ್ಯರಾಗಿ ಕೆಲಸ ಮಾಡಿದರು. ಅವರು ವರ್ಗ ಮತ್ತು ಲಿಂಗ ಸಂಬಂಧಿ ವಿಷಯಗಳ ಮೇಲೆ ಹಲವಾರು ಮಹತ್ವದ ಲೇಖನಗಳು ಮತ್ತು ಕಿರುಪುಸ್ತಕಗಳನ್ನು ತಮಿಳು ಮತ್ತು ಇಂಗ್ಲೀಷಿನಲ್ಲಿ ಬರೆದಿದ್ದಾರೆ. ಒಂದು ತೀವ್ರ ಕಾಯಿಲೆಯಿಂದಾಗಿ ಕಳೆದ ಒಂದು ದಶಕಕ್ಕೂ ಹೆಚ್ಚು ಕಾಲದಿಂದ ಅವರು ಓಡಾಡದಂತಾಗಿತ್ತು. ಅವರ ಅಮೂಲ್ಯ ಕೊಡುಗೆಗಳಿಗೆ ಶ್ರದ್ಧಾಂಜಲಿ ಅರ್ಪಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಅವರ ಪತಿ, ಮಗಳು ಮತ್ತು ಕುಟುಂಬದ ಇತರ ಸದಸ್ಯರಿಗೆ ಸಂತಾಪವನ್ನು ವ್ಯಕ್ತಪಡಿಸಿದೆ.

ಬಿಹಾರ ಸಿಪಿಐ(ಎಂ) ಶಾಸಕರ ಮೇಲೆ ಮಾರಣಾಂತಿಕ ಹಲ್ಲೆ

ಬಿಹಾರ ವಿಧಾನಸಭೆಯಲ್ಲಿ ಸಿಪಿಐ(ಎಂ) ಶಾಸಕಾಂಗ ಪಕ್ಷದ ಮುಖಂಡರೂ, ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರೂ ಅಗಿರುವ ಅಜಯ್ ಕುಮಾರ್ ಮೇಲೆ ಮೇ 29ರಂದು ಸಮಸ್ತಿಪುರದಲ್ಲಿ ಮಾರಣಾಂತಿಕ ಹಲ್ಲೆ ನಡೆದಿದೆ. ಇದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡಿಸಿದೆ. ಇದು ಕಳೆದ ಕೆಲವು ವಾರಗಳಲ್ಲಿ ಇಂತಹ ಎರಡನೇ ಹಲ್ಲೆ.

ಹಲ್ಲೆಕೋರರನ್ನು ತಕ್ಷಣವೇ ಪತ್ತೆಹಚ್ಚಿ ಹಿಡಿಯಬೇಕು ಮತ್ತು ಅವರ ವಿರುದ್ಧ ಶಿಕ್ಷಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆಗ್ರಹಿಸಿರುವ ಪೊಲಿಟ್‌ಬ್ಯುರೊ ಅಜಯ್ ಕುಮಾರ್ ಅವರಿಗೆ ಸಾಕಷ್ಟು ಭದ್ರತೆಯನ್ನು ಒದಗಿಸಬೇಕು ಮತ್ತು ಇಂತಹ ಘಟನೆಗಳು ಮತ್ತೆ–ಮತ್ತೆ ಏಕೆ ನಡೆಯುತ್ತದೆ ಎಂಬುದಕ್ಕೆ ಒಂದು ತನಿಖೆಯನ್ನು ನಡೆಸಬೇಕು ಎಂದು ಹೇಳಿದೆ.

ಸಂಪಾದಕೀಯ

ಎಲ್ಲೈ ಮೇಲ್ಜಾತಿ ಪೋಲೀಸ್ ನಾಯಿ! ನೀನೆಷ್ಟು ಕ್ರೂರ!

ಮರೆವು ಸಹಜ. ನಾವು ಎಲ್ಲವನ್ನು ಬಹುಬೇಗ ಮರೆತು ಬಿಡುತ್ತೇವೆ. ನಮ್ಮ ಅಕ್ಕತಂಗಿಯರ ಮೇಲೆ ನಡೆಯುವ ಅತ್ಯಾಚಾರಗಳನ್ನು ನಾವು ಮರೆತು ಬಿಡುತ್ತೇವೆ. ಅಣ್ಣ ತಂಗಿಯನ್ನು ಹೊಡೆದು ಸಾಯಿಸುತ್ತಾನೆ. ಮುಂದೆ ಎಲ್ಲರೂ ಎಲ್ಲವನ್ನು ಮರೆತು ಬಿಡುತ್ತಾರೆ. ಕೆಲವೇ ದಿನಗಳ ಹಿಂದೆ ಒಬ್ಬ ಮೇಲ್ಜಾತಿ ಪೋಲೀಸ್ ನಾಯಿ ಅಮಾಯಕ ಪರಿಶಿಷ್ಟ ಜಾತಿಯ ಯುವಕನೊಬ್ಬನನ್ನು ಗೋಣಿಬೀಡು ಪೋಲೀಸ್ ಠಾಣೆಗೆ ಎಳೆತಂದು, ಅಮಾನುಷವಾಗಿ ಹಲ್ಲೆ ಮಾಡಿ ಆತನ ಬಾಯಿಗೆ ಮಾನವ ಮೂತ್ರವನ್ನು ಹುಯ್ಯಿಸಿದ್ದಾನೆ. ಕೆಲವು ದಿನ ರಾಜ್ಯಾದ್ಯಂತ ಡಿ.ಹೆಚ್.ಎಸ್. ದಲಿತ ಹಕ್ಕುಗಳ ಸಮಿತಿ ಮೊದಲಾದ ಸಂಘಟನೆ ಪ್ರತಿಭಟನೆ ನಡೆಸಿವೆ. ಈಗ ಬಹುತೇಕ ಎಲ್ಲರೂ ಮರೆತು ಬಿಟ್ಟಿದ್ದಾರೆ. ಅಂದು ಮೂಡಿಗೆರೆ ತಾಲೂಕಿನ ಗೋಣಿಬೀಡು ತಾಲೂಕಿನ ಪೋಲೀಸ್ ಠಾಣೆಯಲ್ಲಿ ಏನು ನಡೆಯಿತು ಎನ್ನುವುದೇ ಬಹಳಷ್ಟು ಜನಗಳಿಗೆ ತಿಳಿದಿಲ್ಲ. ಮಾಧ್ಯಮಗಳು ವರದಿ ಮಾಡಲಿಲ್ಲ. ಪತ್ರಿಕೆಗಳು ಹೆಚ್ಚೇನು ಬರೆಯಲಿಲ್ಲ. ಹೀಗಾಗಿ ಎಲ್ಲವೂ ಮುಚ್ಚಿಹೋಗುತ್ತದೆ. ಜನ ಸಿಡಿದೇಳಬೇಕಾದ ಎಷ್ಟೋ ಇಂತಹ ಪ್ರಕರಣಗಳು ಜನಮಾನಸದಿಂದ ಮರೆಯಾಗುತ್ತವೆ. ಇಂತಹ ಅತ್ಯಾಚಾರ ಅನಾಚಾರಗಳನ್ನು ಮುಂದುವರೆಸಲು ಕುಮ್ಮಕ್ಕು ಸಿಗುತ್ತಿರುತ್ತದೆ.

ಅಂದು ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರ ತಾಲೂಕಿನ ಗೋಣಿಬೀಡು ಪೊಲೀಸ್ ಠಾಣೆಗೆ ಪರಿಶಿಷ್ಟ ಜಾತಿಗೆ ಸೇರಿದ ಕೆ.ಎಲ್. ಪುನೀತ್ ಎಂಬ ಯುವಕನನ್ನು ಎಳೆದೊಯ್ದು ಸಬ್ ಇನ್ಸ್‌ಪೆಕ್ಟರ್ ಕೆ. ಅರ್ಜುನ್ ಯುವಕನನ್ನು ಚಿತ್ರಹಿಂಸೆಗೆ ಗುರಿಪಡಿಸಿದ್ದಾನೆ. ನೆಲಕ್ಕೆ ಕುಸಿದು ಬಿದ್ದ ಯುವಕ ಕುಡಿಯಲು ನೀರು ಕೇಳಿದಾಗ ಆತನ ಬಾಯಲ್ಲಿ ಮೂತ್ರ ಹುಯ್ಯಿಸಿ ಜಾತಿ ನಿಂದನೆ ಮಾಡಿದ್ದಾನೆ. ಪುನೀತ್ ನೀಡಿದ ದೂರಿನನ್ವಯ ಪಶ್ಚಿಮ ವಲಯದ ಐಜಿಪಿ ಅಮಾನತುಗೊಳಿಸಿದರು. ಹೆಚ್ಚಿನ ತನಿಖೆಗಾಗಿ ಸಿಐಡಿಗೆ ವಹಿಸಲಾಗಿದೆಯಂತೆ. ಸಬ್ ಇನ್ಸ್‌ಪೆಕ್ಟರ್ ವಿರುದ್ಧ ಎಫ್‌ಐಆರ್ ಹಾಗೂ ಎಸ್‌ಸಿ–ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆಯಡಿಯಲ್ಲಿ ಪ್ರಕರಣ ದಾಖಲಾಗಿದೆಯಂತೆ. ಚಿಕ್ಕಮಗಳೂರಿನ ಮೊದಲನೆಯ ಜಿಲ್ಲಾ ಸತ್ರ ನ್ಯಾಯಾಲಯ ನಿರೀಕ್ಷಣಾ ಜಾಮೀನು ನಿರಾಕರಿಸಿರುವ ಹಿನ್ನೆಲೆಯಲ್ಲಿ ಅವರಿಗೆ ಬಂಧನ ಭೀತಿ ಎದುರಾಗಿದೆ ಎನ್ನಲಾಗಿದೆ. ದಲಿತ ಯುವಕನಿಗೆ ಮೂತ್ರ ಕುಡಿಸಿ ಹಿಂಸೆ ನೀಡುವ ದುಷ್ಕೃತ್ಯವನ್ನು ಎಲ್ಲರಿಗೂ ಪಾಠ ಆಗುವಂತೆ ಅಪರಾಧಿಗೆ ಕಠಿಣ ಶಿಕ್ಷೆಯಾಗಬೇಕಾಗಿದೆ.

ದಲಿತ ಬಂಧುಗಳನ್ನು ಈ ರೀತಿ ಅವಮಾನಿಸುವುದು ಸಜ್ಜನರು ತಲೆತಗ್ಗಿಸುವ ವಿಷಯವಾಗಿದೆ. ಈ ಅವಮಾನವನ್ನು ಸಹಿಸಿಕೊಳ್ಳಲಾಗದ ಪರಿಸ್ಥಿತಿ ಇನ್ನೂ, ನಮ್ಮ ಸಮಾಜದಲ್ಲಿ ಉಳಿದುಕೊಂಡಿರುವುದು ದೊಡ್ಡ ದುರಂತವಾಗಿದೆ. ಜಾತಿ ತಾರತಮ್ಯ, ಜಾತಿ ಅಸ್ಪೃಶ್ಯತೆ ನಮ್ಮ ಶ್ರೇಣೀಕೃತ ಸಮಾಜ ಪದ್ಧತಿಯಾಗಿದೆ. ಇದು ನಾವು ಯಾರೂ ಹೆಮ್ಮೆಪಡುವ ವಿಷಯವಲ್ಲ. ಈ ಅನಿಷ್ಟ ಜಾತಿ ಪದ್ಧತಿಯನ್ನು ತೊಡೆದು ಹಾಕಲು ಎಲ್ಲಾ ಜಾತಿಗಳಿಗೆ ಸೇರಿದ ಜನ ಒಂದಾಗಬೇಕು. ಇದು ನಮ್ಮ ಸಮಾಜಕ್ಕೆ ಶೋಭೆ ತರುವ ವಿಷಯವಲ್ಲ.

ಮಾನವರು ನಾವೆಲ್ಲರೂ ಒಂದೇ ಎಂಬ ತಿಳವಳಿಕೆ ನಮ್ಮೆಲ್ಲರದಾಗಬೇಕು. ಸವರ್ಣೀಯರು, ಅವರ್ಣೀಯರು ಎಂಬ ಬೇದವನ್ನು ಎಲ್ಲರೂ ಸೇರಿ ಕಿತ್ತುಹಾಕಬೇಕು. ದಲಿತರಿಗೆ ಮಾನಸಿಕ ಹಿಂಸೆ ನೀಡುವುದು, ಅಸ್ಪೃಶ್ಯತೆಯನ್ನು ಆಚರಿಸುವುದನ್ನು ನಾವು ಸಹಿಸಬಾರದು. ದಲಿತ ಬಂಧುಗಳಿಗೆ ಮೂತ್ರ ಕುಡಿಸುವಂತಹ ಅತ್ಯಂತ ಹೀನ ಪದ್ಧತಿಯಿಂದ ಮುಕ್ತವಾದ, ಮಲಹೊರುವಂತಹ ಅನಿಷ್ಟ ಪದ್ಧತಿಯಿಂದ ನಮ್ಮ ಸಮಾಜ ಮುಕ್ತವಾಗಬೇಕು. ಸವರ್ಣೀಯರು ಇದಕ್ಕೆ ಮುಂದಾಗಬೇಕು.

ಜಾತಿ ಅಸ್ಪೃಶ್ಯತೆ ಕಿತ್ತುಹಾಕುವ ವಿಷಯದಲ್ಲಿ ಮೇಲ್ಜಾತಿಯವರು ಎಂದು ಹೇಳುವವರು ಪ್ರಾಮಾಣಿಕರಾಗಿರಬೇಕು. ನಮ್ಮ ಮಠಾಧಿಪತಿಗಳು ಈ ವಿಷಯದಲ್ಲಿ ಮುಂದಾಗಬೇಕು. ಬುದ್ಧ, ಬಸವ, ಕನಕದಾಸರಂತಹ ಸಮಾಜ ಸುಧಾಕರನ್ನು, ಅವರ ಪ್ರಗತಿಪರ ವಿಚಾರಗಳನ್ನು ಪ್ರತಿಪಾದಿಸುವವರು ಅನಿಷ್ಟ ಜಾತಿ ಪದ್ಧತಿಯನ್ನು ನಿರ್ಮೂಲನೆ ಮಾಡಬೇಕು.

ಜನತೆಯನ್ನು ಯಾಮಾರಿಸಿ ಅಗ್ಗದ ಪ್ರಚಾರ ಪಡೆಯುವ ಹುನ್ನಾರದ ಪ್ಯಾಕೇಜ್–ಸಿಪಿಐ(ಎಂ)

ಮುಖ್ಯಮಂತ್ರಿ ಶ್ರೀ ಯಡಿಯೂರಪ್ಪನವರು ನೆನ್ನೆ ಘೋಷಿಸಿದ ಎರಡನೇ ಪರಿಹಾರದ ಪ್ಯಾಕೇಜ್ ಎಂಬುದು ಕೇವಲ "ನಾನು ಕೂಡಾ ಪರಿಹಾರ ಕೊಟ್ಟಿನೆಂದು" ಹೇಳಿಕೊಂಡು ಪ್ರಚಾರ ಪಡೆಯುವ ಹುನ್ನಾರವಾಗಿಯಷ್ಟೇ? ನಿಜವಾದ ಪರಿಹಾರವಾಗಿಲ್ಲ. ಇದು ಮತ್ತು ಹಿಂದೆ ಘೋಷಿಸಿದ ಪರಿಹಾರದ ಪ್ಯಾಕೇಜ್ ರಾಜ್ಯದ ಯಾರನ್ನು ರಕ್ಷಿಸದಾಗಿದೆ ಯೆಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ) ರಾಜ್ಯ ಸಮಿತಿಯು ಖಂಡಿಸಿ ಮತ್ತು ಅದು ರಾಜ್ಯದ ಜನತೆಗೆ, ಅಗ್ಗದ ಪ್ರಚಾರ ಪಡೆಯುವ ಸರಕಾರದ ಜನ ವಿರೋಧಿ ನಿಲುಮೆಗಳನ್ನು ವಿರೋಧಿಸಲು ಹಾಗೂ ನಿಜ ಪರಿಹಾರ ನೀಡುವಂತೆ ಒತ್ತಾಯಿಸಿ ಪ್ರತಿ ರೋಧಿಸಲು ಕರೆ ನೀಡಿದೆ.

ಈ ಪ್ಯಾಕೇಜ್ ನಲ್ಲಿ ಶಾಲಾ ಮಕ್ಕಳಿಗೆ ಎಂದಿನಂತೆ ನೀಡುವ ಹಾಲಿನ ಪೌಡರ್ ಮೊತ್ತ 100 ಕೋಟಿ ರೂ ಸೇರಿಸಿ, ಕೋವಿಡ್ ಪ್ಯಾಕೇಜ್ ಎಂದೇಳಿ ರಾಜ್ಯದ ನಾಗರೀಕರನ್ನು ಮುಖ್ಯಮಂತ್ರಿಗಳು ಯಾಮಾರಿಸಿದ್ದಾರೆ.


ಒಟ್ಟು 323 ಕೋಟಿ ಪ್ಯಾಕೇಜ್ ನಲ್ಲಿ 100 ಕೋಟಿ ಹಾಲಿನ ಪೌಡರ್ ಬಿಟ್ಟರೇ, ಸಣ್ಣ ಹಾಗೂ ಮಧ್ಯಮ ಗಾತ್ರದ ಮೂರು ಲಕ್ಷ ಕೈಗಾರಿಕೆಗಳ ವಿದ್ಯುತ್ ಬಿಲ್ ಸಹಾಯ 125 ಕೋಟಿ ರೂ ಮತ್ತೊಂದು ದೊಡ್ಡ ಮೊತ್ತವಾಗಿದೆ. ಲಾಕ್ ಡೌನ್ ನಲ್ಲಿ ನಡೆಯದಿರುವ ಕೈಗಾರಿಕೆಗಳಿಗೆ ವಿದ್ಯುತ್ ಬಿಲ್ ಸಹಾಯವೆಂಬುದು ಎಂತಹ ಸಹಾಯವಾಗುವುದು? ಅದು ಕೂಡಾ ಕೇವಲ ಸರಾಸರಿ 4,100 ರೂ ಮಾತ್ರವೇ ಆಗುತ್ತದೆ.

ಉಳಿದಂತೆ, ವಾರಿಯರ್ ಗಳಾದ ಆಶಾ, ಅಂಗನವಾಡಿ ಕಾರ್ಯಕರ್ತರಿಗೆ ನೀಡಿರುವ ಪ್ರೋತ್ಸಾಹ ಧನ ಎಂತಹದದು? ಜೀವದ ತೊಂದರೆಯಿದ್ದರೂ ವಾರಿಯರ್ ಗಳಾಗಿ ಕಾರ್ಯನಿರ್ವಹಿಸುವ ಮತ್ತು ಕೃಷಿ ರಂಗದ ಕನಿಷ್ಠ ವೇತನ 424 ರೂ. ಕೂಡಾ ವೇತನವಾಗಿ ಪಡೆಯದ ಆಶಾ, ಅಂಗನವಾಡಿ ಕಾರ್ಯಕರ್ತರಿಗೆ ಘೋಷಿಸಿದ ನೆರವು ಕೇವಲ 2,000 ಮತ್ತು 3,000 ಮಾತ್ರವೇ?! ನಾಚಿಕೇಗೇಡು. ನೊಂದಾಯಿಸಿಕೊಳ್ಳದ ಲಕ್ಷಾಂತರ ಮೀನುಗಾರರಿಗೆ ಪರಿಹಾರವೇ ಇಲ್ಲಾ! ನೊಂದಾಯಿಸಿಕೊಂಡವರಿಗೂ ಕೇವಲ 3,000 ರೂ.

ಕೋಟ್ಯಾಂತರ ಕೃಷಿಕೂಲಿಕಾರರು ಬಡರೈತರು, ಕಾರ್ಮಿಕರು, ಗುತ್ತಿಗೆ ಆಧಾರದಲ್ಲಿ ದುಡಿಯುವವರು, ಕೆಲಸ ಕಳೆದುಕೊಂಡ ಅಕ್ಷರ ದಾಸೋಹ, ಹಾಸ್ಟೆಲ್ ಕೆಲಸಗಾರರು, ಸಾಮಾಜಿಕ ತಾರತಮ್ಯಕ್ಕೊಳಗಾದ ದಲಿತರು, ದೇವದಾಸಿ ಮಹಿಳೆಯರು, ಮಸಣ ಕಾರ್ಮಿಕರು ಹಾಗೂ ಮಂಗಳ ವಾದ್ಯ ಕಲಾವಿದರು, ಲೈಂಗಿಕ ಅಲ್ಪ ಸಂಖ್ಯಾತರು, ಲೈಂಗಿಕ ಕಾರ್ಯಕರ್ತರು, ಮಹಿಳೆಯರು, ಆದಿವಾಸಿಗಳು ಹಾಗೂ ಅಸಹಾಯಕ ವೃದ್ದರು, ನಿರುದ್ಯೋಗಿ ಯುವಜನರು, ವಿದ್ಯಾರ್ಥಿಗಳು, ಅಂಗ ವಿಕಲರು, ಸಾಮಾಜಿಕ ಪಿಂಚಣಿ ಪಡೆಯುವ ಇತರರನ್ನು ಮತ್ತು ಅಲೆಮಾರಿಗಳನ್ನು ಕಣ್ಣೆತ್ತಿ ನೋಡಲು ಕೂಡಾ ಸರಕಾರ ತಯಾರಾಗಿಲ್ಲ ಎಂದಿದೆ.

ಇಂತಹ ಪ್ರಚಾರದ ಗೀಳನ್ನು ಹಾಗೂ ಜನತೆಯನ್ನು ಯಾಮಾರಿಸುವ ಹುನ್ನಾರಗಳನ್ನು ಬಿಟ್ಟು ನಿಜ ಪರಿಹಾರ ಘೋಷಿಸುವಂತೆ ಸಿಪಿಐ(ಎಂ) ರಾಜ್ಯ ಸರಕಾರವನ್ನು ಒತ್ತಾಯಿಸಿದೆ.

ಶ್ರಮಿಕ ಸಿದ್ಧಾಂತಕ್ಕೆ ಸಾವಿಲ್ಲ: ರವೀಂದ್ರ ಭಟ್ಟ ಅಭಿಮತ ಕಾರ್ಮಿಕ ಕರ್ನಾಟಕ ಯೂಟ್ಯೂಬ್ ಗೆ ಚಾಲನೆ



'ಪ್ರಸಕ್ತ ಸನ್ನಿವೇಶದಲ್ಲಿ ಎಡಶಕ್ತಿಗಳಿಗೆ ಹಿನ್ನಡೆ ಆಗಿದೆ ಎಂದು ಕಂಡುಬಂದರೂ ಅದು ಮಂಕು ಕವಿದ ವಾತಾವರಣವೇ ಹೊರತು ಅದು ಸಿದ್ಧಾಂತದ ಸಾವಲ್ಲ ಜನರನ್ನೇ ಕೇಂದ್ರೀಕರಿಸಿಕೊಂಡಿರುವ ಜನಪರ ಸಿದ್ಧಾಂತಕ್ಕೆ ಎಂದೂ ಸಾವಿಲ್ಲ ಎಂದು ಪ್ರಜಾವಾಣಿ ಕಾರ್ಯ ನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಅಭಿಪ್ರಾಯ ಪಟ್ಟರು.

ಭಾನುವಾರ ವರ್ಚುವಲ್ ಮಾದರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ 'ಕಾರ್ಮಿಕ ಕರ್ನಾಟಕ' ಯೂಟ್ಯೂಬ್ ಚಾನಲ್ ಉದ್ಘಾಟಿಸಿ ಮಾತನಾಡಿದರು.

ಕರೋನಾ ಎನ್ನುವ ಸಾಂಕ್ರಾಮಿಕ ರೋಗವನ್ನೇ ಬಂಡವಾಳ ಮಾಡಿಕೊಂಡ ನಮ್ಮ ಆಳುವ ಸರ್ಕಾರಗಳು ಜನರ ಬದುಕನ್ನು ರಕ್ಷಿಸುವ ಬದಲು ಹಲವು ರೀತಿಯ ಕಾನೂನು ತಿದ್ದುಪಡಿಗಳ ಮೂಲಕ ಅವರ ಬದುಕಿನ ಮೇಲೆಯೇ ದಾಳಿ ನಡೆಸುತ್ತಿವೆ.

ಬದಲಾದ ಪರಿಸ್ಥಿತಿಯಲ್ಲಿ 'ಸಾಮಾಜಿಕ ಮಾಧ್ಯಮವನ್ನು ಬಳಸಿಕೊಳ್ಳುವುದು ಅನಿವಾರ್ಯ ಆಗಿದೆ. ಯೂಟ್ಯೂಬ್ ವಾಹಿನಿಯನ್ನು ಕಾರ್ಮಿಕರ ಜ್ಞಾನವೃದ್ಧಿಗೆ ಬಳಸುವ ಉದ್ದೇಶವೇ ಅಭಿನಂದನಾರ್ಹ ಕಾರ್ಯ' ಅದರ ಜೊತೆ ಆಳುವ ಸರ್ಕಾರದ ಜನವಿರೋಧಿ ನೀತಿಗಳನ್ನು ಬಯಲುಗೊಳಿಸುವ ಕೆಲಸವನ್ನು ಇದು ಮಾಡಲಿದೆ ಎನ್ನುವ ಆಶಯ ನಾನು ಹೊಂದಿರುವೆ ಎಂದರು.

'ಕೊರೊನಾ ಸಂಕಷ್ಟ ಕಾಲದಲ್ಲಿ ಜನ ಪ್ರಾಣ, ಉದ್ಯೋಗ, ಆಸ್ತಿ ಎಲ್ಲವನ್ನೂ ಕಳೆದುಕೊಳ್ಳುತ್ತಿದ್ದಾರೆ. ಅತ್ತ ದೇಶದ ಬಿಲಿಯಾಧಿಪತಿಗಳು ಮಾತ್ರ ಸೂಪರ್ ಲಾಭ ಗಳಿಕೆ ಮಾಡಿಕೊಳ್ಳುತ್ತಿದ್ದಾರೆ, ಇಂತಹ ವಿರೋಧಾಭಾಸವನ್ನು ಪ್ರಶ್ನಿಸಬೇಕಾದ ಮಾಧ್ಯಮ, ಕಾರ್ಪೊರೇಟ್ ಬಂಡವಾಳದಾರರ ಪರ ವಕಾಲತ್ತು ವಹಿಸುತ್ತಿದೆ' ಎಂದು ಸಿಐಟಿಯು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ತಪನ್ ಸೇನ್ ವಿಷಾದ ವ್ಯಕ್ತಪಡಿಸಿದರು.

'ಕಾರ್ಪೊರೇಟೀಕರಣ ವಿರುದ್ಧ ಕಾರ್ಮಿಕ ವರ್ಗ ಒಗ್ಗಟ್ಟಿನ ಪ್ರತಿರೋಧ ತೋರಬೇಕಿದೆ, ಈ ದಿಸೆಯಲ್ಲಿ ಕಾರ್ಮಿಕ ಕರ್ನಾಟಕ ಯೂಟ್ಯೂಬ್ ವಾಹಿನಿ ಕಾರ್ಮಿಕ ವರ್ಗವನ್ನು ಜಾಗೃತಗೊಳಿಸಲು ಶ್ರಮಿಸಲಿ' ಎಂದರು.

ಸಿಐಟಿಯು ರಾಜ್ಯಾಧ್ಯಕ್ಷೆ ಎಸ್. ವರಲಕ್ಷ್ಮಿ, ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ, ಕಾರ್ಯದರ್ಶಿ ಡಾ. ಕೆ. ಪ್ರಕಾಶ್, ಕೆ.ಎನ್. ಉಮೇಶ್ ಕಾರ್ಯಕ್ರಮದಲ್ಲಿ ಮಾತನಾಡಿದರು ಸಿಐಟಿಯು ರಾಜ್ಯ ಕಾರ್ಯದರ್ಶಿಗಳಾದ ಕೆ. ಮಹಾಂತೇಶ ಪ್ರಸ್ತಾವಿಕವಾಗಿ ಮಾತನಾಡಿದರ ಸೈಯದ್ ಮುಜೀಬ್ ನಿರ್ವಹಣೆ, ಮಾಲಿನಿ ಮೇಸ್ತಾ ಸ್ವಾಗತ ಮತ್ತು ಮಹೇಶ ಪತ್ತಾರ್ ವಂದನಾರ್ಪಣೆ ಮಾಡಿದರು.

ಸಿಪಿಐ(ಎಂ) ಹಿರಿಯ ಮುಖಂಡ ಕಾಂ.ಕೆ. ಗೋವಿಂದ ಶೆಟ್ಟಿಗಾರ್ ನಿಧನ



ಸಿಪಿಐ(ಎಂ) ಪಕ್ಷದ ಹಿರಿಯ ಮುಖಂಡರು, ಕರ್ನಾಟಕ ಪ್ರಾಂತ ರೈತ ಸಂಘದ ತಾಲೂಕು ಮಾಜಿ ಅಧ್ಯಕ್ಷರು, ಕೋಟೇಶ್ವರ ಗ್ರಾಮ ಪಂಚಾಯತ್ ಮಾಜಿ ಸದಸ್ಯರೂ ಆಗಿದ್ದ ಕಾಂ. ಕೆ. ಗೋವಿಂದ ಶೆಟ್ಟಿಗಾರ್ (88 ವರ್ಷ) ಅವರು ಜೂನ್ 3 ರಂದು ಕೋಟೇಶ್ವರದ ಖಾಸಗಿ ಆಸ್ಪತ್ರೆಯಲ್ಲಿ ವಯೋ ಸಹಜ ಅನಾರೋಗ್ಯದಿಂದ ನಿಧನರಾದರು.

ಕುಂದಾಪುರದ ಪ್ರಭಾಕರ ಟೈಲ್ಸ್ ಕಾರ್ಖಾನೆಯಲ್ಲಿ ಕಾರ್ಮಿಕನಾಗಿ ಕೆಲಸ ಆರಂಭಿಸಿದ ಅವರು ಅನಂತರ ಕೋಟೇಶ್ವರದ ತನ್ನ ಊರಿನಲ್ಲಿ ಸೈಕಲ್ ಅಂಗಡಿಯನ್ನು ತೆರೆದು ಸ್ವಯಂ ಉದ್ಯೋಗದಲ್ಲಿ ಪ್ರಖ್ಯಾತರಾದರು.

1970 ರಲ್ಲಿ ಸಿಪಿಐ(ಎಂ) ಪಕ್ಷದಲ್ಲಿ ರಾಜಕೀಯ ಜೀವನ ಆರಂಭಿಸಿದ ಅವರು ಭೂಸುಧಾರಣೆ ಕಾನೂನು ಜಾರಿಗಾಗಿ, ಗೇಣಿದಾರ ರೈತರ ಭೂಮಿ ಖಾಯಂತಿಗಾಗಿ ನಡೆದ ಹೋರಾಟದಲ್ಲಿ ಸಕ್ರೀಯವಾಗಿದ್ದು ಭೂರಹಿತರಿಗೆ, ಗೇಣಿದಾರರಿಗೆ ಭೂಮಿ ಕೊಡಿಸಿರುವುದು ಅವರ ಮಹತ್ವದ ಹೋರಾಟವಾಗಿತ್ತು. ಕೋಟೇಶ್ವರ ಗ್ರಾಮಪಂಚಾಯತ್‌ಗೆ ಎರಡು ಅವಧಿಗೆ ಸದಸ್ಯರಾಗಿ ಆಯ್ಕೆಯಾಗಿದ್ದ ಅವರು ಪ್ರಾಮಾಣಿಕವಾಗಿ ಜನರ ಸೇವೆಯನ್ನು ಮಾಡಿದರು. ಊರಿನ ಜನರ ಹಲವಾರು ಸಮಸ್ಯೆಗಳನ್ನು ಕಾಂ. ಕರಿಯ ದೇವಾಡಿಗ, ಕಾಂ. ದಾಸಭಂಡಾರಿ ಜೊತೆ ಸೇರಿ ಮಾತುಕತೆಯ ಮೂಲಕ ಇತ್ಯರ್ಥ ಮಾಡಿ ಜನಾನುರಾಗಿಯಾಗಿ ಊರಿನ ಜನರ ಪ್ರೀತಿಗೆ ಪಾತ್ರರಾಗಿದ್ದರು.

ಅವರು ಪತ್ನಿ ಲಕ್ಷ್ಮಿ ಹಾಗು 4 ಪುತ್ರರು ಓರ್ವ ಪುತ್ರಿ ಹಾಗು ಮೊಮ್ಮಕ್ಕಳನ್ನು ಅಗಲಿದ್ದಾರೆ.

ಅಗಲಿದ ಕಾಂ. ಗೋವಿಂದ ಶೆಟ್ಟಿಗಾರ್ ಅವರಿಗೆ ಸಿಪಿಐ(ಎಂ) ಕುಂದಾಪುರ ವಲಯ ಸಮಿತಿ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದೆ.

ಕಾಂ. ಎಸ್. ರಾಮಸ್ವಾಮಿ ನಿಧನ



ಸಿಪಿಐ(ಎಂ)ನ ಅವಿಭಜಿತ ಬಂಗಾರಪೇಟೆ ತಾಲ್ಲೂಕು ಸಮಿತಿಯ ಮತ್ತು ಕೆಜಿಎಫ್ ಘಟಕದ ಮಾಜಿ ಸದಸ್ಯರಾದ ಕಾಂ. ಎಸ್. ರಾಮಸ್ವಾಮಿ (76 ವರ್ಷ) ಅವರು ಜೂನ್ 2, 2021 ರಂದು ನಿಧನರಾದರು.

ಉತ್ತಮ ವಾಗ್ಮಿಯಾಗಿದ್ದ ಕಾಂ. ರಾಮಸ್ವಾಮಿ ಅವರು ಕೆಜಿಎಫ್ ಚಿನ್ನದ ಗಣಿ ಕಾರ್ಮಿಕರ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಹಲವಾರು ಧೀರೋದಾತ್ತ ಹೋರಾಟಗಳಲ್ಲಿ ಭಾಗವಹಿಸಿದ್ದರು. ಸಿಐಟಿಯು ಸಂಯೋಜಿತ ಚಿನ್ನದ ಗಣಿ ಕಾರ್ಮಿಕ ಸಂಘದ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಮೃತ ಸಂಗಾತಿಗೆ ಪಕ್ಷದ ಕೋಲಾರ ಜಿಲ್ಲಾ ಸಮಿತಿ ಭಾವಪೂರ್ಣ ಶ್ರದ್ಧಾಂಜಲಿಯನ್ನು ಸಲ್ಲಿಸಿದೆ. ದುಃಖಿತ ಕುಟುಂಬದ ಸದಸ್ಯರಿಗೆ ಸಂತಾಪಗಳನ್ನು ಸೂಚಿಸುತ್ತದೆ.

ರಾಜ್ಯದಾದ್ಯಂತ ಎಡ ಮತ್ತು ಜಾತ್ಯಾತೀತ ಪಕ್ಷಗಳ ಪ್ರತಿಭಟನೆ ಜಿಲ್ಲೆಯಾದ್ಯಂತ ಸಿಪಿಐ(ಎಂ) ಪ್ರತಿಭಟನೆ



ಎರಡನೇ ಅಲೆ ಸಮರ್ಪಕವಾಗಿ ನಿರ್ವಹಿಸಲು, ಕೋವಿಡ್ ತಡೆಗಟ್ಟಲು, 3ನೇ ಅಲೆಯ ತಡೆಗಾಗಿ ಎಲ್ಲರಿಗೂ ಲಸಿಕೆ ಕೂಡಲೇ ಒದಗಿಸಲು, ಲಾಕ್ ಡೌನ್ ನಿಂದ ಸಂತ್ರಸ್ಥರಾದ ಜನರಿಗೆ ಪರಿಹಾರ ಮುಂತಾದ ಬೇಡಿಕೆಗಳಿಗಾಗಿ ಏಳು ಎಡ ಮತ್ತು ಜಾತ್ಯಾತೀತ ಪಕ್ಷಗಳು ಕರೆ ನೀಡಿರುವ ಪ್ರತಿಭಟನೆಯನ್ನು ಕುಂದಾಪುರದ ಹಂಚು ಕಾರ್ಮಿಕರ ಭವನದ ಎದುರು, ಬೈಂದೂರು, ಬ್ರಹ್ಮಾವರ, ಉಡುಪಿ ಜಿಲ್ಲೆಯ ವಿವಿಧ ಭಾಗಗಳಲ್ಲಿ ಸಿಪಿಎಂ ಕಾರ್ಯಕರ್ತರು ನಡೆಸಿ ಕೇಂದ್ರ-ರಾಜ್ಯ ಸರಕಾರವನ್ನು ಆಗ್ರಹಿಸಿದೆ.

ಎಲ್ಲಾ ನಾಗರಿಕರಿಗೂ ಉಚಿತ ಲಸಿಕೆ ನೀಡಬೇಕು ಲಸಿಕೆಯನ್ನು ದುಪ್ಪಟ್ಟು ಬೆಲೆಗೆ ಕಾಳ ಸಂತೆಯಲ್ಲಿ ಮಾರುತ್ತಿರುವವರನ್ನು ಬಂಧಿಸಿ ಕಠಿಣ ಕ್ರಮ ಜರುಗಿಸಬೇಕು, ಆದಾಯ ತೆರಿಗೆಯಿಂದ ಹೊರಗಿರುವ ಎಲ್ಲಾ ಕುಟುಂಬಗಳಿಗೂ 3 ತಿಂಗಳು ರೂ.10 ಸಾವಿರ ನಗದು ಕೊಡಬೇಕು, ಎಲ್ಲಾ ಕುಟುಂಬಗಳಿಗೂ ಉಚಿತ ಪೌಷ್ಠಿಕಾಂಶ ಪಡಿತರ ಆಹಾರ ಒದಗಿಸಬೇಕು.

ರೈತರ-ಕಾರ್ಮಿಕರ ವಿರೋಧಿ ಕಾನೂನು ರದ್ದು ಮಾಡಬೇಕು, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಕೂಲಿ ರೂ-600/- ಕ್ಕೆ ಹೆಚ್ಚಿಸಿ ನಗರಗಳಿಗೂ ವಿಸ್ತರಣೆ ಮಾಡಬೇಕು. ಕೂಲಿಕಾರರಿಗೆ, ಕಾರ್ಮಿಕರಿಗೆ ದಿನಗೂಲಿ ಮಾಡಲು ಅವಕಾಶ ನೀಡಲು ಖಾಸಗಿ ಆಸ್ಪತ್ರೆಗಳ ದುಬಾರಿ ಬೆಲೆಗಳನ್ನು ನಿಯಂತ್ರಿಸಲು, ಕೋವಿಡ್ ಫ್ರಂಟ್ ಲೈನ್ ಕಾರ್ಯಕರ್ತರಿಗೆ ಸೂಕ್ತ ರಕ್ಷಣೆ ಒದಗಿಸಿ ಪರಿಹಾರ ನೀಡಲು ಒತ್ತಾಯ.

ಕುಂದಾಪುರದ ಹಂಚು ಕಾರ್ಮಿಕ ಭವನದ ಎದುರು ನಡೆದ ಪ್ರತಿಭಟನೆಯಲ್ಲಿ ವಲಯ ಕಾರ್ಯದರ್ಶಿ ಎಚ್. ನರಸಿಂಹ, ಕೆ. ಶಂಕರ್ ಮಾತನಾಡಿದರು. ಪ್ರತಿಭಟನೆಯಲ್ಲಿ ಸುರೇಶ್ ಕಲ್ಲಾಗರ, ಮಹಾಬಲ ವಡೇರಹೋಬಳಿ, ವಿ. ನರಸಿಂಹ, ಬಲ್ಕೀಸ್, ರವಿ ವಿಎಂ ಮುಂತಾದವರಿದ್ದರು.

ಬೈಂದೂರು ಸಿಪಿಎಂ ಕಛೇರಿಯಲ್ಲಿ ನಡೆದ ಪ್ರತಿಭಟನೆಯಲ್ಲಿ ನಡೆದ ಪ್ರತಿಭಟನೆಯಲ್ಲಿ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ವೆಂಕಟೇಶ ಕೋಣಿ, ಮುಖಂಡರುಗಳಾದ ಗಣೇಶ ತೊಂಡೆಮಕ್ಕಿ, ರೊನಾಲ್ಡ್, ಕಟ್ಟಡ ಕಾರ್ಮಿಕ ಸಂಘದ ಮುಖಂಡರು ಭಾಗವಹಿಸಿದ್ದರು.

ಬ್ರಹ್ಮಾವರದ ಕಛೇರಿ ಮತ್ತು ಮನೆಗಳಲ್ಲಿ ಜಿಲ್ಲಾ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ, ಉಡುಪಿ ತಾಲುಕು ಕಾರ್ಯದರ್ಶಿ ಶಶಿಧರ ಗೊಲ್ಲ, ಮುಖಂಡರುಗಳಾದ ಸುಬಾಸ್ ನಾಯಕ್, ರಮೇಶ ಪೂಜಾರಿ ಬಾಗವಹಿಸಿದ್ದು ಉಡುಪಿಯ ಪಡುಕೆರೆ, ಪೆರಂಪಳ್ಳಿ ಮೊದಲಾದ ಕಡೆಗಳಲ್ಲಿ ಪ್ರತಿಭಟನೆ ನಡೆದಿವೆ.



ಉಪ ಮುಖ್ಯಮಂತ್ರಿ ಅಶ್ವತ್ಥ ನಾರಾಯಣ ಹಾಗೂ ಶಾಸಕರುಗಳಾದ ಎಸ್. ರಘು, ರವಿ ಸುಬ್ರಹ್ಮಣ್ಯ, ಸತೀಶ್ ರೆಡ್ಡಿ, ಹಾಗೂ ರವರ ರಾಜಿನಾಮೆ ಪಡೆಯಲು ಸಿಪಿಐಎಂ ಒತ್ತಾಯ

ಉಪಮುಖ್ಯಮಂತ್ರಿ ಶ್ರೀ ಅಶ್ವತ್ಥ ನಾರಾಯಣರವರು ಲಸಿಕೆ ವಿತರಣೆಯಲ್ಲಿ ಜಾತಿ ಭೇದದ ತಾರತಮ್ಯ ಎಸಗುತ್ತಾರೆ. ಬ್ರಾಹ್ಮಣರಿಗೆ ಪ್ರತ್ಯೇಕವಾಗಿ ಲಸಿಕೆ ಹಾಕಿಸಲು ವ್ಯವಸ್ಥೆ ಮಾಡಿದ ಆರೋಪವಿದೆ. ಅದೇ ರೀತಿ, ಬಿಜೆಪಿ ಪಕ್ಷದ ಕಾರ್ಯಕರ್ತರಿಗೆ ಪ್ರತ್ಯೇಕವಾಗಿ ಲಸಿಕೆ ಹಾಕಿಸುವ ರಾಜಕೀಯ ತಾರತಮ್ಯ ಎಸಗಿದ ಆರೋಪವನ್ನು ಶಾಸಕ ಶ್ರೀ ಎಸ್. ರಘು ಹೊತ್ತಿದ್ದಾರೆ. ಶ್ರೀ ರವಿ ಸುಬ್ರಮಣ್ಯರವರು ಲಸಿಕೆ ಮಾರಾಟ ಉತ್ತೇಜನದಲ್ಲಿ ಕಮಿಷನ್ ಪಡೆದ ಆರೋಪ ಎದುರಿಸುತ್ತಿದ್ದಾರೆ ಮಾತ್ರವಲ್ಲಾ, ಶಾಸಕ ಶ್ರೀ ಸತೀಶ್ ರೆಡ್ಡಿ ಬೆಡ್ ಬ್ಲಾಕಿಂಗ್ ದಂದೆಯ ಆರೋಪಿಯಾಗಿದ್ದಾರೆ.

ಇವರೆಲ್ಲರೂ, ಭಾರತದ ಸಂವಿಧಾನದಲ್ಲಿ ನಿಷ್ಠೆ ಇಟ್ಟು ಕಾರ್ಯನಿರ್ವಹಿಸುವುದಾಗಿ ರಾಜ್ಯಪಾಲರ ಹಾಗೂ ಸದನದ ಸಮ್ಮುಖದಲ್ಲಿ ರಾಜ್ಯದ ಜನತೆಯ ಮುಂದೆ ಪ್ರಮಾಣ ಮಾಡಿದವರು, ಅದಕ್ಕೆ ತದ್ವಿರುದ್ಧವಾಗಿ ನಡೆದುಕೊಂಡಿದ್ದಾರೆ.

ಆದ್ದರಿಂದ ಇವರು ಪ್ರಜಾ ಪ್ರತಿನಿಧಿಗಳಾಗಿ ಮುಂದುವರೆಯಲು ಅನರ್ಹರಾಗಿದ್ದು, ಅವರಿಂದ ತಕ್ಷಣವೇ ರಾಜಿನಾಮೆ ಪಡೆಯ ಬೇಕೆಂದು ಮುಖ್ಯ ಮಂತ್ರಿ ಶ್ರೀ ಬಿ.ಎಸ್.ಯಡಿಯೂರಪ್ಪರವರನ್ನು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ)ದ ರಾಜ್ಯ ಸಮಿತಿ ಬಲವಾಗಿ ಒತ್ತಾಯಿಸುತ್ತದೆ.

ರಾಜ್ಯದ ಜನತೆ ಒಂದೆಡೆ ತೀವ್ರ ರೀತಿಯ ಆರ್ಥಿಕ ಮತ್ತು ಕೋವಿಡ್ ಸಂಕಷ್ಟದಲ್ಲಿರುವಾಗ ಎಲ್ಲ ಜನತೆಯನ್ನು ಸಂತೃಪ್ತಿ, ನೆರವಾಗ ಬೇಕಾದ, ಜನತೆಯಿಂದ ಆಯ್ಕೆಯಾದ ಆಡಳಿತ ಪಕ್ಷದ ಈ ಪ್ರಜಾ ಪ್ರತಿನಿಧಿಗಳ ಬೇಜವಾಬ್ದಾರಿಯುತ ನಡೆಗಳು, ರಾಜ್ಯದ ಜನತೆಯನ್ನು ನಾಗರೀಕ ಜಗತ್ತಿನ ಮುಂದೆ ನಾಚಿಕೆಯಿಂದ ತಲೆ ತಗ್ಗಿಸುವಂತೆ ಮಾಡಿವೆ. ಇವು ತೀವ್ರ ನಾಚಿಕೆಗೇಡಿನ ಪ್ರಸಂಗಗಳಾಗಿವೆ ಎಂದು ಸಿಪಿಐಎಂ ಬಲವಾಗಿ ಖಂಡಿಸುತ್ತದೆ.

ಸಂಸದತೇಜಸ್ವಿಸೂರ್ಯಔಷದಿಯಪ್ರಮೋಟರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆನ್ನಲಾಗಿದೆ. ರಾಜ್ಯದಾದ್ಯಂತ ಹಲವು ಜಿಲ್ಲೆಗಳಲ್ಲಿ ರೆಮ್ಡಿಸಿವರ್ ಔಷಧಿ ಕಾಳ ಸಂತೆಯ ದಂಧೆಯ ವಿಚಾರದಲ್ಲಿ ಆಡಳಿತ ಪಕ್ಷದ ಹಾಗೂ ಸಂಘ ಪರಿವಾರದ ಬೆಂಬಲಿಗರು, ಮುಖಂಡರು ಆರೋಪಿಗಳಾಗಿದ್ದಾರೆ.

ಈ ಪ್ರಸಂಗಗಳು ರಾಜ್ಯದ ಜನತೆಯ ನಡುವೆ ತೀವ್ರ ಆತಂಕಗಳನ್ನುಂಟು ಮಾಡಿವೆ. ರಾಜ್ಯದಲ್ಲಿ ಸರಕಾರದ ಆಡಳಿತವಿದೆಯೇ? ಕಾನೂನು - ಸುವ್ಯವಸ್ಥೆ ಇದೆಯೇ? ಎಂಬ ಪ್ರಶ್ನೆಗಳನ್ನು ಇದು ಮುನ್ನೆಲೆಗೆ ತರುತ್ತಿದೆ. ರಾಜ್ಯದಲ್ಲಿ ಸ್ವಜನ ಪಕ್ಷಪಾತ, ಲೂಟಿಕೋರತನ, ಕೊಲೆಪಾತಕ ನಿರ್ಲಕ್ಷ್ಯಗಳು ಮೆರೆಯುತ್ತಿವೆ. ಈ ಎಲ್ಲಾ ಅರಾಜಕತೆಗಳನ್ನು ನಿವಾರಿಸಲು ಇಂತಹ ಕಠಿಣ ಕ್ರಮಗಳ ಅವಶ್ಯಕತೆಯಿದೆ ಎಂದು ಸಿಪಿಐಎಂ ಒತ್ತಾಯಿಸುತ್ತದೆ.

ಇವುಗಳೆಲ್ಲವು, ತಮ್ಮ ಸರಕಾರದ ಪಾತ್ರವೂ ಇವುಗಳಲ್ಲಿ ಅಪ್ರತ್ಯಕ್ಷವಾಗಿ ಇರುವುದರ ಕಡೆ ಬೆರಳು ತೋರುತ್ತವೆ.

ಆದ್ದರಿಂದ, ರಾಜ್ಯದ ಜನತೆ ನಿಜವನ್ನು ತಿಳಿಯುವಂತಾಗಲು, ಈ ಎಲ್ಲ ಪ್ರಕರಣಗಳನ್ನು ರಾಜ್ಯ ಸರಕಾರ ಉನ್ನತ ಮಟ್ಟದ ಸ್ವತಂತ್ರ ನ್ಯಾಯಾಂಗ ತನಿಖೆಗೊಳಪಡಿಸಬೇಕೆಂದು ಅದಕ್ಕಾಗಿ ಕೂಡಲೇ ಆದೇಶವನ್ನು ಹೊರಡಿಸಬೇಕೆಂದು ಸಿಪಿಐಎಂ ಮುಖ್ಯಮಂತ್ರಿಗಳನ್ನು ಆಗ್ರಹಿಸಿದೆ.

ಕೋವಿಡ್ ಸಾವಿನ ದರ ಹೆಚ್ಚಳ ಸಾವಿನ ಆಡಿಟ್ ನಡೆಸಿ: ಸಿಪಿಐ(ಎಂ)

ನಗರದಲ್ಲಿ ಕೋವಿಡ್ ಸಾವಿನ ದರ ಹೆಚ್ಚುತ್ತಿದ್ದು, ಕಳೆದ ಒಂದು ತಿಂಗಳಲ್ಲಿ 0.46 ಶೇಕಡದಿಂದ 6.10 ಶೇಕಡಕ್ಕೆ ಹೆಚ್ಚಳವಾಗಿರುವ ಕಾರಣ ಕೋವಿಡ್ ಸಾವಿನ ಆಡಿಟ್ ನಡೆಸಿ ಕಾರಣಗಳನ್ನು ಪತ್ತೆ ಹಚ್ಚಿ ಸರಿಪಡಿಸಲು ಕೂಡಲೆ ಅಗತ್ಯ ತುರ್ತು ಕ್ರಮವಹಿಸ ಬೇಕೆಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸವಾದಿ) ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಸಮಿತಿಗಳು ಒತ್ತಾಯಿಸಿವೆ.

ಈ ಸಾವುಗಳಿಗೆ ಐಸಿಯು, ವೆಂಟಿಲೇಟರ್, ಔಷಧ ಕೊರತೆ ಜೊತೆಗೆ ಕೆಲವೆಡೆ ವೆಂಟಿಲೇಟರ್ ಗುಣಮಟ್ಟವು ಸಹಾ ಕಾರಣಗಳು ಎಂಬ ದೂರುಗಳಿವೆ. ಇದರ ಜೊತೆಯಲ್ಲೇ ಕೆಲವೆಡೆ ವೆಂಟಿಲೇಟರ್ ಇದ್ದರು ಸಹಾ ಅದರ ನಿರ್ವಹಣೆಗೆ ಅಗತ್ಯ ತಂತ್ರಜ್ಞರ ಕೊರತೆ ಅವುಗಳ ಬಳಕೆಯನ್ನು ಸೀಮಿತಗೊಳಿಸಿದೆ ಎಂಬ ಅಂಶವು ಇದೆ.

ಈ ಎಲ್ಲಾ ಅಂಶಗಳ ಜೊತೆಯಲ್ಲಿ ಕೆಲವು ಕಳಪೆ ಗುಣಮಟ್ಟದ ವೆಂಟಿಲೇಟರ್ಗಳು ಮತ್ತು ಅವುಗಳ ಕಾರ್ಯನಿರ್ವಹಣೆ ಸಮರ್ಥವಾಗಿಲ್ಲದ ಕಾರಣ ಕೆಲವು ಸಾವುಗಳು ಸಂಭವಿಸಿವೆ ➚

ರಿಯಲ್ ವಾರಿಯರ್ಸ್‌ಗಳಿಗೆ ಇಲ್ಲ ಭದ್ರತೆ: ಮೂರು ತಿಂಗಳಿಂದ ವೇತನವೂ ಇಲ್ಲ

ಹಳ್ಳಿಗಳಲ್ಲಿ ಕೋವಿಡ್ ರೋಗಿಗಳ ಜಾಗೃತಿ ಮೂಡಿಸುವಲ್ಲಿ ಮತ್ತು ದತ್ತಾಂಶವನ್ನು ಸಂಗ್ರಹಿಸುವಲ್ಲಿ ಪಟ್ಟುಬಿಡದೆ ತೊಡಗಿಸಿಕೊಂಡು ಕೆಸಲ ಮಾಡುತ್ತಿದ್ದೇವೆ. ನಮಗೆ ನೀಡುತ್ತಿರುವ ವೇತನ ಕೇವಲ 4,000 ರೂ. ಈ ಹಣವನ್ನು ಸಹ ನಮಗೆ ಸಮಯಕ್ಕೆ ಸರಿಯಾಗಿ ನೀಡದಿದ್ದಾಗ ಅದು ನೋವು ತರುತ್ತದೆ. 'ಎಂದು ಯಲಬುರ್ಗಾ ತಾಲ್ಲೂಕಿನ ತಲ್ಲೂರು ಗ್ರಾಮದ ಸಕ್ರವ್ವ ಸರಕಾರದ ನಡೆಗೆ ಬೇಸರ ವ್ಯಕ್ತಪಡಿಸಿದ್ದಾರೆ.

ಗುರುರಾಜ ದೇಸಾಯಿ

ಕೊರೋನಾ ಸೋಂಕು ತೀವ್ರಗತಿಯಲ್ಲಿ ಏರುತ್ತಿರುವ ಕಠಿಣ ಪರಿಸ್ಥಿತಿಯಲ್ಲೂ ಜೀವದ ಹಂಗು ತೊರೆದು ಮುಂಚೂಣಿ ಕೊರೋನಾ ವಾರಿಯರ್ಸ್‌ಗಳು ಶ್ರಮಿಸುತ್ತಿದ್ದಾರೆ. ವೈದ್ಯರು, ದಾದಿಯರು, ಆಶಾ – ಅಂಗನವಾಡಿ ಕಾರ್ಯಕರ್ತೆಯರು, ಪಂಚಾಯತಿ ಸಿಬ್ಬಂದಿ, ಪೊಲೀಸರು, ಕಂದಾಯ ಇಲಾಖೆ, ಆ್ಯಂಬುಲೆನ್ಸ್ ಚಾಲಕ, ನಿರ್ವಹಣಾ ಸಿಬ್ಬಂದಿ, ಬ್ಯಾಂಕ್ ಸಿಬ್ಬಂದಿ ಹೀಗೆ ಅನೇಕ ವಿಭಾಗಗಳಲ್ಲಿ ಮುಂಚೂಣಿ ಕಾರ್ಯಕರ್ತರು ನಮಗೆ ಸಿಗುತ್ತಾರೆ. ಕೊರೋನಾ ಪಾಸಿಟಿವ್ ವ್ಯಕ್ತಿಗಳನ್ನು ಆಸ್ಪತ್ರೆಗೆ ಕರೆತರುವುದು, ಸೋಂಕಿನಿಂದ ಮೃತಪಟ್ಟವರನ್ನು ಸಂಬಂಧಿಕರಿಗೆ ಹಸ್ತಾಂತರಿಸುವುದು, ಜನರಿಗೆ ಮಾರ್ಗದರ್ಶನ, ಊರೂರು ಅಲೆದು ಸರ್ವೆ ಮಾಡುವುದು, ಔಷಧಿ ಕಿಟ್ ವಿತರಿಸಿವುದು ಹೀಗೆ ಆರೋಗ್ಯ ತುರ್ತು ಸೇವೆ ಸಲ್ಲಿಸುತ್ತಿರು ರಿಯಲ್ ವಾರಿಯರ್‌ಗಳಿಗೆ ಮೂರು ತಿಂಗಳಿಂದ ವೇತನವಿಲ್ಲದೇ ಸಂಕಷ್ಟಕ್ಕೆ ಸಿಲುಕಿದ್ದಾರೆ. ಇತ್ತ ಭದ್ರತೆ ಇಲ್ಲದೆ ಇರುವುದು ಆತಂಕವನ್ನು ಸೃಷ್ಟಿಸಿದೆ.

ಕೊವಿಡ್ ನಿರ್ವಹಣೆಯಲ್ಲಿ ತಮ್ಮ ಪ್ರಾಣದ ಹಂಗು ತೊರೆದು ಹೋರಾಡುತ್ತಿರುವ ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು ಸೂಕ್ತ ಸೌಲಭ್ಯ ಇಲ್ಲದೆ ಕಾರ್ಯನಿರ್ವಹಿಸುತ್ತಿದ್ದಾರೆ. ಮೂರು ತಿಂಗಳಿಂದ ವೇತನ ಸಿಗದೆ ಪರಿತಪಿಸುತ್ತಿದ್ದಾರೆ. ಇವರ ವೇತನವನ್ನೆ ನಂಬಿರುವ ಕುಟುಂಬಗಳು ಈಗ ಸಂಕಷ್ಟದಲ್ಲಿವೆ. ಕೋವಿಡ್ ಮೊದಲ ಅಲೆಯಲ್ಲಿ ಜೀವಪಣಕ್ಕಿಟ್ಟು ದುಡಿದ ಆಶಾ ಕಾರ್ಯಕರ್ತೆಯರಿಗೆ ಗೌರವ ಧನದ ಜೊತೆಗೆ ತಲಾ ರೂ. 3 ಸಾವಿರ ಪ್ರೋತ್ಸಾಹಧನ ನೀಡುವುದಾಗಿ ಘೋಷಿಸಿದ್ದ ಸರ್ಕಾರ ಶೇಕಡಾ 50ರಷ್ಟು ಮಂದಿಗೆ ಕೊಟ್ಟು ಉಳಿದವರಿಗೆ ವಂಚಿಸಿದೆ. ಕೊವಿಡ್ 19 ನಿಯಂತ್ರಣಕ್ಕಾಗಿ ಶ್ರಮಿಸಿದ 16 ಮಂದಿ ಆಶಾ ಕಾರ್ಯಕರ್ತೆಯರು ಈವರೆಗೆ ಸಾವನ್ನಪ್ಪಿದ್ದಾರೆ. ಸಾವಿರಕ್ಕೂ ಅಧಿಕ ಮಂದಿ ಕೊರೊನಾ ವೈರಸ್ ಸೋಂಕಿತರಾಗಿದ್ದಾರೆ. ಮಾಸಿಕ ಗೌರವಧನ ಕೊಡುವಲ್ಲಿ ಸೋತಿರುವ ರಾಜ್ಯ ಸರ್ಕಾರ ಆಶಾ ಕಾರ್ಯಕರ್ತೆಯರ ಬದುಕಿನೊಂದಿಗೆ ಚೆಲ್ಲಾಟವಾಡುತ್ತಿದೆ. ಹಳ್ಳಿಗಳಲ್ಲಿ ಕೋವಿಡ್ ರೋಗಿಗಳ ಜಾಗೃತಿ ಮೂಡಿಸುವಲ್ಲಿ ಮತ್ತು ದತ್ತಾಂಶವನ್ನು ಸಂಗ್ರಹಿಸುವಲ್ಲಿ ಪಟ್ಟುಬಿಡದೆ ತೊಡಗಿಸಿಕೊಂಡು ಕೆಲಸ ಮಾಡುತ್ತಿದ್ದೇವೆ. ನಮಗೆ



ನೀಡುತ್ತಿರುವ ವೇತನ ಕೇವಲ 4,000 ರೂ. ಈ ಹಣವನ್ನು ಸಹ ನಮಗೆ ಸಮಯಕ್ಕೆ ಸರಿಯಾಗಿ ನೀಡದಿದ್ದಾಗ ಅದು ನೋವು ತರುತ್ತದೆ. 'ಎಂದು ಯಲಬುರ್ಗಾ ತಾಲ್ಲೂಕಿನ ತಲ್ಲೂರು ಗ್ರಾಮದ ಸಕ್ರವ್ವ ಸರಕಾರದ ನಡೆಗೆ ಬೇಸರ ವ್ಯಕ್ತಪಡಿಸಿದ್ದಾರೆ.

ಕಳೆದ ವರ್ಷ 25, ಈ ವರ್ಷ 19 ಅಂಗನವಾಡಿ ಕಾರ್ಯಕರ್ತೆ ಯರು ಸಾವಿಗೀಡಾಗಿದ್ದಾರೆ. ಇದುವರೆಗೆ ಐವರಿಗೆ ಮಾತ್ರ ಪರಿಹಾರ ನೀಡಲಾಗಿದೆ. 15 ಜನರಿಗೆ ಪರಿಹಾರ ನೀಡಲು ತಾಂತ್ರಿಕ ಕಾರಣದಿಂದ ವಿಳಂಬವಾಗಿದೆ ಎಂದು ಇಲಾಖೆ ಕೈ ಚೆಲ್ಲಿ ಕುಳಿತಿದೆ. ಕೆಲಸ ಮಾಡಿ ಎಂದು ಒತ್ತಡ ಹೇರುವ ಸರಕಾರ ಮೌನ ವಹಿಸಿದೆ. ಅನೇಕ ಕಡೆಗಳಲ್ಲಿ ಗ್ಲೌಸ್, ಸ್ಯಾನಿಟೈಸರ್, ಪಿಪಿಇ ಕಿಟ್ ಇಲ್ಲದೆ ಆಶಾ – ಅಂಗನವಾಡಿ ನೌಕರರು ಕಾರ್ಯನಿರ್ವಹಿಸುತ್ತಿದ್ದಾರೆ. ಇವರಿಗೆ ಬೇಕಾದ ಆರೋಗ್ಯ ಸೌಲಭ್ಯಗಳನ್ನು ಸರಕಾರ ನೀಡಿಲ್ಲ.

ಕೊರೋನಾ ಸೋಂಕಿನ ತೀವ್ರಗತಿಯ ನಡುವೆಯೂ ಜೀವದ ಹಂಗು ತೊರೆದು ಕಾರ್ಯನಿರ್ವಹಿಸುತ್ತಿರುವ 108 ಆ್ಯಂಬುಲೆನ್ಸ್ ಸಿಬ್ಬಂದಿಗಳು ಹಗಲಿರುಳು ಶ್ರಮಿಸುತ್ತಿದ್ದಾರೆ. ಆದರೆ, ಮಾರ್ಚ್ ತಿಂಗಳಿಂದ ವೇತನ ಸಿಗದೆ ರಾಜ್ಯದ 3300 ನೌಕರರು ಜೀವನ ನಿರ್ವಹಣೆಗೂ ಪರದಾಡುತ್ತಿದ್ದಾರೆ. ಅಷ್ಟೇ ಅಲ್ಲ, ಕಳೆದ ವರ್ಷ ಸರ್ಕಾರ ಮುಂಚೂಣಿ ಕೊರೋನಾ ವಾರಿಯರ್ಸ್‌ಗೆ ಪ್ರತಿದಿನ ನೀಡುತ್ತಿದ್ದ 500 ವಿಶೇಷ ಭತ್ಯೆಯೂ ಬಂದ್ ಆಗಿದೆ. ಜತೆಗೆ, ಪಿಪಿಇ ಕಿಟ್, ಮಾಸ್ಕ್, ಸ್ಯಾನಿಟೈಸರ್ ಸೇರಿದಂತೆ ಜೀವರಕ್ಷಕ ಸಾಮಗ್ರಿಗಳನ್ನೂ ಪೂರೈಸಿಲ್ಲ. ಇದರಿಂದ 108 ವಾಹನದ ಸಿಬ್ಬಂದಿ ನಿತ್ಯವೂ ಆತಂಕದಲ್ಲೇ ಕಾರ್ಯನಿರ್ವಹಿಸುತ್ತಿದ್ದಾರೆ. ಆ್ಯಂಬುಲೆನ್ಸ್ ಚಾಲಕ, ನಿರ್ವಹಣಾ ಸಿಬ್ಬಂದಿಗೆ ಕೋವಿಡ್–19 ಪಿಪಿಇ ಕಿಟ್‌ಗಳು ಲಭ್ಯವಿಲ್ಲ. ಬದಲಿಗೆ ಹೆರಿಗೆ ಕಿಟ್ ಅಥವಾ ಎಚ್‌ಐವಿ ಕಿಟ್‌ಗಳನ್ನು ಧರಿಸಿಕೊಂಡು ಕಾರ್ಯಾಚರಣೆ ಮಾಡುತ್ತಿದ್ದಾರೆ. ಪರಿಣಾಮ ಅವರೆಲ್ಲರಿಗೆ ಆತಂಕ ಎದುರಾಗಿದ್ದು. ಈ ಮಧ್ಯೆ ರೋಗಿಗಳು ಕರೆ ಮಾಡಿದರೆ ಸ್ಪಂದಿಸಲು ಹಿಂದೇಟು ಹಾಕುವಂತಾಗಿದೆ.

ಕೊರೋನಾ ವೈರಸ್ ಸೋಂಕು ಹರಡಿದ ಮೇಲೆ ಶಿಕ್ಷಣ ವ್ಯವಸ್ಥೆಯೇ ತಲೆಕೆಳಗಾಗಿದೆ. ರಾಜ್ಯದಲ್ಲಿ ಒಟ್ಟು 600 ಶಿಕ್ಷಕರು. ಕೊರೋನಾದಿಂದ ಸಾವನ್ನಪ್ಪಿದ್ದರೆ, ಒಂದುವರೆ ತಿಂಗಳಲ್ಲಿ 175 ಜನ ವಕೀಲರು ಕೋವಿಡ್‌ನಿಂದಾಗಿ ನಿಧನರಾಗಿದ್ದಾರೆ. ಚುನಾವಣೆ ಕರ್ತವ್ಯಕ್ಕೆ ನಿಯೋಜನೆಗೊಂಡಿದ್ದ 55 ಶಿಕ್ಷಕರು ಕೊರೊನಾ ಸೋಂಕಿಗೆ ಬಲಿಯಾಗಿದ್ದರು. ಅನೇಕರ ಆರೋಗ್ಯ ಸ್ಥಿತಿ ಗಂಭೀರವಾಗಿದೆ. ರಾಜ್ಯದಲ್ಲಿ 25ರಿಂದ 30 ಸಾವಿರ ಶಿಕ್ಷಕರು ಕೋವಿಡ್ ಸಂಬಂಧಿ ಕಾರ್ಯಚಟುವಟಿಕೆಯಲ್ಲಿ ತೊಡಗಿಕೊಂಡಿದ್ದಾರೆ. ಆದರೆ, ಈ ಶಿಕ್ಷಕರಿಗೆ ಯಾವುದೇ ಸುರಕ್ಷತೆಯೂ ಇಲ್ಲ! ಕರೊನಾ ಮೊದಲ ಅಲೆ, ಲಾಕ್‌ಡೌನ್ ಹಾಗೂ ವಿದ್ಯಾಗಮ ಜಾರಿ ಸಂದರ್ಭದಲ್ಲೂ ಸುಮಾರು ನೂರಾರು ಶಿಕ್ಷಕರು ನಿಧನರಾಗಿದ್ದರು. ಕಳೆದ ಏಪ್ರಿಲ್‌ನಲ್ಲಿ ಆರಂಭವಾದ ಕೋವಿಡ್ ಎರಡನೇ ಅಲೆಯಿಂದ ರಾಜ್ಯದಲ್ಲಿ ಈವರೆಗೆ ಅಂದಾಜು 175ಕ್ಕೂ ಹೆಚ್ಚು ವಕೀಲರು ಹಾಗೂ 15ಕ್ಕೂ ಹೆಚ್ಚು ವಿವಿಧ ನ್ಯಾಯಾಲಯಗಳ ಸಿಬ್ಬಂದಿ ಸಾವನ್ನಪ್ಪಿದ್ದಾರೆ.. ಇದೇ ವೇಳೆ, ರಾಜಧಾನಿ ಬೆಂಗಳೂರಿನಲ್ಲಿಯೇ ಸುಮಾರು 70 ಮಂದಿ ವಕೀಲರು ಕೊರೊನಾಗೆ ಬಲಿಯಾಗಿರುವ ಆಘಾತಕಾರಿ ಮಾಹಿತಿಯೂ ಲಭ್ಯವಾಗಿದೆ.

ಕೊರೋನಾ ಮೊದಲನೆ ಅಲೆಯಲ್ಲಿ ಕರ್ನಾಟಕದ 61 ವೈದ್ಯರು ಸಾವನ್ನಪ್ಪಿದ್ದರು. ಎರಡನೇ ಅಲೆಯಲ್ಲಿ 08 ಜನ ಸಾವನ್ನಪ್ಪಿದ್ದಾರೆ. ಸಾವನ್ನಪ್ಪಿದವರಿಗೆ ಸೂಕ್ತ ಸಮಯದಲ್ಲಿ ಬೆಡ್ ಮತ್ತು ಚಿಕಿತ್ಸೆ ದೊರೆತಿರಲಿಲ್ಲ, ಅವರೆಲ್ಲಾ ಕೊರೋನಾ ವಾರಿಯರ್ಸ್ ಎಂದು ಸರಕಾರ ಪರಿಗಣಿಸಿದೆ. ಕೊರೊನಾ ಸಂದರ್ಭದಲ್ಲಿ ಕೃಷಿ ಇಲಾಖೆಯನ್ನು ಅಗತ್ಯ ಸೇವೆ ವ್ಯಾಪ್ತಿಗೆ ಒಳಪಡಿಸಲಾಗಿದೆ. ಹೀಗಾಗಿ ಲಾಕ್‌ಡೌನ್ ಸಂದರ್ಭದಲ್ಲಿಯೂ ಕೃಷಿ ಇಲಾಖೆಯ ಸಿಬಂದಿ ಗ್ರಾಮೀಣ ಭಾಗದಲ್ಲಿ ರೈತರೊಂದಿಗೆ ನಿರಂತರ ಸಂಪರ್ಕ ಇರಿಸಿಕೊಂಡಿದ್ದಾರೆ. ಹೀಗಾಗಿ ಇವರೂ ಕೊರೊನಾ ಬಾಧಿತರಾಗಿದ್ದು, ಕರ್ತವ್ಯ ಸಂದರ್ಭದಲ್ಲಿ ಸೋಂಕಿನಿಂದ 9 ಜನ ಸಾವಿಗೀಡಾಗಿದ್ದಾರೆ. ಆದರೆ ಪರಿಹಾರ ಸಿಕ್ಕಿಲ್ಲ. ಪೊಲೀಸರು ಮುಂಚೂಣಿ ಯೋಧರಾಗಿದ್ದು, ಎರಡು ವರ್ಷಗಳಲ್ಲಿ 146 ಮಂದಿ ಮೃತಪಟ್ಟಿದ್ದಾರೆ. ಕಳೆದ ವರ್ಷ 103, ಈ ವರ್ಷ 43 ಜನ ಪೊಲೀಸರು ಜೀವ ತೆತ್ತಿದ್ದಾರೆ. ಗೃಹ ಸಚಿವ ಬಸವರಾಜ ಬೊಮ್ಮಾಯಿ ಮತ್ತು ಡಿಜಿಪಿ ಪ್ರವೀಣ್ ಸೂದ್ ಮುತುವರ್ಜಿ ವಹಿಸಿದ್ದು, ಮೃತ ಪೊಲೀಸರ ಕುಟುಂಬಕ್ಕೆ 30 ಲಕ್ಷ ರೂ. ವಿಮೆ ಪರಿಹಾರ ಒದಗಿಸುವ ಕೆಲಸ ಮಾಡಲಾಗುತ್ತಿದೆ ಎಂದು ಪ್ರವೀಣ್ ಸೂದ್ ತಿಳಿಸಿದ್ದಾರೆ.

ಕಂದಾಯ ಇಲಾಖೆ ಕೊರೊನಾ ನಿಯಂತ್ರಣದಲ್ಲಿ ಮಾತೃ ಇಲಾಖೆಯಾಗಿ ಕಾರ್ಯ ನಿರ್ವಹಿಸುತ್ತಿದೆ. ಗ್ರಾಮೀಣ ಮಟ್ಟದಲ್ಲಿ ಕಂದಾಯ ಇಲಾಖೆಯ ಅಧಿಕಾರಿಗಳು ಜನರೊಂದಿಗೆ ನೇರವಾಗಿ ಬೆರೆಯುತ್ತಿದ್ದಾರೆ. ಈ ವರೆಗೆ 43 ಮಂದಿ ಕೊರೊನಾದಿಂದ ಜೀವ ಕಳೆದುಕೊಂಡಿದ್ದಾರೆ. ಆದರೆ ಇದುವರೆಗೆ ಯಾರಿಗೂ ಸರಕಾರದಿಂದ ಪರಿಹಾರ ದೊರೆತಿಲ್ಲ. ಬ್ಯಾಂಕ್ ನೌಕರರಲ್ಲಿ ಬಹಳಷ್ಟು ಮಂದಿಗೆ ಕೋವಿಡ್ ಸೋಂಕು ತಗಲಿದ್ದು, ರಾಜ್ಯದಲ್ಲಿ ಎಷ್ಟುಜನ ಮೃತರಾಗಿದ್ದಾರೆ ಎಂದು ಅಧಿಕೃತ ಮಾಹಿತಿ ಸಿಕ್ಕಿಲ್ಲ. ಬ್ಯಾಂಕ್ ಆಡಳಿತಾಧಿಕಾರಿಗಳ ಒತ್ತಡದಲ್ಲಿ ಸಿಬ್ಬಂದಿಗಳು ಕೆಲಸವನ್ನು ನರ್ವಹಿಸುತ್ತಿದ್ದು, ಅನೇಕರು ಮಾನಸಿಕ ಖಾಯಿಲೆಗೆ ಒಳಗಾಗಿ ರಕ್ತದೊತ್ತಡ ಮತ್ತು ಸಕ್ಕರ ಖಾಯಿಲೆ ಪ್ರಮಾಣದಲ್ಲಿ ಏರುಪೇರಾಗುತ್ತಿದೆ ಎಂದು ಸಿಬ್ಬಂದಿಗಳು ಅಳಲು ತೋಡಿಕೊಂಡಿದ್ದಾರೆ.

ಕರೋನಾ ಪ್ರೆಂಟ್ ಲೈನ್ ವರ್ಕ್ ರ್ಸ್ ಗೆ ರಾಜ್ಯದಲ್ಲೆಡೆ ಸನ್ಮಾನ, ಹಣದ ಹಂಚಿಕೆ ಮಾಡಿದರೆ ಅವರಿಗೆ ಗೌರವ ಕಟ್ಟೊಂಗೆ ಆಗುತ್ತಾ, ಆಶಾ ಕಾರ್ಯಕರ್ತೆಯರಿಗೆ ಪ್ರೋತ್ಸಾಹ ಧನವನ್ನು 3 ತಿಂಗಳಿಂದ ಪಾವತಿಯಾಗಿಲ್ಲ, ನಿವೃತ್ತಿ ಸೌಲಭ್ಯ ವಿಲ್ಲ, ಹೆರಿಗೆ ರಜೆ ಇಲ್ಲ, ಸಾದಾರಣಾ ರಜೆಗಳಿಲ್ಲ, ಕನಿಷ್ಠ ವೇತನವಿಲ್ಲ, ಕರೋನಾ ಕೆಲಸಕ್ಕೆ ಹೋಗುವಾಗ ಕನಿಷ್ಠ ಮಾಸ್ಕ್, ಸ್ಯಾನಿಟೈಜರ್ ಮತ್ತು ಆಕ್ಸಿಮೀಟರ್ ಇಲ್ಲ, ಬಸ್ ಚಾರ್ಜ್ ಇಲ್ಲ, ಸಮಯಕ್ಕೆ ಸರಿಯಾಗಿ ಊಟ, ಕುಡಿಯುವ ನೀರಿಲ್ಲದೇ ದುಡಿಯುವ ಈ ಬಡ, ಗ್ರಾಮಾಂತರ ಪ್ರದೇಶದ ಮಹಿಳೆಯರು, ಆದೇ ರೀತಿ ಅಂಗನವಾಡಿ,108 ರಲ್ಲಿ ದುಡಿಯುವ ಚಾಲಕರು, ಸಿಬ್ಬಂದಿ ಗ್ರಾಮಪಂಚಾಯಿತಿ ನೌಕರರು 3 ತಿಂಗಳಿಂದ ವೇತನವಿಲ್ಲದೇ ದುಡಿಯುತ್ತಿದ್ದಾರೆ, 2015 ರಿಂದಲೂ ನಿವೃತ್ತಿ ಯಾದ ಅಂಗನವಾಡಿ ನೌಕರರಿಗೆ ಕೊಡಬೇಕಾದ ನಿವೃತ್ತಿ ವೇತನ ಕೊಡದೇ ಇವರ ಬೇಡಿಕೆಗಳಿಗೆ ಸಂಬಂಧಿಸಿ ಆಯಾ ಇಲಾಖೆ ಬಜೆಟ್ ಗೆ ಶಿಫಾರಸ್ಸು ಮಾಡಿದಾಗ ಶಿಫಾರಸ್ಸು ಆದ ವಿಚಾರಗಳಿಗೆ ಅನುದಾನ ಕೊಡಬೇಕೆಂದೂ ಈ ಜನಪ್ರತಿನಿದಿಗಳು ಕೇಳಿದ ಉದಾಹರಣೆಗಳಿಲ್ಲ. ಹಾಗಾಗಿ ಕೋವಿಡ್ ವಾರಿಯರ್‌ಗಳಿಗೆ ಕೊಡಬೇಕಾದ ವೇತನವನ್ನು ಸರಕಾರ ಕೊಡದಿರುವುದು ಸರಕಾರದ ಹೀನ ಕೃತ್ಯವನ್ನು ತೋರಿಸುತ್ತದೆ ಎಂದು ಸಿಐಟಿಯು ರಾಜ್ಯಾಧ್ಯಕ್ಷೆ ಎಸ್. ವರಲಕ್ಷ್ಮಿ ಆರೋಪಿಸಿದ್ದಾರೆ.

ಎಂಬ ವರದಿಗಳಿವೆ.

ವೆಂಟಿಲೇಟರ್ ಮೇಲೆ ಹೋದ ಬಹುತೇಕ ರೋಗಿಗಳು ಬದುಕಿಲ್ಲ ಎಂಬ ವರದಿಗಳಿವೆ. ಪಿಎಂ ಕೇರ್ಸ್ ನಿಧಿಯಿಂದ ಎಷ್ಟು ವೆಂಟಿಲೇಟರ್ ಗಳು ಸರಬರಾಜಾಗಿವೆ, ಅವುಗಳ ಕಾರ್ಯಕ್ಷಮತೆ ಹೇಗಿದೆ ಎಂಬುದನ್ನು ಸಹಾ ಸ್ಪಷ್ಟ ಪಡಿಸಬೇಕಾದ ಅಗತ್ಯವಿದೆ. ಇತ್ತೀಚೆಗೆ ಮುಂಬೈ ಹೈಕೋರ್ಟ್‌ನ ಔರಂಗಾಬಾದ್ ಪೀಠವು ಪಿಎಂ ಕೇರ್ಸ್ ನಿಧಿಯ ವೆಂಟಿಲೇಟರ್ ಗಳ ಗುಣಮಟ್ಟ ಕಾರ್ಯಕ್ಷಮತೆ ಬಗ್ಗ ನಡೆಸಿರುವ ವಿಚಾರಣೆಯಲ್ಲಿ ಅವುಗಳ ಕಾಯ9ಕ್ಷಮತೆ ನಿರೀಕ್ಷಿತ ಪ್ರಮಾಣದಲ್ಲಿ ಇಲ್ಲ ಎಂಬುದು ಕಂಡು ಬಂದಿದೆ. ಈ ಎಲ್ಲಾ ಕಾರಣಗಳಿಂದ ಕೋವಿಡ್ ಸಾವಿನ ಆಡಿಟ್ ಅಗತ್ಯ ಎಂದು ಸಿಪಿಐ(ಎಂ) ಒತ್ತಾಯಿಸಿದೆ.

ಹರಿದು ಹಂಚುವ ಚೂರು ಪಾರು ಪ್ಯಾಕೇಜ್ ಸಂಕಷ್ಟ ಪರಿಹರಿಸದು ಸಿಪಿಐ(ಎಂ)

ಮುಖ್ಯಮಂತ್ರಿಯವರು ಪ್ರಕಟಿಸಿರುವ 363 ಕೋಟಿ ರೂಗಳ 2ನೇ ಪ್ಯಾಕೇಜ್ ಹರಿದು ಹಂಚುವ ಚೂರು ಪಾರು ಪ್ಯಾಕೇಜ್ ಆಗಿದೆ ಮತ್ತು ಜನತೆಯ ಸಂಕಷ್ಟಕ್ಕೆ ಪರಿಹಾರ ನೀಡುವುದಿಲ್ಲ ಎಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಸಮಿತಿಗಳು ವಿಶ್ಲೇಷಿಸಿವೆ.

ಮೊದಲನೆ ಅರೆ ಬರೆ ಪ್ಯಾಕೇಜ್ ಪ್ರಕಟಿಸಿದ್ದ ರಾಜ್ಯ ಬಿಜೆಪಿ ಸರ್ಕಾರವು ಎರಡನೆ ಪ್ಯಾಕೇಜ್‌ನಲ್ಲಾದರೂ ಜನತೆಯ ಕೋರಿಕೆಯಂತೆ ಪರಿಹಾರ ನೀಡಬಹುದೆಂಬ ಜನತೆಯ ನಿರೀಕ್ಷೆಯನ್ನು ಹುಸಿಗೊಳಿಸಿದೆ. ಈ ಸರ್ಕಾರದ ಮೇಲೆ ಯಾವುದೆ ಭರವಸೆ ಇಡಲು ಸಾಧ್ಯವಿಲ್ಲ ಎಂಬುದನ್ನು ಪದೆ ಪದೆ ರಾಜ್ಯ ಸರ್ಕಾರವು ಸಾಬೀತು ಮಾಡುತ್ತಿದೆ ಎಂದಿದೆ ಸಿಪಿಐ(ಎಂ).

ವಿವಿಧ ವಿಭಾಗಗಳಿಗೆ ಪರಿಹಾರ ನೀಡಲಾಗಿದೆ ಎಂಬ ತೋರಿಕೆಯ ಪ್ಯಾಕೇಜ್ ಇದಾಗಿದೆ. ಮೊದಲ ಪ್ಯಾಕೇಜ್ ಪ್ರಕಟಿಸಿದ ನಂತರ ಅದನ್ನು ಕೆಲವು ವಿಭಾಗಗಳ ಬಿಪಿಎಲ್ ಕಾರ್ಡದಾರರಿಗೆ ಮಾತ್ರ ಜಾರಿಮಾಡುವ ಶರತ್ತು ವಿಧಿಸಿ ಬಹುತೇಕರಿಗೆ ನೇರವು ದೊರೆಯದಂತೆ ಮಾಡಿದೆ. ಆದರೂ ತಾನು ಪರಿಹಾರ ನೀಡಿದ್ದೇವೆ ಎಂಬ ಹುಸಿ ಪ್ರಚಾರ ಮಾಡುತ್ತಿದೆ. ಅದರ ಮುಂದುವರಿದ ಪ್ರಕ್ರಿಯೆ ಇದಾಗಿದೆ ಎಂದು ಸಿಪಿಐ(ಎಂ) ಟೀಕಿಸಿದೆ.

ಈಗಲಾದರೂ ಸರ್ಕಾರವು ಎಚ್ಚೆತ್ತು ಕನಿಷ್ಠ ಹದಿನೈದು ಸಾವಿರ ಕೋಟಿ ರೂಗಳ ಪ್ಯಾಕೇಜ್ ನೀಡಿ ಪ್ರತಿ ಕುಟುಂಬಕ್ಕೂ ಹತ್ತು ಸಾವಿರ ನೇರ ನಗದು ವರ್ಗಾವಣೆ ಮಾಡಬೇಕೆಂದು ಹಾಗು ಈಗಾಗಲೆ ಪ್ರಕಟಿಸಿರುವ ಪ್ಯಾಕೇಜ್ ಅನ್ನು ಬಿಪಿಎಲ್ ಷರತ್ತು ರಹಿತವಾಗಿ ಜಾರಿ ಗೊಳಿಸಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ. ಅಸಂಘಟಿತ ವಲಯದ ಎಲ್ಲಾ ಕಾರ್ಮಿಕರಿಗೂ ಪರಿಹಾರ ನೀಡಲು ಅಗತ್ಯ ಕ್ರಮವಹಿಸಬೇಕೆಂದು ಆಗ್ರಹಿಸಿದೆ.

ಅತಿಥಿ ಅಂಕಣ



ಡಾ. ಸಬಿತಾ ಬನ್ನಾಡಿ


ಉತ್ತರ ಕನ್ನಡದ ಸಿದ್ಧಾಪುರದ ಮಹಾತ್ಮಗಾಂಧಿ ಶತಾಬ್ಧಿ ಪದವಿ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕನಾಗಿದ್ದ ವಿಠ್ಠಲ್ ಅಲ್ಲಿನ ವಿದ್ಯಾರ್ಥಿಗಳಿಗಾಗಿ, ಕಾಲೇಜಿಗಾಗಿ ಮಾಡಿದ ಕೆಲಸವೂ ಸಣ್ಣದಲ್ಲ. ವಿದ್ಯಾರ್ಥಿಗಳಿಂದ ಜಿಲ್ಲೆಯ ಲೇಖಕರ ಕೃತಿ, ಹಸ್ತಪ್ರತಿ, ಜಾನಪದ ಸಾಹಿತ್ಯ ಸಂಗ್ರಹ, ಜಾನಪದ ಕಲೆಗಳ ಸಂಗ್ರಹ ಹಾಗೂ ಎಲ್ಲಕ್ಕಿಂತ ಹೆಚ್ಚಾಗಿ ಹಳ್ಳಿ ಪದಕೋಶ ಎಂಬ ಸುಮಾರು ಐದು ಸಾವಿರ ಪದಗಳ ಕೋಶಗಳನ್ನು ಸಿದ್ಧ ಪಡಿಸಿದ್ದರೂ ಎಲ್ಲೂ ಪ್ರಚಾರ ಪಡೆಯದೇ ಇನ್ನೂ ಸಾವಿರಾರು ಕೆಲಸ ಬಾಕಿ ಇದೆ. ಆಮೇಲೆ ಅವುಗಳನ್ನು ಪ್ರಕಟಿಸಬೇಕು ಎಂಬ ಯೋಜನೆ ಹೊಂದಿದ್ದ. ಆ ಕಾಲೇಜಿನ ಲೈಬ್ರೇರಿಯ ಒಂದು ಭಾಗವನ್ನು ಜಿಲ್ಲೆಯ ಎಲ್ಲಾ ಲೇಖಕರ ಬರಹಗಳ ಸಂಗ್ರಹಕ್ಕೆ ಮೀಸಲಿರಿಸಿ ಮನೆ ಮನೆಗೆ ಹೋಗಿ ಸಂಗ್ರಹಿಸಲಾಗಿತ್ತು.

ಪ್ರೀತಿ ಮತ್ತು ಚಿಂತನೆಯ ಚಿಲುಮೆ – ಡಾ. ವಿಠ್ಠಲ್ ಭಂಡಾರಿ

ಎಷ್ಟೆಲ್ಲಾ ಕೆಲಸ ಮಾಡಿಯೂ ಪ್ರಚಾರದಿಂದ ದೂರ ಉಳಿಯುವ ವ್ಯಕ್ತಿಗಳು ಈಗ ಅಪರೂಪದಲ್ಲಿ ಅಪರೂಪ. ಹೀಗೆ ಒಂದು ಸಂಸ್ಥೆಯೇ ತಾನಾಗಿ ದುಡಿದಾತ ಡಾ.ವಿಠ್ಠಲ ಭಂಡಾರಿ. ಕೋವಿಡ್ ಹದ್ದು ಆತನನ್ನು ಅಪಹರಿಸಿದಾಗ ಆತನಿಗೆ ಕೇವಲ ಐವತ್ತೂರು. ಸದಾ ಒಂದಲ್ಲಾ ಒಂದು ಯೋಜನೆ ತಲೆಯಲ್ಲಿ ಇಟ್ಟುಕೊಂಡು ಅದನ್ನು ಕಾರ್ಯಗತಗೊಳಿಸಲು ದಣಿವಿಲ್ಲದೇ ದುಡಿಯುತ್ತಿದ್ದ ವಿಠ್ಠಲ್, ತೀರಾ ಹತಾಶರಾದವರಲ್ಲಿಯೂ ಭರವಸೆಯ ದಾರಿಯೊಂದನ್ನು ಕಾಣಿಸಬಲ್ಲ ಚೇತನವೇ ಆಗಿದ್ದ.

ವಿಠ್ಠಲ್ ಕನ್ನಡ ಎಂ.ಎ. ಮಾಡಲು ಕುವೆಂಪು ವಿಶ್ವವಿದ್ಯಾಲಯಕ್ಕೆ ಬಂದಾಗಿನಿಂದಲೂ ನನಗೆ ಪರಿಚಯ. ಅಲ್ಲಿಗೆ ಬರುತ್ತಿದ್ದಂತೆಯೇ ಶಿವಮೊಗ್ಗ ಜಿಲ್ಲೆಯಲ್ಲಿ ಅಷ್ಟು ಪ್ರಬಲವಾಗಿರದಿದ್ದ ಎಸ್.ಎಫ್.ಐ ಸಂಘಟನೆ ಕಟ್ಟುವ, ವಿಶ್ವವಿದ್ಯಾಲಯದಲ್ಲಿ ಕಟ್ಟುವ ಕಾಯಕದಲ್ಲಿ ತಕ್ಷಣವೇ ತೊಡಗಿಕೊಂಡ ಆತನ ಚುರುಕುತನ ನೋಡಿದ್ದೆ. ನಮ್ಮ ಮನೆಯ ಮಕ್ಕಳಂತೆ ಆತ ಮತ್ತು ಆತನ ಗೆಳೆಯ ರಂಗನಾಥ್ ಕುಳಗಟ್ಟೆ ಆಗಿಬಿಟ್ಟಿದ್ದರು. ಮುಂದೆ ಆತ ಸಂಘಟಿಸಿದ ಹಲವು ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದರೂ ಆತನ ಕಾರ್ಯಬಾಹುಳ್ಯದ ಬಗೆಗೆ ನನಗೆ ತಿಳಿದಿದ್ದು ಕಡಿಮೆಯೇ. ಅದರಲ್ಲೂ ಕಾಲೇಜಿನ ವಿದ್ಯಾರ್ಥಿಗಳಿಗಾಗಿ ಆತ ಹಮ್ಮಿಕೊಳ್ಳುತ್ತಿದ್ದ ವಿನೂತನ ಯೋಜನೆಗಳನ್ನು ತಿಳಿದಾಗ ಆತನಿಂದ ನಾವು ಕಲಿಯಬೇಕಾದುದು ಎಷ್ಟೊಂದು ಇದೆಯಲ್ಲವೇ ಎಂದು ಅನ್ನಿಸುತ್ತಿದೆ.

2010ರಲ್ಲಿ ತನ್ನ ತಂದೆ ಲೇಖಕ ಡಾ.ಆರ್.ವಿ.ಭಂಡಾರಿಯವರ ನೆನಪಿನಲ್ಲಿ ಹೊನ್ನಾವರದ ಬಳಿಯ ಕೆರೆಕೋಣ ಎಂಬ ಹಳ್ಳಿಯಲ್ಲಿ 'ಸಹಯಾನ' ಸಂಸ್ಥೆ ಹುಟ್ಟುಹಾಕಿದ. ತಳಜಾತಿ ಮತ್ತು ವರ್ಗದ ಜೀವನಾನುಭವದ ಸಾನ್ನಿಧ್ಯವು ಆರ್.ವಿ.ಭಂಡಾರಿಯವರಲ್ಲಿ ಸದಾ ಅಂತವರಿಗಾಗಿ ದುಡಿಯುವಂತೆ ಪ್ರೇರೇಪಿಸಿತ್ತು. ವಿಠ್ಠಲ್ ಕೂಡಾ ಇದೇ ಆದರ್ಶವನ್ನು ಬಾಳಿದವನು. ಸಹಯಾನವನ್ನು ತನ್ನ ಹಿತೈಷಿ, ಗೆಳೆಯರ ಸಹಕಾರದಲ್ಲಿ ಸ್ಥಾಪಿಸಿದಾಗಲೂ ಇದೇ ಆಶಯ. ಜೊತೆಗೇ ಕಲೆಯ ಸ್ಪರ್ಶ, ಅಭಿರುಚಿಯನ್ನು ಬಿಡದ ಎಚ್ಚರಿಕೆ ಅವನಲ್ಲಿತ್ತು. ತಮ್ಮ ಪಟ್ಟ ಮನೆ ಮತ್ತು ಸುತ್ತಲಿನ ಜಾಗವನ್ನು ಈ ಸಂಸ್ಥೆಗಾಗಿ ಮೀಸಲಿರಿಸಿ ಅವರ ಕುಟುಂಬವರ್ಗದವರು ತಾವು ಬಾಡಿಗೆ ಮನೆಯಲ್ಲಿ ನೆಲೆಸಿದ್ದರು. ವರ್ಷವಿಡೀ ಇಲ್ಲಿ ಕಾರ್ಯಕ್ರಮಗಳು ನಡೆಯುತ್ತಿದ್ದವು. ವಿಚಾರಗೋಷ್ಠಿ, ಸಾಹಿತ್ಯೋತ್ಸವ, ಕವಿಗೋಷ್ಠಿ, ನಾಟಕೋತ್ಸವ, ಮಕ್ಕಳ ಬೇಸಿಗೆ ಶಿಬಿರ, ಜಾನಪದ ಉತ್ಸವ, ಯಕ್ಷಗಾನ ಪ್ರದರ್ಶನ



ಹೀಗೆ ಅಸಂಖ್ಯ ಕಾರ್ಯಕ್ರಮಗಳನ್ನು ಅತ್ಯಂತ ಶಿಸ್ತುಬದ್ಧವಾಗಿ, ಯಶಸ್ವಿಯಾಗಿ ನಡೆಸಿಕೊಂಡು ಬರಲಾಗುತ್ತಿತ್ತು. ಅಲ್ಲಿ ನಡೆದ ಕಾರ್ಯಕ್ರಮಗಳ ಪಟ್ಟಿನೋಡಿದರೆ ಅಕಾಡೆಮಿಯೋ, ಪರಿಷತ್ತೋ, ವಿಶ್ವವಿದ್ಯಾಲಯವೋ ನಡೆಸಿದ್ದಿರಬಹುದೇ ಎಂದು ಅನುಮಾನ ಬಂದೀತು.

ಹೊಸ ತಲೆಮಾರನ್ನು ಮೂಲಭಿತ್ತಿಯಾಗಿಸಿಕೊಂಡು – ಸಾಹಿತ್ಯ ಸ್ಪಂದನ: ಹೊಸ ತಲೆಮಾರು, ಮಹಿಳೆ ಮತ್ತು ಹೊಸ ತಲೆಮಾರು, ಮಾಧ್ಯಮ, ಚಳುವಳಿ, ಓದುವ ಸಂಸ್ಕೃತಿ, ಜಾನಪದ, ಅಂಬೇಡ್ಕರ್ ಚಿಂತನೆ, ನಾಡು ನುಡಿಯ ನಿರೂಪಣೆ, ಸಂವಿಧಾನ, ಸಿನೆಮಾ: ಹೊಸ ತಲೆಮಾರು ಮೊದಲಾದ ವಿಚಾರ ಸಂಕಿರಣಗಳು, ಸಾಮಾಜಿಕ ನ್ಯಾಯಕ್ಕಾಗಿ ಸಹಯಾನದ ಅಭಿಯಾನ, ಮಹಿಳೆ ಸಾಂಸ್ಕೃತಿಕ ಅಭಿವ್ಯಕ್ತಿ– ಮಹಿಳಾ ದನಿಗೊಂದು ಸ್ಪೂರ್ತಿ, ಅಂಬೇಡ್ಕರ್–125 ಹೀಗೇ ಮುಂದುವರಿಯುತ್ತದೆ. ನಾಡಿನ ನೂರಾರು ಚಿಂತಕರು ಅಲ್ಲಿಗೆ ಹೋಗಿದ್ದಾರೆ ಹಲವು ನಾಟಕಗಳು ಪ್ರದರ್ಶನಗೊಂಡಿವೆ. ಇದಲ್ಲದೆ ನಾಡಿನಾದ್ಯಂತ ಆಯೋಜಿಸಿದ ವಿಚಾರ ಸಂಕಿರಣಗಳು ಹಲವು. ತೇಜಸ್ವಿ ಓದು ಅಭಿಯಾನ ಕೊನೆಯ ಶಿಬಿರವಾಗಿತ್ತು.

ಇದು ಒಂದು ರೀತಿಯಾದರೆ, ವಿದ್ಯಾರ್ಥಿ ಯುವಜನತೆಗಾಗಿ 'ಸಂವಿಧಾನ ಓದು' ಎಂಬ ವಿಶಿಷ್ಟ ಕಾರ್ಯಕ್ರಮವೂ ವಿಠ್ಠಲ್ ಕನಸಿನ ಕೂಸು. ನ್ಯಾಯಮೂರ್ತಿ ನಾಗಮೋಹನ ದಾಸ್ ಅವರನ್ನು ದೆಹಲಿಯಿಂದ ಕರ್ನಾಟಕಕ್ಕೆ ಬರುವಂತೆ ಪ್ರೇರೇಪಿಸಿ 2018ರಿಂದ ಸುಮಾರು ನಾನೂರು ಕಾರ್ಯಕ್ರಮಗಳನ್ನು ಇದುವರೆಗೂ ಆಯೋಜಿಸಲಾಗಿದೆ. ಇದಕ್ಕಾಗಿ ಅವರಿಂದಲೇ ಸಂವಿಧಾನ ಪರಿಚಯದ ಪುಸ್ತಕವೊಂದನ್ನು ಬರೆಸಿ ನಾಡಿನಾದ್ಯಂತ ಒಂದು ಲಕ್ಷಕ್ಕೂ ಹೆಚ್ಚು ಪ್ರತಿಗಳನ್ನು ವಿದ್ಯಾರ್ಥಿಗಳಿಗೆ ತಲುಪಿಸಲಾಗಿದೆ. ಈ ಪುಸ್ತಕ ಬೇರೆ ಭಾಷೆಗಳಿಗೂ ಅನುವಾದವಾಗಿದ್ದು, ಮದುವೆ ಮನೆಯ ತಾಂಬೂಲವಾಗಿಯೂ ಹಲವರು ಹಂಚಿದ್ದಾರೆ. ಕೋವಿಡ್ ಇಲ್ಲದೇ ಹೋಗಿದ್ದಲ್ಲಿ ಬಹುಶಃ ಈ ಕಾರ್ಯಕ್ರಮ ಇಡೀ ಕರ್ನಾಟಕದ ಸುತ್ತಾಟ ಮುಗಿಸಿರುತ್ತಿತ್ತೇನೋ.

ಕಳೆದ ವರ್ಷದ ಲಾಕ್‌ಡೌನ್ ನಿಂದ ಈ ಚಟುವಟಿಕೆಗಳು ನಿಲ್ಲಬಾರದೆಂದು ಜನಶಕ್ತಿ ಮೀಡಿಯಾ ಮೂಲಕ ವಾರದ ಕವಿತೆ, ಪಿಚ್ಚರ್ ಪಯಣ, ಯುವಜನತೆಯ ಸಾಹಿತ್ಯದ ಓದಿಗಾಗಿ 'ಕೋಶ ಓದು, ದೇಶ ನೋಡು' ಮೊದಲಾದ ಆನ್‌ಲೈನ್ ಕಾರ್ಯಕ್ರಮ ರೂಪಿಸಿ ಅದು ಸುಮಾರು ನಲವತ್ತು ಸಾವಿರಕ್ಕೂ ಹೆಚ್ಚು ನೋಡುಗರನ್ನು ತಲುಪಿದೆ.

ಉತ್ತರ ಕನ್ನಡದ ಸಿದ್ಧಾಪುರದ ಮಹಾತ್ಮಗಾಂಧಿ ಶತಾಬ್ಧಿ ಪದವಿ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕನಾಗಿದ್ದ ವಿಠ್ಠಲ್ ಅಲ್ಲಿನ ವಿದ್ಯಾರ್ಥಿಗಳಿಗಾಗಿ, ಕಾಲೇಜಿಗಾಗಿ ಮಾಡಿದ ಕೆಲಸವೂ ಸಣ್ಣದಲ್ಲ. ವಿದ್ಯಾರ್ಥಿಗಳಿಂದ ಜಿಲ್ಲೆಯ ಲೇಖಕರ ಕೃತಿ, ಹಸ್ತಪ್ರತಿ, ಜಾನಪದ ಸಾಹಿತ್ಯ ಸಂಗ್ರಹ, ಜಾನಪದ ಕಲೆಗಳ ಸಂಗ್ರಹ ಹಾಗೂ ಎಲ್ಲಕ್ಕಿಂತ ಹೆಚ್ಚಾಗಿ ಹಳ್ಳಿ ಪದಕೋಶ ಎಂಬ ಸುಮಾರು ಐದು ಸಾವಿರ ಪದಗಳ ಕೋಶಗಳನ್ನು ಸಿದ್ಧ ಪಡಿಸಿದ್ದರೂ ಎಲ್ಲೂ ಪ್ರಚಾರ ಪಡೆಯದೇ ಇನ್ನೂ ಸಾವಿರಾರು ಕೆಲಸ ಬಾಕಿ ಇದೆ. ಆಮೇಲೆ ಅವುಗಳನ್ನು ಪ್ರಕಟಿಸಬೇಕು ಎಂಬ ಯೋಜನೆ ಹೊಂದಿದ್ದ. ಆ ಕಾಲೇಜಿನ ಲೈಬ್ರೇರಿಯ ಒಂದು ಭಾಗವನ್ನು ಜಿಲ್ಲೆಯ ಎಲ್ಲಾ ಲೇಖಕರ ಬರಹಗಳ ಸಂಗ್ರಹಕ್ಕೆ ಮೀಸಲಿರಿಸಿ ಮನೆ ಮನೆಗೆ ಹೋಗಿ ಸಂಗ್ರಹಿಸಲಾಗಿತ್ತು.

ಭಟ್ಕಳ ಕೋಮುಗಲಭೆಯ ನಂತರ ಈತ ಹುಟ್ಟು ಹಾಕಿದ 'ಚಿಂತನ ಪುಸ್ತಕ' ಪ್ರಕಾಶನ ಸೌಹಾರ್ದದ ಧ್ವನಿಯಾಗಿ ಕೆಲಸ ಮಾಡಿದೆ. ನೂರಾರು ಪುಸ್ತಕಗಳನ್ನು ಪ್ರಕಟಿಸಿದೆ. ಸ್ವತಃ ತಾನೇ ಬೀದಿಗಳಲ್ಲಿ, ಬಸ್ ಸ್ಟ್ಯಾಂಡಿನಲ್ಲಿ ಪುಸ್ತಕ ಮಾರಿದವನು ಇವನು. ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗಲೇ ಸಾಕ್ಷರತೆ, ಜಾಗೃತಿಗಾಗಿ ಬೀದಿ ನಾಟಕ, ಚಳುವಳಿ ಮಾಡಿದ ವಿಠ್ಠಲ್ ಆಗಿನಿಂದಲೂ ತಾನು ಹಿಂದೆ, ಕೆಲಸ ಮುಂದೆ ಎಂಬಂತೆ ಇದ್ದವನು. ಸದಾ ಸಾಮಾಜಿಕ ಕಳಕಳಿ, ಹಸಿದವರಿಗಾಗಿ ತಲ್ಲಣ, ಅದನ್ನೆಲ್ಲಾ ತೊಡೆದು ಹಾಕಲು ಎಡಚಿಂತನೆಯ ಅನುಷ್ಠಾನಕ್ಕೆ ಪಣ ತೊಟ್ಟವನಂತೆ ನಿರಂತರ ಕೆಲಸದಲ್ಲಿ ತೊಡಗಿದ ವಿಠ್ಠಲ, ನೂರು ವರ್ಷದಲ್ಲಿ ಮಾಡುವುದನ್ನು ಐವತ್ತರಲ್ಲೇ ಮುಗಿಸಲು ಧಾವಂತ ಬಿದ್ದಂತೆ ಕೆಲಸ ಮಾಡುತ್ತಿದ್ದಾಗ ಎಚ್ಚರಿಸಿದರೆ, ಹೌದು, ಇನ್ನು ಸ್ವಲ್ಪ ವೇಗ ಕಡಿಮೆ ಮಾಡಬೇಕು ಎನ್ನುತ್ತಿದ್ದನಂತೆ.

ಕೋವಿಡ್‌ಗೆ ಈ ಮಾತುಗಳೇನಾದರೂ ಕಿವಿಗೆ ಬಿತ್ತೇ? ಅದು ಹೀಗೆ ಶಾಶ್ವತ ಬ್ರೇಕ್ ಹಾಕುವ ಉಮೇದಿಗೆ ಬಿದ್ದು ಬಿಟ್ಟಿತೇ? ಯಾರಾದರೂ ಊಹಿಸಲೂ ಸಾಧ್ಯವಿಲ್ಲದಂತೆ 'ಬಂದೇ ಬರುತ್ತೇನೆ' ಎಂದು ಆಸ್ಪತ್ರೆ ಸೇರಿದ ವಿಠ್ಠಲ್‌ನನ್ನು ಕೋವಿಡ್ ಯಾವ ದಿಕ್ಕಿಗೆ ಎಳೆದೊಯ್ಯಿತು? ಉಮ್ಮಿಯೊಳಗೆ ಬಿದ್ದ ಬೆಂಕಿಯ ಕಿಡಿಯಂತೆ ಆತನ ಅಗಲಿಕೆ ನಮ್ಮನ್ನೆಲ್ಲಾ ದಹಿಸುತ್ತಲೇ ಇದೆ. ವಿಠ್ಠಲ್ ಮಹಾನ್ ಪ್ರೀತಿಯ ವ್ಯಕ್ತಿ. ಚಿಕ್ಕ ಮಕ್ಕಳಿಂದ ಹಿಡಿದು ವೃದ್ಧರ ತನಕವೂ ಕಾಳಜಿ ವಹಿಸುತ್ತಿದ್ದ. ಆತನ ಮರಣದ ದಿನ ಪತ್ನಿ ಯಮುನಾ ಗಾಂವ್ಕರ್, 'ಹದಿನೇಳು ವರ್ಷಗಳಲ್ಲಿ ಒಂದು ದಿನವೂ ನಾವು ಜಗಳವಾಡಲಿಲ್ಲ. ಜಗಳವಾಡದೇ ತೆರಳಿಬಿಟ್ಟ' ಎಂದ ಮಾತು ನನ್ನ ಕಿವಿಗಳಲ್ಲಿ ಅನುರಣಿಸುತ್ತಿದೆ. ಸಂಘಟನೆಯ ಕೆಲಸದ ಸಂಗಾತಿಗಳೂ 'ಕಳೆದ ಮೂವತ್ತು ವರ್ಷಗಳಲ್ಲಿ ಒಂದು ಸಲವೂ ಸಿಟ್ಟಾಗಲಿಲ್ಲ, ಸುಸ್ತು ಎನ್ನಲಿಲ್ಲ' ಅನ್ನುತ್ತಾರೆ. ಯಾವುದೇ ಒಂದು ಜವಾಬ್ದಾರಿ ನಿರ್ವಹಣೆಯ ಸಂದರ್ಭದಲ್ಲಿ ಇದು ಎಲ್ಲರೂ ನೆನಪಿಟ್ಟುಕೊಳ್ಳಬೇಕಾದ ಸಂಗತಿಯಲ್ಲವೇ ಎಂದು ನನಗೆ ಅಚ್ಚರಿಯಾಗುತ್ತದೆ. ಇನ್ನು ಮುಂದೆ ಇದನ್ನು ನಾನು ಸದಾ ನೆನಪಿಟ್ಟುಕೊಳ್ಳಬೇಕು ಎಂದು ಕೊಳ್ಳುತ್ತಿದ್ದೇನೆ. ವಿಠ್ಠಲ್ ಹೀಗೆ ನಿರ್ಗಮನದಲ್ಲೂ ಇಂತದನ್ನೆಲ್ಲಾ ನಮಗೆ ಕೊಟ್ಟು, ಬಿಟ್ಟು ಹೋಗಿದ್ದಾನೆ. ಆತನ ಕುಟುಂಬ ಎಷ್ಟು ದೊಡ್ಡದು. ಅಕ್ಕಂದಿರಾದ ಮಾಧವಿ ಭಂಡಾರಿ ಮತ್ತು ಅವನ ಪ್ರೀತಿಯ ಇನ್ನಕ್ಕ, ಅವರ ಮಕ್ಕಳು ಮತ್ತದರಾಚೆಗೆ ನೂರಾರು ಜನರು . . . ಕೋವಿಡ್ ನಿರ್ದಯತೆ ಎಲ್ಲವನ್ನೂ ಮೀರಿಸಿತು. ನಮ್ಮೆಲ್ಲರ ಭುಜದ ಮೇಲಿನ ಭಾರವನ್ನು ಹೆಚ್ಚಿಸಿತು.

ಶಾಸಕ ಕೊಂಡಯ್ಯನವರ ಜಿಂದಾಲ್ ಪರ ವಕಾಲತ್ತು – ಸಿಪಿಐಎಂ ಖಂಡನೆ

ಜಿಂದಾಲ್ ಪರ ವಕಾಲತ್ತು ವಹಿಸಿ 3667 ಎಕರೆ ಜಮೀನನ್ನು ಕೇವಲ 1.25 ಲಕ್ಷ ರೂ.ಗಳಿಗೆ ತಲಾ ಎಕರೆಗೆ ನಿಗದಿಸಿ ಮಾರಾಟ ಮಾಡುವಂತೆ ರಾಜ್ಯ ಸರಕಾರವನ್ನು ಒತ್ತಾಯಿಸಿರುವ ಶಾಸಕ ಮತ್ತು ಕಾಂಗ್ರೆಸ್ ಮುಖಂಡ ಕೆ.ಸಿ. ಕೊಂಡಯ್ಯನವರ ರಾಜ್ಯ ಹಾಗೂ ಜನ ವಿರೋಧಿ ಕ್ರಮವನ್ನು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ) ಬಳ್ಳಾರಿ–ವಿಜಯನಗರ ಜಿಲ್ಲಾ ಸಮಿತಿ ಬಲವಾಗಿ ಖಂಡಿಸಿದೆ.

ಇದು, ರಾಜ್ಯ ಸರಕಾರದ ಬೊಕ್ಕಸಕ್ಕೆ ಮತ್ತು ಅತ್ಯಂತ ಕಡಿಮೆ ಬೆಲೆಗೆ ಅಂದು ಕೇಂದ್ರ ಸರಕಾರಕ್ಕೆ ನೀಡಿದ ರೈತರಿಗೆ ಅದರಿಂದ ಎಂತಹ ನಷ್ಟವಾದರೂ ಪರವಾಗಿಲ್ಲ, ಜಿಂದಾಲ್ ಕಂಪನಿಗೆ ದಾನವಾಗಿ ಬೇಕಾದರೂ ಜಮೀನು ನೀಡಿ ಎಂಬ ಲೂಟಿಕೋರ ದಳ್ಳಾಳಿ ನಿಲುಮೆಯದಾಗಿದೆಯೆಂದು ಕಟುವಾಗಿ ವಿಮರ್ಶಿಸಿದೆ.

ಶಾಸಕರಾದವರು ರಾಜ್ಯದ ಸಂಪನ್ಮೂಲ ಹಾಗೂ ಬೊಕ್ಕಸ ಮತ್ತು ಜನತೆಯ ಹಿತಾಸಕ್ತಿ ಪರವಾಗಿ ಇಲ್ಲದೇ ಹೋದಲ್ಲಿ, ಶಾಸಕರಾಗಿ ಮುಂದುವರೆಯುವುದಾದರೂ ಯಾಕೆ? ರಾಜೀನಾಮೆ ನೀಡಿ, ಜಿಂದಾಲ್ ಪರವಾಗಿ ಕಾರ್ಯ ನಿರ್ವಹಿಸುವುದು ಒಳ್ಳೆಯದೆಂದು ಸಿಪಿಐಎಂ ಕುಟುಕಿದೆ.

ಜಿಂದಾಲ್ ಪ್ರದೇಶದಲ್ಲಿ ಕೇವಲ 30*40 ನಿವೇಶನದ ಬೆಲೆ ರೂ 5 ಲಕ್ಷದ ಮೇಲಿರುವಾಗ ತಲಾ ಎಕರೆ ಜಮೀನನ್ನು ಕೇವಲ 1.25 ಲಕ್ಷಕ್ಕೆ ಮಾರಾಟ ಮಾಡುವಂತೆ ಒತ್ತಾಯಿಸಿದರೇ, ಜನತೆ ಶಾಸಕರ ಕುರಿತು ಏನೆಂದು ಭಾವಿಸುವರೆಂಬ ಜಾಗೃತಿಯನ್ನಾದರೂ ಕನಿಷ್ಠ ಇವರು ಹೊಂದಿರಬೇಕಿತ್ತು ಎಂದು ಟೀಕಿಸಿದೆ.

ಮುಖ್ಯಮಂತ್ರಿಗಳು ಯಾವುದೇ ಕಾರಣಕ್ಕೆ ಜಮೀನುಗಳನ್ನು ಯಾವುದೇ ಕಂಪನಿಗಳಿಗೆ ಮಾರಾಟ ಮಾಡಬಾರದು. ಬದಲಿಗೆ ಗುತ್ತಿಗೆಯನ್ನು ಮುಂದುವರೆಸಬೇಕು ಮತ್ತು ಗುತ್ತಿಗೆಯ ದರವನ್ನು ತಲಾ ಎಕರೆಗೆ ಕನಿಷ್ಠ 25,000 ರೂಗಳೆಂದು ಹೆಚ್ಚಿಸಿ, ಅದರಲ್ಲಿ ಶೇ 50 ರಷ್ಟು ಮೂಲ ರೈತ ಕುಟುಂಬಗಳಿಗೆ ದೊರಕುವಂತೆ ಕ್ರಮವಹಿಸಬೇಕೆಂದು ಮತ್ತು ಈ ಕುರಿತ ಕಾಯ್ದೆಗೆ ತಿದ್ದುಪಡಿ ಮಾಡಬೇಕೆಂದು ಸಿಪಿಐಎಂ ಒತ್ತಾಯಿಸಿದೆ.

ಹ್ರಾಂ ಹ್ರೂಂ ವಿಜ್ಞಾನ ಮತ್ತು ಹ್ರಾಂ ಹ್ರೂಂ ಅರ್ಥಶಾಸ್ತ್ರ





ಎರಡನೇ ಕೊವಿಡ್ ಅಲೆಯ ಭಗ್ನಾವಶೇಷಗಳ ನಡುವಿನಿಂದ ಇನ್ನೊಂದು ಅನರ್ಥ ಮೂಡಿ ಬರುತ್ತಿದೆ, ಅದೇ ಆರ್ಥಿಕ ಅನಾಹುತ. ಕೋಟ್ಯಂತರ ಜನಗಳು ತಮ್ಮ ಜೀವನಾಧಾರಗಳನ್ನು ಕಳಕೊಂಡಿದ್ದಾರೆ, ಉದ್ಯೋಗಹೀನರಾಗಿದ್ದಾರೆ; ಸಣ್ಣ ವ್ಯವಹಾರಸ್ಥರು ಮತ್ತು ಅಂಗಡಿಕಾರರಿಗೆ ಕೇಡು ಉಂಟಾಗಿದೆ; ಹಲವು ಕುಟುಂಬಗಳು ಸಾಲದಲ್ಲಿ ಮುಳಗಿವೆ, ಹಸಿವು ರಾರಾಜಿಸುತ್ತಿದೆ. ಆದ್ದರಿಂದ, ಸುಮಾರಾಗಿ ಎಲ್ಲರೂ, ಕೆಲವು ಕಟ್ಟಾ ಹಣಕಾಸು ಮೂಲಭೂತವಾದಿಗಳನ್ನು ಬಿಟ್ಟು, ಸರಕಾರ ಈಗ ಹೆಚ್ಚು ವೆಚ್ಚ ಮಾಡಬೇಕಾಗಿದೆ ಎಂದು ಕರೆ ನೀಡುತ್ತಿದ್ದಾರೆ. ಆದರೆ ಮೋದಿ ಸರಕಾರ ಇವನ್ನೆಲ್ಲ ಕೇಳಿಯೂ ಕೇಳದಂತಿದೆ.ಸರಕಾರ ಬಡವರು ಮತ್ತು ನೆರವಿನ ಅಗತ್ಯವಿರುವವರಿಗೆ ನಗದು ಸಬ್ಸಿಡಿಗಳನ್ನು ಕೊಡುವುದಿಲ್ಲವೆಂದು ಹಟ ತೊಟ್ಟಿದೆ. ಲಸಿಕೆ ಇರಲಿ, ಅಥವ ನಗದು ಸಬ್ಸಿಡಿಗಳಿಗಾಗಿ ರಾಜ್ಯಗಳಿಗೆ ಹಣಕಾಸು ನೆರವು ಒದಗಿಸುವುದಿರಲಿ, ಕೇಂದ್ರ ಸರಕಾರ ತನ್ನ ಹೊಣೆಗಾರಿಕೆಗಳನ್ನು ಜಾರಿಸಿಕೊಳ್ಳುತ್ತಿದೆ. ಇದು ಮಾಯಾಮಂತ್ರದ ವಿಜ್ಞಾನ ಮತ್ತು ಮಾಯಾಮಂತ್ರದ ಅರ್ಥಶಾಸ್ತ್ರದ ಪ್ರಕರಣ ಆಗಿ ಬಿಟ್ಟಿದೆ.

ಪ್ರಕಾಶ ಕಾರಟ್

ಕೊವಿಡ್ ಮಹಾಸೋಂಕಿನ ಎರಡನೇ ಅಲೆಯು ಶಿಖರ ನಿಧಾನವಾಗಿ ಹಿಂದಕ್ಕೆ ಸರಿಯುತ್ತಿರುವಂತೆ, ಇಡೀ ದೇಶದ ಗಮನ ಲಕ್ಷಾಂತರ ಕುಟುಂಬಗಳ ಮೇಲೆ ಅದು ಎಸಗಿರುವ ಹಾವಳಿಗಳ ಮೇಲೆ ನೆಟ್ಟಿದೆ. ಈ ಆರೋಗ್ಯ ತುರ್ತು ಪರಿಶ್ಥಿತಿಯನ್ನು ಎದುರಿಸಲು ಮೋದಿ ಸರಕಾರ ಯಾವುದೇ ಸಿದ್ಧತೆಯಿಲ್ಲದೆ ತಡಬಡಾಯಿಸಿರುವುದರ ಬಗ್ಗೆ ವ್ಯಾಪಕವಾದ ದಿಗಿಲು ಮತ್ತು ಆಕ್ರೋಶ ವ್ಯಕ್ತವಾಗಿದೆ. ಪರಿಸ್ಥಿತಿಯನ್ನು ಸರಿಯಾಗಿ ನಿಭಾಯಿಸಲಾಗದ ಅದರ ಅಸಮರ್ಥತೆ ಮತ್ತು ಅವೈಜ್ಞಾನಿಕ ನಿಲುವು ಇದನ್ನು ಜನತೆಗೆ ಒಂದು ಮಹಾ ಅನಾಹುತವಾಗಿ ಪರಿವರ್ತಿಸಿವೆ.

ಈ ಎರಡನೇ ಅಲೆಯು ಭಗ್ನಾವಶೇಷಗಳ ನಡುವಿನಿಂದ ಇನ್ನೊಂದು ಅನರ್ಥ ಮೂಡಿ ಬರುತ್ತಿದೆ, ಅದೇ ಆರ್ಥಿಕ ಅನಾಹುತ. ಕೋಟ್ಯಂತರ ಜನಗಳು ತಮ್ಮ ಜೀವನಾಧಾರಗಳನ್ನು ಕಳಕೊಂಡಿದ್ದಾರೆ, ಉದ್ಯೋಗಹೀನರಾಗಿದ್ದಾರೆ; ಸಣ್ಣ ವ್ಯವಹಾರಸ್ಥರು ಮತ್ತು ಅಂಗಡಿಕಾರರಿಗೆ ಕೇಡು ಉಂಟಾಗಿದೆ;ಹಲವು ಕುಟುಂಬಗಳು ಸಾಲದಲ್ಲಿ ಮುಳಗಿವೆ, ಹಸಿವು ರಾರಾಜಿಸುತ್ತಿದೆ.

ರಾಷ್ಟ್ರೀಯ ಅಂಕಿ-ಅಂಶಗಳ ಸಂಘಟನೆ (ಎನ್‌ಎಸ್.ಒ.) ಪ್ರಕಟಿಸಿರುವ ಪ್ರಕಾರ 2021ರ ಜಿಡಿಪಿ 7.3% ದಷ್ಟು ಸಂಕುಚನಗೊಂಡಿದೆ. ಇದು ಕಳೆದ ನಾಲ್ಕು ದಶಕಗಳಲ್ಲೇ ಅತ್ಯಂತ ಕೆಟ್ಟ ನಿರ್ವಹಣೆ. ಕೃಷಿ ವಲಯವೊಂದನ್ನು ಬಿಟ್ಟು ಅರ್ಥವ್ಯವಸ್ಥೆಯ ಪ್ರತಿಯೊಂದೂ ವಲಯದಲ್ಲಿ ಉತ್ಪಾದನೆ ಕುಸಿದಿದೆ. ನಾಲ್ಕನೇ ತ್ರೈಮಾಸಿಕದಲ್ಲಿ(ಜನವರಿಯಿಂದ ಮಾರ್ಚ್ 2021) 1.6% ಬೆಳವಣಿಗೆ ಅರ್ಥವ್ಯವಸ್ಥೆ ಚೇತರಿಸಿಕೊಳ್ಳುತ್ತಿರುವ ಲಕ್ಷಣ ಎಂದು ಸರಕಾರ ಹೇಳುತ್ತಿದೆ. ಆದರೆ ಎಪ್ರಿಲ್- ಜೂನ್ ಅವಧಿಯಲ್ಲಿ ಎರಡನೇ ಕೊವಿಡ್ ಅಲೆ ಮತ್ತು ಅದರಿಂದಾಗಿ ಹಲವಾರು ರಾಜ್ಯಗಳಲ್ಲಿ ಹಾಕಬೇಕಾಗಿ ಬಂದಿರುವ ಲಾಕ್‌ಡೌನ್‌ಗಳಿಂದಾಗಿ ಪರಿಸ್ಥಿತಿ ಮತ್ತಷ್ಟು ಕೆಟ್ಟುಹೋಗಬಹುದಷ್ಟೇ.

ಪರಿಸ್ಥಿತಿಯ ಗಂಭೀರತೆಯ ಕೆಲವು ಸೂಚನೆಗಳು ಆಗಲೇ ಕಾಣಬರುತ್ತಿವೆ. ಮೇ ತಿಂಗಳಲ್ಲಿ ನಿರುದ್ಯೋಗ ದರ 12 ಶೇ. ಹತ್ತಿರ ಇದೆ ಎಂದು ಸಿ.ಎಂ.ಐ.ಇ. ಹೇಳಿದೆ. ಆ ತಿಂಗಳಲ್ಲಿ ನಗರಗಳಲ್ಲಿ ನಿರುದ್ಯೋಗ ದರ 15%ಕ್ಕೆ ಹತ್ತಿರ ಬಂದಿದೆ. ಭಾರತದ ಒಳಗಿನ ಕಾರ್ಖಾನೆಗಳ ಆರ್ಡರ್ ಪ್ರಮಾಣ ಮತ್ತು ಉತ್ಪಾದನೆ ಕಳೆದ 10 ತಿಂಗಳಲ್ಲೇ ಅತೀ ಕಡಿಮೆ ಮಟ್ಟಕ್ಕೆ ಇಳಿದಿದೆ. ಕುಟುಂಬಗಳ ಉಪಭೋಗದ ಪ್ರಮಾಣ ಮತ್ತಷ್ಟು ಕೆಳಗಿಳಿದಿದೆ; ಬೇಡಿಕೆಯಿಲ್ಲದ್ದರಿಂದ ಹೂಡಿಕೆಗಳು ಬರುತ್ತಿಲ್ಲ.

ಇಂತಹ ಸಮಯದಲ್ಲಿ ಸರಕಾರ ಅರ್ಥವ್ಯವಸ್ಥೆಯಲ್ಲಿ ವೆಚ್ಚಗಳ ಪ್ರಮಾಣವನ್ನು ಹೆಚ್ಚಿಸಲು ಮಧ್ಯಪ್ರವೇಶಿಸಬೇಕಾಗಿತ್ತು. ನಗದು ಸಬ್ಸಿಡಿಗಳು, ಉದ್ಯೋಗ ಭತ್ತೆಗಳು, ಮನರೇಗ ವೆಚ್ಚದಲ್ಲಿ ಹೆಚ್ಚಳ ಹಾಗೂ ಸಣ್ಣ ಹಾಗೂ ಮಧ್ಯಮ ಉದ್ದಿಮೆಗಳಿಗೆ ಹೆಚ್ಚಿನ ಸಾಲಗಳ ಮೂಲಕ ಸರಕಾರೀ ವೆಚ್ಚವನ್ನು ಹೆಚ್ಚಿಸುವ ಮೂಲಕ ಮಾತ್ರವೇ ಜನಗಳಿಗೆ ಪರಿಹಾರವನ್ನು, ಅವರ ಕೈಗಳಲ್ಲಿ ಖರೀದಿ ಸಾಮರ್ಥ್ಯವನ್ನು ಇಟ್ಟು ಅರ್ಥವ್ಯವಸ್ಥೆಯಲ್ಲಿ ಬೇಡಿಕೆಯನ್ನು ಉತ್ತೇಜಿಸಲು ಸಾಧ್ಯ. ಮೂಲರಚನೆ ಮತ್ತು ಗ್ರಾಮೀಣ ಅಭಿವೃದ್ಧಿಗೆ ಹೆಚ್ಚಿನ ಸಾರ್ವಜನಿಕ ಹೂಡಿಕೆ ಮಧ್ಯಮಾವಧಿ ಮತ್ತು ದೀರ್ಘಾವಧಿಯಲ್ಲಿಯೂ ನೆರವಾಗುತ್ತದೆ.

ಸುಮಾರಾಗಿ ಎಲ್ಲರೂ, ಕೆಲವು ಕಟ್ಟಾ ಹಣಕಾಸು ಮೂಲಭೂತವಾದಿಗಳನ್ನು ಬಿಟ್ಟು, ಸರಕಾರ ಈಗ ಹೆಚ್ಚು ವೆಚ್ಚ ಮಾಡಬೇಕಾಗಿದೆ ಎಂದು ಕರೆ ನೀಡುತ್ತಿದ್ದಾರೆ. ಭಾರತೀಯ ಉದ್ದಿಮೆಗಳ ಮಹಾಒಕ್ಕೂಟ (ಸಿ.ಐ.ಐ.)ದ ಅಧ್ಯಕ್ಷ ಉದಯ್ ಕೊಟಕ್, ನಗದು ಸಬ್ಸಿಡಿಗಳೂ ಸೇರಿದಂತೆ ಒಂದು ದೊಡ್ಡ ಆರ್ಥಿಕ ಉತ್ತೇಜನಾ ಕ್ರಮಕ್ಕೆ ಕರೆ ನೀಡಿದ್ದಾರೆ. ನವ-ಉದಾರವಾದದ ಒಬ್ಬ ದೃಢ ಅನುಯಾಯಿಯಾಗಿರುವ ಮಾಜಿ ಹಣಕಾಸು ಮಂತ್ರಿ ಪಿ.ಚಿದಂಬರಂ ಸಾಲ ತಂದು, ನೋಟು ಪ್ರಿಂಟ್ ಮಾಡಿಯಾದರೂ ಸರಕಾರ ಹೆಚ್ಚು ವೆಚ್ಚ ಮಾಡಬೇಕಾಗಿದೆ ಎಂದು ಕರೆ ನೀಡಿದ್ದಾರೆ. ಅದೇ ರೀತಿ ಹಲವಾರು ಅರ್ಥಶಾಸ್ತ್ರಜ್ಞರು ಮತ್ತು ಸಾರ್ವಜನಿಕ ಹಣಕಾಸು ಪರಿಣಿತರೂ ಕರೆ ನೀಡಿದ್ದಾರೆ.

ಆದರೆ ಮೋದಿ ಸರಕಾರ ಇವನ್ನೆಲ್ಲ ಕೇಳಿಯೂ ಕೇಳದಂತಿದೆ. ಹಣಕಾಸು ಮಂತ್ರಿ ನಿರ್ಮಲಾ ಸೀತಾರಾಮನ್, ಒಂದು ಸಂದರ್ಶನದಲ್ಲಿ ಕೇಳಿದ ಪ್ರಶ್ನೆಗೆ ಉತ್ತರಿಸುತ್ತ, ಮೊದಲಿಗೆ ಬಜೆಟಿನಲ್ಲಿ ಹೇಳಿರುವ ವೆಚ್ಚಗಳು ಜನರಿಗೆ ತಲುಪಲಿ ಎಂದಿದ್ದಾರೆ. ಬಜೆಟ್ ಈಗಾಗಲೇ ಕೊವಿಡ್ ಸಂಬಂಧಿ ವೆಚ್ಚಗಳ ಪ್ಯಾಕೇಜಿಗೆ ಹಣ ಎತ್ತಿಟ್ಟಿದೆ ಎಂದು ಅವರು ಹೇಳಿದ್ದಾರೆ.

ಆದರೆ ಇದೊಂದು ಟೊಳ್ಳು ದಾವೆ. 2021-22ರ ಬಜೆಟ್ ರೂ. 34,83,236 ಕೋಟಿ ಸರಕಾರೀ ವೆಚ್ಚದ ಲೆಕ್ಕಾಚಾರ ಕೊಟ್ಟಿದೆ. 2020-21ರಲ್ಲಿ ಮಾಡಿರುವ ಖರ್ಚು ರೂ.34,50,305 ಕೋಟಿ. ಅಂದರೆ 2021-22ರಲ್ಲಿ ಹೆಚ್ಚುವರಿ ವೆಚ್ಚ ಕೇವಲ 32,931 ಕೊಟಿ ರೂ. ಬಜೆಟ್ ನೀಡಿಕೆಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಮನರೇಗಕ್ಕೆ ಮತ್ತು ಆಹಾರ ಸಬ್ಸಿಡಿಗೆ ಹೆಚ್ಚಳ ಎಂಬುದೇನೂ ಇಲ್ಲ. ಆರೋಗ್ಯ ಬಜೆಟಿನಲ್ಲಿ ಮಾಡಿರುವ ಕೈಚಳಕವಂತೂ ಕಣ್ಣಿಗೆ ರಾಚುವಂತಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣಕ್ಕೆ ಕಳೆದ ವರ್ಷದ ವೆಚ್ಚಕ್ಕೆ ಹೋಲಿಸಿದರೆ ಕೇವಲ 11ಶೇ. ಹೆಚ್ಚಳವಷ್ಟೇ ಇದೆ.

ಸರಕಾರ ಬಡವರು ಮತ್ತು ನೆರವಿನ ಅಗತ್ಯವಿರುವವರಿಗೆ ನಗದು ಸಬ್ಸಿಡಿಗಳನ್ನು ಕೊಡುವುದಿಲ್ಲವೆಂದು ಹಟ ತೊಟ್ಟಿದೆ. ಕಳೆದ ವರ್ಷದ ಮಧ್ಯಭಾಗದಿಂದಲೇ ಪ್ರತಿಪಕ್ಷಗಳು ಆದಾಯ ತೆರಿಗೆ ವ್ಯಾಪ್ತಿಗೆ ಬರದ ಎಲ್ಲರಿಗೂ ಮಾಸಿಕ ರೂ.7500 ನಗದು ವರ್ಗಾವಣೆ ಮಾಡಬೇಕು ಎಂದು ಆಗ್ರಹಿಸುತ್ತ ಬಂದಿವೆ. ಆದರೆ ಸರಕಾರ ಈ ವಿಷಯದಲ್ಲಿ ಎಳ್ಳಷ್ಟೂ ಜಗ್ಗಿಲ್ಲ.

ಎರಡನೇ ಅಲೆಯ ಅವಧಿಯಲ್ಲಿ ಸರಕಾರ ಕೈಗೊಂಡಿರುವ ಒಂದೇ ಕ್ರಮವೆಂದರೆ ಆಹಾರ ಭದ್ರತೆ ಕಾಯ್ದೆಯ ಅಡಿಯಲ್ಲಿ ಬರುವವರಿಗೆ 5ಕೆ.ಜಿ. ಆಹಾರಧಾನ್ಯಗಳನ್ನು ಕೊಡುವ ಯೋಜನೆಯನ್ನು ಮೂರು ತಿಂಗಳಿಗೆ ವಿಸ್ತರಿಸಿರುವುದಷ್ಟೇ. ಆದರೆ ಕಳೆದ ವರ್ಷ ಕೊಟ್ಟಿದ್ದ 1ಕೆ.ಜಿ. ಬೇಳೆಯನ್ನು ಈಗ ನಿಲ್ಲಿಸಲಾಗಿದೆ.

ನವ-ಉದಾರವಾದಿ ಧೋರಣೆಗಳ ಮೂಲ ಕರ್ತೃಗಳಾದ ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಬ್ರಿಟನ್ನಿನ ಸರಕಾರಗಳು ಅನುಸರಿಸರುವ ಧೋರಣೆಗಳನ್ನು ಅನುಕರಿಸುವುದು ಕೂಡ ಮೋದಿ ಸರಕಾರಕ್ಕೆ ಇಷ್ಟವಿಲ್ಲ. ಟ್ರಂಪ್ ಆಡಳಿತ ಮತ್ತು ಈಗ ಬಿಡೆನ್ ಆಡಳಿತ ಒಟ್ಟಾಗಿ 5 ಟ್ರಿಲಿಯನ್ ಡಾಲರುಗಳ ಹಣಕಾಸು ಉತ್ತೇಜನೆಯನ್ನು ಮತ್ತು ನಗದು ವರ್ಗಾವಣೆಗಳನ್ನು ಕೊಟ್ಟಿವೆ. ಇದು ಅಲ್ಲಿಯ ಜಿಡಿಪಿಯ 27ಶೇ.ದಷ್ಟಾಗುತ್ತದೆ.

ಬ್ರಿಟಿಶ್ ಸರಕಾರ ಜಿಡಿಪಿಯ 17ಶೇ.ದಷ್ಟು ಹಣಕಾಸು ಉತ್ತೇಜನೆ ನೀಡಿದೆ. ಇದರಲ್ಲಿ ಉದ್ಯೋಗ ಬೆಂಬಲ ಮತ್ತು ನಗದು ವರ್ಗಾವಣೆಗಳೂ ಸೇರಿವೆ.

ಭಾರತ ಸರಕಾರ ಮಾಡಿರುವ ಹೆಚ್ಚುವರಿ ವೆಚ್ಚ ಜಿಡಿಪಿಯ 2% ಮಾತ್ರ.

ಭಾರತದ ಮೋದಿ ಸರಕಾರ ಈ ಅವಧಿಯಲ್ಲಿ ದೊಡ್ಡ ಕಾರ್ಪೊರೇಟ್‌ಗಳು ಮತ್ತು ಖಾಸಗಿ ಹಣಕಾಸು ಹಿತಾಸಕ್ತಿಗಳನ್ನು ಶ್ರೀಮಂತಗೊಳಿಸಲು ಕೆಲಸ ಮಾಡಿದೆ. ಅದು ಕಾರ್ಪೊರೇಟ್ ತೆರಿಗೆಗಳನ್ನು 2020-21ರ ಬಜೆಟಿನಲ್ಲೂ, ಮತ್ತು 2021-22ರ ಬಜೆಟಿನಲ್ಲೂ ಇಳಿಸಿದೆ. ಮತ್ತು ಸಾರ್ವಜನಿಕ ವಲಯದ ಘಟಕಗಳನ್ನು ಮಾರುವ ಅಥವ ಶೇರು ಹಿಂಪಡೆಯುವ ಮೂಲಕ ರೂ.2.1 ಲಕ್ಷ ಕೋಟಿ ಮತ್ತು ರೂ. 1.75 ಲಕ್ಷ ಕೋಟಿ ಎತ್ತುವ ಪ್ರಸ್ತಾವವನ್ನು ಇಟ್ಟಿದೆ. ಈ ಗುರಿ ಸಾಧನೆಯ ಹತ್ತಿರವೂ ಬರಲು ಅದಕ್ಕೆ ಆಗಿಲ್ಲ ಎನ್ನುವುದು ಬೇರೆ ಮಾತು.

ನವ-ಉದಾರವಾದಿ ಧೋರಣೆಗಳಿಗೆ ಬಿಜೆಪಿ ಸರಕಾರದ ವಿಧೇಯತೆ ಎಂತಹದೆಂದರೆ, ಮಹಾಸೋಂಕಿನ ಅವಧಿಯಲ್ಲೂ ಶೇರು ಮಾರುಕಟ್ಟೆಯಲ್ಲಿ ಭಾರೀ ತೇಜಿ ಮತ್ತು ದೊಡ್ಡ ಮಾಲಕರು ಹಾಗೂ ಸಟ್ಟಾ ಕೋರರ ಸಂಪತ್ತು ಏರಿರುವ ಹೊಲಸು ದೃಶ್ಯಗಳು ಕಾಣ ಬಂದಿವೆ.

ಇದರ ಫಲಿತಾಂಶವೆಂದರೆ, 2020ರಲ್ಲಿ ಬಿಲಿಯಾಧಿಪತಿಗಳ ಸಂಖ್ಯೆಯಲ್ಲಿ 55 ಹೆಚ್ಚಳವಾಗಿದೆ ಮತ್ತು ಮೊದಲ 100 ಬಿಲಿಯಾಧಿಪತಿಗಳ ಸಂಪತ್ತಿನಲ್ಲಿ 35ಶೇ. ಏರಿಕೆಯಾಗಿದೆ. ಅದರ ಇನ್ನೊಂದು ಮಗ್ಗುಲಲ್ಲಿ ವಲಸೆ ಕಾರ್ಮಿಕರ, ಅನೌಪಚಾರಿಕ ಕಾರ್ಮಿಕರ, ಗ್ರಾಮೀಣ ಶ್ರಮಿಕರ ಹಾಗೂ ಉದ್ಯೋಗಹೀನರಾಗಿ ಬಿಟ್ಟಿರುವ, ಸಾಲದಲ್ಲಿ ಮುಳುಗಿರುವ, ಹಸಿವು-ಅಪೌಷ್ಟಿಕತೆಗೆ ತುತ್ತಾಗಿ ದಾರಿದ್ರ್ಯಕ್ಕೆ ಇಳಿದ ಕೋಟ್ಯಂತರ ಜನಗಳ ಪಾಡು.

ಸರಕಾರ ಹೆಚ್ಚುವರಿ ವೆಚ್ಚಗಳನ್ನು ಮಾಡಲು ಸಂಪನ್ಮೂಲಗಳನ್ನು ಎತ್ತುವುದಕ್ಕಾಗಿ ಕಾರ್ಪೊರೇಟ್ ತೆರಿಗೆಗಳನ್ನು ಹೆಚ್ಚಿಸಲು, ಬಂಡವಾಳ ಗಳಿಕೆಗಳು ಅಥವ ಸಂಪತ್ತಿನ ಮೇಲೆ ತೆರಿಗೆ ಹಾಕಲು ನಿರಾಕರಿಸಿದೆ. ಬದಲಿಗೆ, ಆದಾಯಗಳಲ್ಲಿ ಇಳಿಕೆಯನ್ನು ಸರಿದೂಗಿಸಲು ಪೆಟ್ರೋಲ್ ಮತ್ತು ಡೀಸೆಲಿನ ಮೇಲೆ ವಿಪರೀತ ಸುಂಕಗಳನ್ನು ವಸೂಲಿ ಮಾಡುತ್ತಿದೆ. ಚುನಾವಣಾ ಫಲಿತಾಂಶಗಳು ಪ್ರಕಟವಾದ ಮೇಲೆ, ಕೊವಿಡ್ ಅಲೆ ಶಿಖರಕ್ಕೇರುತ್ತಿರುವ ಸಮಯದಲ್ಲೂ, ಮೇ 2ರಿಂದ ತಿಂಗಳ ಕೊನೆಯ ನಡುವೆ 17 ಬಾರಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳನ್ನು ಏರಿಸಲಾಗಿದೆ. ಇದರಿಂದಾಗಿ ಮೇ ಒಂದು ತಿಂಗಳಲ್ಲೇ ಡೀಸೆಲ್ ಬೆಲೆಗಳಲ್ಲಿ ಲೀಟರಿಗೆ 4.65 ರೂ. ಮತ್ತು ಪೆಟ್ರೋಲ್ ಬೆಲೆಗಳಲ್ಲಿ 4.09 ರೂ. ಏರಿಕೆಯಾಗಿದೆ.

ಸಗಟು ಬೆಲೆ ಸೂಚ್ಯಂಕ ಮತ್ತು ಹಣದುಬ್ಬರದಲ್ಲಿ ಏರಿಕೆ ಪೆಟ್ರೋಲಿಯಂ ಉತ್ಪನ್ನಗಳ ತೀವ್ರ ಹೆಚ್ಚಳದ ಫಲಿತಾಂಶ. ಏಕೆಂದರೆ ಇವು ಇತರೆಲ್ಲ ಸರಕುಗಳ ಬೆಲೆಗಳನ್ನು ತಟ್ಟುವ ಸಾರ್ವತ್ರಿಕ ಮಧ್ಯವರ್ತಿ. ಆದಾಯಗಳನ್ನು ಕಳಕೊಂಡು ಅಥವ ಕಡಿತವಾಗಿ ಜನಗಳು ನರಳುತ್ತಿರುವ ಸನ್ನಿವೇಶದಲ್ಲಿ ಅಗತ್ಯ ಸರಕುಗಳು ಮತ್ತು ಆಹಾರ ವಸ್ತುಗಳ ಬೆಲೆಗಳಲ್ಲಿ ಏರಿಕೆ ಅವರಿಗೆ ಒಂದು ದುಪ್ಪಟ್ಟು ಹೊಡೆತ.

ಆರ್ಥಿಕ ಬಿಕ್ಕಟ್ಟಿನ ಇನ್ನೊಂದು ಆಯಾಮವೆಂದರೆ, ಹೊರೆಯನ್ನು ರಾಜ್ಯಗಳ ಮೇಲೆ ದಾಟಿಸುವ ಕೇಂದ್ರ ಸರಕಾರದ ಸಿನಿಕ ಪ್ರಯತ್ನಗಳು. ನಿರ್ಲಕ್ಷ್ಯಪೂರ್ಣ ಮತ್ತು ಜನ-ವಿರೋಧಿ ಲಸಿಕೆ ಧೋರಣೆಯ ಅಂತಿಮ ಪರಿಣಾಮವಾಗಿ, ರಾಜ್ಯಗಳು ಲಸಿಕೆಗಳಿಗೆ ಹೆಚ್ಚಿನ ಬೆಲೆಗಳು ತೆರುವಂತಾಗಿದೆ ಮತ್ತು ಲಸಿಕೆಗಳನ್ನು ಜನಗಳಿಗೆ ಉಚಿತವಾಗಿ ಬದ್ಧವಾಗಿರುವುದರಿಂದಾಗಿ ಅದಕ್ಕೆ ಹೆಚ್ಚಿನ ವೆಚ್ಚವನ್ನು ಭರಿಸಬೇಕಾಗಿ ಬಂದಿದೆ.

ರಾಜ್ಯಗಳಿಗೆ ಜಿಎಸ್‌ಟಿ ಅಡಿಯಲ್ಲಿ ಕಾನೂನಿನ ಪ್ರಕಾರ ಸಲ್ಲಬೇಕಾಗಿರುವ ಬಾಕಿಗಳನ್ನು ಕೂಡ ನಿರಾಕರಿಸಲಾಗುತ್ತಿದೆ. ಕೊವಿಡ್ ಸಂಬಂಧಿ ಮಹತ್ವದ ಔಷಧಿಗಳು ಮತ್ತು ವೈದ್ಯಕೀಯ ಸಲಕರಣೆಗಳ ಮೇಲೆ ತೆರಿಗೆ ವಿನಾಯ್ತಿಗಳನ್ನು ಪರಿಶೀಲಿಸಲು ಕೂಡ ಕೇಂದ್ರ ಸರಕಾರ ನಿರಾಕರಿಸುತ್ತಿದೆ. ಜಿಎಸ್‌ಟಿ ಮಂಡಳಿ ಸಭೆಯಲ್ಲಿ ಈ ವಿಷಯವನ್ನು ಪರಿಶೀಲಿಸಲೆಂದು ಒಂದು ಮಂತ್ರಿಗಳ ಗುಂಪನ್ನು ರಚಿಸಿ ಈ ಪ್ರಶ್ನೆಯನ್ನು ಬದಿಗೆ ಸರಿಸಲಾಗಿದೆ.

ಲಸಿಕೆ ಇರಲಿ, ಅಥವ ನಗದು ಸಬ್ಸಿಡಿಗಳಿಗಾಗಿ ರಾಜ್ಯಗಳಿಗೆ ಹಣಕಾಸು ನೆರವು ಒದಗಿಸುವುದಿರಲಿ, ಕೇಂದ್ರ ಸರಕಾರ ತನ್ನ ಹೊಣೆಗಾರಿಕೆಗಳನ್ನು ಜಾರಿಸಿಕೊಳ್ಳುತ್ತಿದೆ. ಇದು ಮಾಯಾಮಂತ್ರದ ವಿಜ್ಞಾನ ಮತ್ತು ಮಾಯಾಮಂತ್ರದ ಅರ್ಥಶಾಸ್ತ್ರದ ಪ್ರಕರಣ ಆಗಿ ಬಿಟ್ಟಿದೆ.

ಕೇಂದ್ರ ಸರಕಾರ ಸಾರಾ ಸಗಟು ಲಸಿಕೆಗಳನ್ನು ಪಡೆದು, ಅವನ್ನು ರಾಜ್ಯಗಳಿಗೆ ವಿತರಿಸುವ ಮೂಲಕ ಎಲ್ಲರಿಗೂ ಉಚಿತ ಲಸಿಕೆಯನ್ನು ಖಾತ್ರಿಪಡಿಸುವಂತಹ ಹೋರಾಟವನ್ನು ಎಲ್ಲ ಪ್ರತಿಪಕ್ಷಗಳು ನಡೆಸುವ ರಾಜ್ಯ ಸರಕಾರಗಳು, ಸಂಬಂಧಪಟ್ಟ ರಾಜಕೀಯ ಪಕ್ಷಗಳು ಮತ್ತು ಸಾಮಾಜಿಕ ಸಂಘಟನೆಗಳು ನಡೆಸಬೇಕಾಗಿದೆ. ಜನಗಳಿಗೆ ತುರ್ತು ಪರಿಹಾರವನ್ನು ಕೊಡಿಸುವ ಹೋರಾಟ, ನಗದು ಸಬ್ಸಿಡಿ, ಮನರೇಗ ನಿಧಿಗಳು, ಉಚಿತ ಆಹಾರಧಾನ್ಯಗಳು ಮತ್ತು ಸಂಬಂಧಪಟ್ಟ ಸಾಮಗ್ರಿಗಳು, ನಿರುದ್ಯೋಗ ಭತ್ತೆ ಮತ್ತು ಸಾರ್ವಜನಿಕ ಆರೋಗ್ಯ ವೆಚ್ಚದ ಬಾಬ್ತಿನಲ್ಲಿ ಹೆಚ್ಚಳ ಇವನ್ನೆಲ್ಲ ಪಡೆಯುವ ಹೋರಾಟ ಮುಂಬರುವ ದಿನಗಳಲ್ಲಿ ಎಲ್ಲ ಪ್ರಜಾಪ್ರಭುತ್ವವಾದಿ, ರಾಜಕೀಯ ಮತ್ತು ಸಾಮಾಜಿಕ ಶಕ್ತಿಗಳಿಗೆ ಜನಗಳನ್ನು ಅಣಿನೆರೆಸುವ ಅಂಶವಾಗಬೇಕು.

ತೇಜಪಾಲ್ ಅತ್ಯಾಚಾರ ಪ್ರಕರಣ ತೀರ್ಪು: ಮಹಿಳೆಯರ ಸುರಕ್ಷಿತೆಗೆ ಮಾರಕ

ಮೇಲಧಿಕಾರಿಯಾಗಿದ್ದ ತಂದೆಯ ವಯಸ್ಸಿನ ಅತ್ಯಾಚಾರದ ಆರೋಪಿಗೆ ಅನುಕೂಲವಾಗುವಂತೆ, ಅತ್ಯಾಚಾರದ ಸಂತ್ರಸ್ತೆಯನ್ನು ಅತ್ಯಂತ ಕೆಟ್ಟ ರೀತಿಯಲ್ಲಿ ದೂಷಿಸಿದ್ದಕ್ಕೆ ಮತ್ತು ಅವಮಾನ ಮಾಡಿದ್ದಕ್ಕೆ ಈ ತೀರ್ಪು ಇತಿಹಾಸದಲ್ಲಿ ತನ್ನ ಸ್ಥಾನವನ್ನು ಪಡೆದುಕೊಳ್ಳುತ್ತದೆ. ಈ ತೀರ್ಪನ್ನು ಎಷ್ಟು ಬೇಗ ರದ್ದು ಮಾಡಲು ಸಾಧ್ಯವೋ ಅಷ್ಟು ಒಳ್ಳೆಯದು. ಈ ಮುಂದಿನ ಅತ್ಯಾಚಾರ ಪ್ರಕರಣಗಳಿಗೆ ಇದು ಒಂದು ಪೂರ್ವ–ದೃಷ್ಟಾಂತವಾದರೆ, ಕೆಲಸ ಸ್ಥಳದಲ್ಲಿ ನಡೆಯುವ ಲೈಂಗಿಕ ದುರ್ಬಳಕೆ ಮತ್ತು ಹಿಂಸಾಚಾರದ ಬಗ್ಗೆ ಮಾತನಾಡಲು ಮುಂದೆ ಬರುವ ಧೈರ್ಯವನ್ನು ಯಾವ ಮಹಿಳೆಯೂ ಮಾಡಲಿಕ್ಕಿಲ್ಲ.

ಬೃಂದಾ ಕಾರಟ್

ಸುದ್ದಿ ಪತ್ರಿಕೆಯೊಂದರ (ತೆಹಲ್ಕಾ) ಮಾಜಿ ಸಂಪಾದಕ ತರುಣ್ ತೇಜಪಾಲ್, ತನ್ನ ಕಿರಿಯ ಉದ್ಯೋಗಿಯ ಮೇಲೆ ನವೆಂಬರ್ 2013 ರಲ್ಲಿ ಅತ್ಯಾಚಾರ ಎಸಗಿದ ಆರೋಪದ ಮೇಲೆ, ನಡೆದ ಪ್ರಕರಣದಲ್ಲಿ ಹೆಚ್ಚುವರಿ ಸೆಶನ್ಸ್ ಜಜ್ ನೀಡಿದ ತೀರ್ಪಿನ ವಿರುದ್ಧ, ಭಾರತೀಯ ಜನತಾ ಪಕ್ಷದ ನೇತೃತ್ವದ ರಾಜ್ಯ ಸರಕಾರ ಗೋವಾ ಹೈಕೋರ್ಟ್‌ನಲ್ಲಿ ಸರಿಯಾಗಿಯೇ ಮೇಲ್ಮನವಿ ಸಲ್ಲಿಸಿದೆ. ನಿರ್ಭಯ ಪ್ರಕರಣದ ನಂತರ (ಅತ್ಯಾಚಾರ ಕಾನೂನುಗಳಲ್ಲಿ) ಸೇರಿಸಲಾದ ಕಲಮುಗಳಡಿಯಲ್ಲಿ ತರುಣ್ ತೇಜಪಾಲ್ ಅವರ ವಿಚಾರಣೆ ನಡೆದಿತ್ತು. ಆರೋಪಿಯು, ಸಂತ್ರಸ್ತೆ ಯುವತಿಯ ಮೇಲೆ 'ಶಕ್ತಿ, ಅಧಿಕಾರ ಮತ್ತು ವಿಶ್ವಾಸದ ಸ್ಥಾನದಲ್ಲಿದ್ದ' ಎಂಬ ಕಲಮು ಸಹ ಇವುಗಳಲ್ಲಿ ಸೇರಿದೆ.

ತೆಹಲ್ಕಾ ಸಂಪಾದಕರಾಗಿ ತೇಜಪಾಲ್ ಬಿಜೆಪಿ ಟೀಕಾಕಾರನಾಗಿದ್ದರಿಂದ, ಆತನ ಮೇಲೆ ಇದು ಬಿಜೆಪಿಯ 'ರಾಜಕೀಯ ಸೇಡಿನ ಪ್ರಕರಣ ಎಂಬ ವಾದದಿಂದಲೋ ಅಥವಾ ಅತ್ಯಾಚಾರ ಪ್ರಕರಣಗಳಲ್ಲಿ (ಯಾರು ಆರೋಪಿ ಎಂಬುದರ ಮೇಲೆ ಭಿನ್ನ ಪ್ರತಿಕ್ರಿಯೆ ತೋರುವ) ಬಿಜೆಪಿಯ ಗೋಸುಂಬೆತನದಿಂದಲೋ, ಇಲ್ಲಿ ನಾವು ದಾರಿ ತಪ್ಪಬಾರದು.


ಸಂತ್ರಸ್ತೆಯ ಹೋರಾಟ

ಸಂತ್ರಸ್ತೆ ಯುವತಿಯು ರಾಜಕೀಯ ಉದ್ದೇಶಗಳನ್ನು ಹೊಂದಿದವರ ಕೈಗೊಂಬೆಯಲ್ಲ. ಇಷ್ಟು ವರ್ಷಗಳು ಆ ಯುವತಿಯು ಅತ್ಯಂತ ಕಠಿಣ ಹೋರಾಟವನ್ನು ಮಾಡಿದ್ದಾಳೆ.

ತೀರ್ಪು ಇದನ್ನು ಮುಚ್ಚಿಡಲು ಎಷ್ಟೇ ಪ್ರಯತ್ನಪಟ್ಟರೂ, ತೀರ್ಪಿನ 527 ಪುಟಗಳ ಉದ್ದಕ್ಕೂ ಅವಳ ಧ್ವನಿಯನ್ನು ನಾವು ಕೇಳುತ್ತೇವೆ – ಪ್ರಾಮಾಣಿಕತೆ ಮತ್ತು ಧೈರ್ಯದಿಂದ ಮಾತಾಡುವ ಧ್ವನಿ; ತಂದೆಯ ಸ್ಥಾನದಲ್ಲಿ ನೋಡುತ್ತಿದ್ದ ತನ್ನ ಆತ್ಮೀಯ ಗೆಳತಿಯ ತಂದೆಯಿಂದಲೇ ಲೈಂಗಿಕ ದೌರ್ಜನ್ಯಕ್ಕೆ ಒಳಗಾದವಳ, ಆಂತರಿಕ ತುಮುಲದಲ್ಲಿ ಛಿದ್ರಗೊಂಡವಳ ಧ್ವನಿ ಅದು; ಅನೇಕ ಸಂಬಂಧಗಳು ನಾಜೂಕಿನ ಸ್ಥಿತಿಯಲ್ಲಿರುವುದರಿಂದ, ವಿಷಾದ, ಕೋಪವಿದ್ದರೂ ಸಹಜವಾಗಿ ವರ್ತಿಸುತ್ತಾ ಕೆಲಸದ ಸ್ಥಳದಲ್ಲಿ ತನ್ನ ಕರ್ತವ್ಯ ನಿರ್ವಹಿಸುವವಳ ಧ್ವನಿ ಅದು. ಆರೋಪಿ ಪುರುಷ ಮೇಲಧಿಕಾರಿ ಅಷ್ಟೇ ಅಲ್ಲದೆ, ಅಧಿಕಾರದಲ್ಲಿರುವ ಮಹಿಳೆಯರು ಸಹ ಈ ರೀತಿಯ ಲೈಂಗಿಕ ದೌರ್ಜನ್ಯಗಳನ್ನು ಸಾಮಾನ್ಯವೆಂದು ಪರಿಗಣಿಸುವ, ಕೆಲಸದ ಸ್ಥಳಗಳಲ್ಲಿ ಮಹಿಳೆಯನ್ನು ಲೈಂಗಿಕಗೊಳಿಸಿರುವ ಭಯಾನಕ ಸ್ವರೂಪವನ್ನು ಅಪ್ರಜ್ಞಾಪೂರ್ವಕವಾಗಿ ಬಹಿರಂಗಗೊಳಿಸುತ್ತದೆ ಅವಳ ಧ್ವನಿ.

"ಒಬ್ಬ ಲೈಂಗಿಕ ದೌರ್ಜನ್ಯದ ಸಂತ್ರಸ್ತೆ ತೋರಿಸಬಹುದಾದ ಯಾವುದೇ ರೀತಿಯ ಸಾಮಾನ್ಯ ನಡವಳಿಕೆಯನ್ನು ಈಕೆ ತೋರಿಸುತ್ತಿಲ್ಲ". ಎಂದು ಹೇಳುವ ಮೂಲಕ ತೀರ್ಪು, ಆರೋಪಿಯನ್ನು ಬಲಿಪಶು ಎನ್ನುವಂತೆ ಮತ್ತು ದೌರ್ಜನ್ಯಕ್ಕೆ ಒಳಗಾದ ಯುವತಿಯನ್ನೇ ಆರೋಪಿಯನ್ನಾಗಿ ಪರಿವರ್ತಿಸುತ್ತದೆ.

ಇದು 1979ರ ಪ್ರಕರಣವೊಂದನ್ನು ನೆನಪಿಸುತ್ತದೆ. ಅತ್ಯಾಚಾರದ ಸಂತ್ರಸ್ತೆ ತನ್ನ ದೇಹದ ಮೇಲೆ ಆದ ಗಾಯದ ಗುರುತುಗಳ ಮೂಲಕ, ತನ್ನ ಮೇಲೆ ನಡೆದದ್ದು ಲೈಂಗಿಕ ದೌರ್ಜನ್ಯ, ಅದು ಅವಳ ಸಮ್ಮತಿಯಿಂದ ನಡೆದಿದ್ದಲ್ಲ ಎಂದು ಸಾಬೀತುಪಡಿಸಬೇಕಾಗಿತ್ತು. 2021ರ ತೀರ್ಪಿನಲ್ಲಿಯೂ ಇದೇ ರೀತಿಯಾಗಿದೆ. ಅತ್ಯಾಚಾರದ ಸಂತ್ರಸ್ತೆಯ ನಡುವಳಿಕೆಯ ಕುರಿತು ನ್ಯಾಯಾಲಯಗಳಿಗೆ ಇರುವ ಪೂರ್ವ ನಿಶ್ಚಿತ ಕಲ್ಪನೆಗಳಿಗೆ ಇವಳ



ವರ್ತನೆ ಹೊಂದಿಕೊಳ್ಳದ ಕಾರಣ, ದೌರ್ಜನ್ಯಕ್ಕೆ ಒಳಗಾದ ಯುವತಿಯನ್ನೇ ಸುಳ್ಳುಗಾರಳೆಂದು ಪರಿಗಣಿಸಲಾಯಿತು. ನಾಲ್ಕು ದಶಕಗಳಿಂದ ನಡೆದ ಮಹಿಳೆಯರ ಹೋರಾಟಗಳು – ಕಾನೂನಿನಲ್ಲಿ, ಇಂತಹ ಪ್ರಕರಣಗಳನ್ನು ನಿರ್ವಹಿಸುವಲ್ಲಿ, ದೌರ್ಜನ್ಯಕ್ಕೆ ಒಳಗಾದ ಮಹಿಳೆಯರನ್ನು ನೋಡುವ ವಿಧಾನಗಳಲ್ಲಿ – ತಂದ ಬದಲಾವಣೆಗಳು ಯಾವುವೂ ಈ ತೀರ್ಪಿಗೆ ಪ್ರಸ್ತುತವೆನಿಸಿಲ್ಲ ಎಂದು ಕಾಣುತ್ತದೆ.

ಅತ್ಯಾಚಾರಕ್ಕೆ ಒಳಗಾದ ಮಹಿಳೆಯ ಹೇಳಿಕೆಗೆ ಕಾನೂನು "ವಿಶ್ವಾಸಾರ್ಹ ಮತ್ತು ನಿಷ್ಕಪಟ" ಎಂದು ಗೌರವ ನೀಡುತ್ತದೆ. ಆದರೆ ಈಗಿನ ತೀರ್ಪು ಇದಕ್ಕೆ ಹೊಸ ಮತ್ತು ಅಪಾಯಕಾರಿ ವ್ಯಾಖ್ಯಾನವನ್ನು ನೀಡಿದೆ. "ಯಾರ ಸಾಕ್ಷಿ ಇಲ್ಲಿ ನಿಷ್ಕಪಟ?" ಎಂಬ ಪ್ರಶ್ನೆಯನ್ನು ಕೇಳುತ್ತದೆ. ಆ ನಂತರ ಈ ತೀರ್ಪು, ಸಂತ್ರಸ್ತೆಯ ಹೇಳಿಕೆ 'ನಿಷ್ಕಪಟವಲ್ಲ' ಎಂದು ಸಾಬೀತು ಪಡಿಸಲು ಆರೋಪಿ ಪರ ವಕೀಲರು ಮಂಡಿಸಿದ ಪ್ರತಿಯೊಂದು ಅತ್ಯಂತ ಆಕ್ಷೇಪಾರ್ಹ ಆರೋಪಗಳನ್ನು ಒಪ್ಪಿಕೊಳ್ಳುತ್ತದೆ.

ಗೌಪ್ಯತೆ ಕಾನೂನುಗಳ ಉಲ್ಲಂಘನೆ

ಸಂತ್ರಸ್ತೆಯ ಸಂಪೂರ್ಣ ವೈಯಕ್ತಿಕ ವಿವರಗಳು, ಅವಳ ವಾಟ್ಸಪ್ ಸಂದೇಶಗಳು, ವೈಯಕ್ತಿಕ ಇಮೈಲ್‌ಗಳು, ಅವಳ ಮತ್ತು ಅವಳ ಕುಟುಂಬದವರ ಹೆಸರುಗಳು, ಛಾಯಾಚಿತ್ರಗಳು ಮತ್ತು ವೈಯಕ್ತಿಕ, ಸಾಮಾಜಿಕ ಸಂಬಂಧಗಳನ್ನು – ಲೈಂಗಿಕ ದೌರ್ಜನ ಆರೋಪಕ್ಕೆ ಯಾವುದೇ ಸಂಬಂಧ ಇಲ್ಲದಿದ್ದರೂ ಈ ತೀರ್ಪಿನಲ್ಲಿ ಉಲ್ಲೇಖಿಸಿ, ಹಲವು ಕಾನೂನುಗಳ ಉಲ್ಲಂಘನೆ ಮಾಡಿ, ಅವಳ ಖಾಸಗಿತನ ಮತ್ತು ಗೌಪ್ಯತೆಯ ಹಕ್ಕಿನ ಮೇಲೆ ಭೀಕರ ಆಕ್ರಮಣವನ್ನು ಮಾಡಲಾಗಿದೆ. ಇದಕ್ಕೆ ತದ್ವಿರುದ್ಧವಾಗಿ ನ್ಯಾಯಾಲಯವು ಆರೋಪಿಗೆ ಸಂಪೂರ್ಣ ರಕ್ಷಣೆಯನ್ನು ಕೊಡುತ್ತದೆ. ಆರೋಪಿಯ ಹಿಂದಿನ ಹಲವು ದುರ್ವರ್ತನೆಗಳನ್ನು ಪರಿಗಣಿಸುವುದಿಲ್ಲ. ಆರೋಪಿಯು ದೌರ್ಜನ್ಯಕ್ಕೆ ಒಳಗಾದ ಮಹಿಳೆಗೆ ಮಾನಸಿಕವಾಗಿ ಹಿಂಸೆ ನೀಡಿ ಕಳುಹಿಸಿದ (ಆರೋಪಿ ಸಂತ್ರಸ್ತೆಗೆ ನೀಡಿದ ದೈಹಿಕ ಕಿರುಕುಳದ ಕುರುಹು ತೋರುವ) 'ಬೆರಳತುದಿ'ಯ ಕುರಿತ ವಾಟ್ಸಾಪ್ ಸಂದೇಶಗಳನ್ನು ಸಹ ಪಕ್ಕಕ್ಕೆ ತಳ್ಳುತ್ತದೆ ಮತ್ತು ಅವುಗಳನ್ನು ನಿರ್ಲಕ್ಷಿಸಲಾಗುತ್ತದೆ.

ಮತ್ತೊಂದೆಡೆ ಸಂತ್ರಸ್ತೆಯು ತನ್ನ ಬದುಕು ಮತ್ತು ವೈಯಕ್ತಿಕ ಸ್ನೇಹದ ಬಗ್ಗೆ ಎಳೆಎಳೆಯಾಗಿ ಹೇಳಬೇಕಾಗುತ್ತದೆ. ಇಂತಹದನ್ನು ತೀರ್ಪಿನಲ್ಲಿ ದಾಖಲಿಸಲಾಗುತ್ತದೆ. ಈ ಕುರಿತ ಕ್ರೂರ ಮತ್ತು ಅನಾಗರಿಕ ಪಾಟೀಸವಾಲನ್ನು ಎದುರಿಸಬೇಕಾಗುತ್ತದೆ. ಭಾರತದ (ಎವಿಡೆನ್ಸ್) ಪುರಾವೆಗಳ ಕಾಯ್ದೆಯ ಸೆಕ್ಷನ್ 53ಎ ಅಡಿಯಲ್ಲಿ, ಸಂತ್ರಸ್ತೆಯ ಹಿಂದಿನ ಲೈಂಗಿಕ ಇತಿಹಾಸದ ಕುರಿತು ಪ್ರಸ್ತಾಪ ಮಾಡಬಾರದು ಎಂಬ ಪ್ರೋಸೆಕ್ಯೂಷನ್ ಆಕ್ಷೇಪಣೆಯನ್ನು ಎತ್ತಿ ಹಿಡಿದರೂ, ತೀರ್ಪಿನಲ್ಲಿ "ತೋರಿಸಿರುವ ಸಂದೇಶಗಳು ಸಂತ್ರಸ್ತೆಯ ಅನೈತಿಕ ಗುಣ ಅಥವಾ ಒಪ್ಪಿಗೆಯನ್ನು ಸಾಬೀತುಪಡಿಸುವ ಉದ್ದೇಶದಿಂದಲ್ಲ, ಆದರೆ ಆಕೆ ಹಲವು ಸಂಗತಿಗಳನ್ನು ಮುಚ್ಚಿಟ್ಟಳು ಎಂಬುದನ್ನು ಸಾಬೀತುಪಡಿಸಲು ಮಾತ್ರ" ಎಂದು ಅದನ್ನು ಸಮರ್ಥಿಸಿಕೊಳ್ಳುತ್ತದೆ. ಇದು ಸಂತ್ರಸ್ತೆಯ ಚಾರಿತ್ರ ವಧೆಗೆ ಹಂತಕನ ಚೂರಿಗೆ ಕೊಡುವ ಮುಕ್ತ ಪರವಾನಿಗೆಯಲ್ಲದೆ ಮತ್ತೇನೂ ಅಲ್ಲ.

ಆರೋಪಿಯ ವಿರುದ್ಧ ಗಟ್ಟಿಯಾಗಿ ಎಲ್ಲವನ್ನೂ ಹೇಳುವ ಸಾಕ್ಷ್ಯವೆಂದರೆ ಆತನ ಸ್ವಂತ "ವೈಯಕ್ತಿಕ ಕ್ಷಮೆಯಾಚನೆ". ಆರೋಪಿಯ ಪರವಾಗಿ ಸಂತ್ರಸ್ತೆಯ ಜೊತೆ ಮಾತುಕತೆ ನಡೆಸಿದ ಹಿರಿಯ ಮಹಿಳಾ ಅಧಿಕಾರಿ ಪ್ರಸ್ತುತಪಡಿಸಿದ "ಅಧಿಕೃತ ಕ್ಷಮೆಯಾಚನೆ"ಯ ಈ ಕರಡು ಮತ್ತು ಆಕೆಯ ಜೊತೆಗಿನ ಸಂಭಾಷಣೆಗಳ ದಾಖಲೆಗಳು, ದೂರುದಾರ ಸಂತ್ರಸ್ತೆಗೆ ಯಾವುದೇ ಅನ್ಯ ದುರುದ್ದೇಶವಿರಲಿಲ್ಲ ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತವೆ. ತೀರ್ಪಿನಲ್ಲಿ ಉಲ್ಲೇಖಿಸಿರುವಂತೆ, ಆರೋಪಿ ಕ್ಷಮೆ ಯಾಚನೆಯಲ್ಲಿ ಹೇಳಿರುವ 'ಹೌದು, ನಾನು ನಿನ್ನ ಮೇಲಧಿಕಾರಿ' ಎಂದು ಹೇಳಿದ್ದಕ್ಕೆ 'ಆದ್ದರಿಂದ ಎಲ್ಲವೂ ಇನ್ನೂ ಸುಲಭವಾಗುತ್ತದೆ' ಎಂದು ಉತ್ತರಿಸಿದ್ದೆ", 'ನನ್ನದೇ ಮಗಳ ಆತ್ಮೀಯ ಗೆಳತಿಯೊಂದಿಗೆ ರಹಸ್ಯ ಸಂಬಂಧ', "ಈ ವರ್ತನೆಯ ಕುರಿತು ಅವಳಿಗೆ ಸಹಮತವಿಲ್ಲ ಎಂದು ನನಗೆ ಗೊತ್ತಿರಲಿಲ್ಲ". – ಎನ್ನುವ ಮಾತುಗಳು, 'ಆ ಸಂದರ್ಭದಲ್ಲಿ ಅವಳು ಎಷ್ಟೇ ವಿರೋಧಿಸಿದ್ದರೂ ಅವನು ತನ್ನ ದುರ್ವರ್ತನೆಯನ್ನು ಮುಂದುವರೆಸಿದ್ದ' ಎಂಬ ಸಂತ್ರಸ್ತೆಯ ಆರೋಪಕ್ಕೆ ಸರಿಹೊಂದುವಂತೆ ಇದ್ದವು. ಆದರೂ ಈ ತೀರ್ಪು ಇವುಗಳನ್ನು ಪರಿಗಣಿಸುವುದಿಲ್ಲ.

ಆರೋಪಿಯ ಬಗೆಗಿನ ಸಹಾನುಭೂತಿ

ಈ ತೀರ್ಪಿನಲ್ಲಿ ಒಂದು ಅಸಾಧಾರಣ, ಅಭೂತಪೂರ್ವ ವ್ಯಾಖ್ಯಾನದೊಂದಿಗೆ, ಆರೋಪಿಯ ಕ್ಷಮೆಯಾಚನೆಯಲ್ಲಿ ನೀಡಿದ ಹೇಳಿಕೆಗಳು "ಸ್ವಯಂಪ್ರೇರಣೆಯಿಂದ ಕಳುಹಿಸಲಾಗಿಲ್ಲ ..ಆದರೆ ಕೇಸನ್ನು ಬೇಗನೇ ಮುಗಿಸಲು ಸಂತ್ರಸ್ತೆಯ ಒತ್ತಡ ಮತ್ತು ಬೆದರಿಕೆಗೆ ಮಣಿದು ಮತ್ತು ಮನವೊಲಿಕೆಗೆ ಮರುಳಾಗಿ ಈ ಕ್ಷಮೆಯಾಚನೆ ಕಳುಹಿಸಲಾಗಿದೆ" ಎಂದು ಹೇಳಿದೆ. ಆ ಮೂಲಕ, ಅತ್ಯಾಚಾರವೆಸಗಿದ ಮೇಲಧಿಕಾರಿಯಾದ



ಆರೋಪಿಯನ್ನು, ಸಂತ್ರಸ್ತೆಯ "ಕೈಚಳಕ ಮತ್ತು ಹಂಚಿಕೆ"ಯ ಸ್ವಭಾವದ ಸಂತ್ರಸ್ತನಾಗಿ ಬದಲಾಯಿಸಲಾಗಿದೆ. ಹಾಗಾಗಿ, ಆತನ ಕ್ಷಮೆಯಾಚನೆಯ ಹೇಳಿಕೆಯು "ಸ್ವಯಂಸ್ಫೂರ್ತವಲ್ಲ ಮತ್ತು ಆತನ ಆಶಯಗಳಿಗೆ ವಿರುದ್ಧವಾದ್ದು" ಎಂದಿದೆ. ಆರೋಪಿಯ ಬಗ್ಗೆ ಸಹಾನುಭೂತಿಯ ಮಾತುಗಳು ತೀರ್ಪಿನ ಉದ್ದಕ್ಕೂ ಪ್ಯಾರಾ ಪ್ಯಾರಾಗಳಿಂದಲೂ ಜಿಗಿಯುತ್ತವೆ. ಕೆಲವು ಉದಾಹರಣೆಗಳು – ಸಂತ್ರಸ್ತೆ "ಮಾಡಿದ ಆರೋಪದಿಂದ ಆರೋಪಿ ಪೂರ್ಣವಾಗಿ ಘಾಸಿಗೊಂಡಿದ್ದ", "ಇದು ಕೇವಲ ಕುಡಿದ ಅಮಲಿನಲ್ಲಿ ನಡೆದದ್ದು", ಸಂತ್ರಸ್ತೆ ಹೇಳುತ್ತಿರುವುದು "ಸತತವಾಗಿ ಸರಣಿ ಸುಳ್ಳುಗಳು", "ಅವಳು ಸತ್ಯವನ್ನು ತಿರುಚುತ್ತಿದ್ದಾಳೆ".

ಆರೋಪಿ ಮತ್ತು ಸಂತ್ರಸ್ತೆಯ ನಡುವೆ ತೀರ್ಪು ತೋರಿಸುವ ತಾರತಮ್ಯ ಅಷ್ಟಕ್ಕೆ ನಿಲ್ಲುವುದಿಲ್ಲ. ಘಟನೆಯ ಕೆಲವೇ ಗಂಟೆಗಳಲ್ಲಿ ಸಂತ್ರಸ್ತೆ ತನ್ನೊಂದಿಗೆ ನಡೆದ ದಾರುಣ ಅನುಭವವನ್ನು ತನ್ನ ಗೆಳೆಯರೊಂದಿಗೆ ಹಂಚಿಕೊಂಡಿದ್ದಾಳೆ. ಅವರೆಲ್ಲರ ಹೇಳಿಕೆಗಳು, ಅವಳು ಆಮೇಲೆ ಈ ಕಥೆಯನ್ನು ಕಟ್ಟಿದ್ದಲ್ಲ ಇದು ನಿಜವಾಗಿ ನಡೆದದ್ದು ಎಂದು ಸಾಬೀತುಪಡಿಸುತ್ತವೆ. ಆದರೆ ಇವೆಲ್ಲವೂ ಅವಳ ಸ್ನೇಹಿತರು ಹೇಳಿದ್ದು, ಆದ್ದರಿಂದ ಇವನ್ನು ಪರಿಗಣಿಸಲು ಆಗುವುದಿಲ್ಲ ಎಂದು ಹೇಳಿ ಈ ತೀರ್ಪು ಆ ಹೇಳಿಕೆಗಳನ್ನು ತಳ್ಳಿ ಹಾಕುತ್ತದೆ.. ಆದರೆ ಅದೇ ವೇಳೆ, ಆರೋಪಿಯ ಸಹೋದರಿ ಮತ್ತು ಅವನ ನಿಕಟ ಸಹೋದ್ಯೋಗಿಯ ಹೇಳಿಕೆಯನ್ನು ನಿಜವೆಂದು ಒಪ್ಪಿಕೊಳ್ಳಲಾಗುತ್ತದೆ.

ಅತ್ಯಾಚಾರಕ್ಕೊಳಗಾದವರು ಅನೇಕ ಸಾಮಾಜಿಕ ಕಾರ್ಯಕರ್ತರನ್ನು ಹಾಗೂ ವಕೀಲರನ್ನು ತಮ್ಮ ಸಹಾಯಕ್ಕಾಗಿ ಸಂಪರ್ಕಿಸುವುದು ಸಹಜ. ಇದನ್ನು ಈ ತೀರ್ಪಿನಲ್ಲಿ ಅಪರಾಧ ಎನ್ನುವಂತೆ ನೋಡಲಾಗಿದೆ. ಹಿರಿಯ ವಕೀಲರಾದ ಇಂದಿರಾ ಜೈಸಿಂಗ್ ಅವರನ್ನು "ಮೋಸದಿಂದ ತಿದ್ದುವ" ಹಾಗೂ "ಘಟನೆಗಳನ್ನು ಸೇರಿಸುವ" ಸಲಹಾಗಾರರಾಗಿ ಅನುಮಾನದಿಂದ ನೋಡಲಾಗಿದೆ.

ಈ ಪ್ರಕರಣದಲ್ಲಿ ನ್ಯಾಯಾಧೀಶರು ಮಹಿಳೆ ಆಗಿದ್ದು, ಈ ತೀರ್ಪಿನ ದೃಷ್ಟಿಕೋಣ, ಲಿಂಗದ ಮೇಲೆ ಆಧಾರಿತವಲ್ಲ. ಬದಲಿಗೆ ಸಾಮಾಜಿಕ ವಾಸ್ತವತೆಯ ಬಗ್ಗೆ ಇರುವ ದೃಷ್ಟಿಕೋನವನ್ನು ನಿರ್ಧರಿಸುವ ಸಿದ್ಧಾಂತದ ಮೇಲೆ ಆಧಾರಿತವಾಗಿದೆ ಎಂದು ಸ್ಪಷ್ಟವಾಗುತ್ತದೆ. ಮೇಲಧಿಕಾರಿಯಾಗಿದ್ದ ತಂದೆಯ ವಯಸ್ಸಿನ ಅತ್ಯಾಚಾರದ ಆರೋಪಿಗೆ ಅನುಕೂಲವಾಗುವಂತೆ, ಅತ್ಯಾಚಾರದ ಸಂತ್ರಸ್ತೆಯನ್ನು ಅತ್ಯಂತ ಕೆಟ್ಟ ರೀತಿಯಲ್ಲಿ ದೂಷಿಸಿದ್ದಕ್ಕೆ ಮತ್ತು ಅವಮಾನ ಮಾಡಿದ್ದಕ್ಕೆ ಈ ತೀರ್ಪು ಇತಿಹಾಸದಲ್ಲಿ ತನ್ನ ಸ್ಥಾನವನ್ನು ಪಡೆದುಕೊಳ್ಳುತ್ತದೆ. ಈ ತೀರ್ಪನ್ನು ಎಷ್ಟು ಸಾಧ್ಯವೋ ಅಷ್ಟು ಬೇಗ ರದ್ದು ಮಾಡುವುದು ಒಳ್ಳೆಯದು.. ಮುಂದೆ ನಡೆಯಬಹುದಾದ ಅತ್ಯಾಚಾರ ಪ್ರಕರಣಗಳಿಗೆ ಇದು ಒಂದು ಪೂರ್ವ–ದೃಷ್ಟಾಂತವಾದರೆ, ಕೆಲಸ ಸ್ಥಳದಲ್ಲಿ ನಡೆಯುವ ಲೈಂಗಿಕ ದುರ್ಬಳಕೆ ಮತ್ತು ಹಿಂಸಾಚಾರದ ಬಗ್ಗೆ ಮಾತನಾಡಲು ಮುಂದೆ ಬರುವ ಧೈರ್ಯವನ್ನು ಯಾವ ಮಹಿಳೆಯೂ ಮಾಡಲಿಕ್ಕಿಲ್ಲ. ಸಮಾಜಕ್ಕೆ ಇದೊಂದು ದೊಡ್ಡ ದುರಂತವಾಗುತ್ತದೆ.

ಮೈಥಿಲಿ ಎಂಬ ಮಮತೆಯ ಮಡಿಲು, ಸಮತೆಯ ಒಡಲು....

ಕೆ.ಎಸ್. ವಿಮಲ

ಕೊವಿಡ್ ಎಂಬ ವೈರಾಣು ಅದರ ಎರಡನೇ ಅಲೆ ಎಂಬ ಸುನಾಮಿಯ ಹೊಡೆತಕ್ಕೆ ಧರೆಗುರುಳಿದ ಮತ್ತೊಂದು ಮರ ಮೈಥಿಲಿ ಶಿವರಾಮನ್. ಅದೊಂದು ಆಲವಾಗಿತ್ತು. ಅದರ ಬಿಳಲುಗಳು ಸುತ್ತೆಲ್ಲ ಇವೆ. ಅದರ ಗಟ್ಟಿತನದ ಸತ್ವ ಪರೀಕ್ಷೆಯ ಕಾಲ ಇದು.



ಅಲ್ಲೊಂದು ವಿಶೇಷವಾದ ಶಕ್ತಿ ಇತ್ತು. ಅದು ಸೂಜಿಗಲ್ಲಿನಂತೆ ಸೆಳೆಯುವ ಮತ್ತು ಅಯಸ್ಕಾಂತದಂತೆ ಹಿಡಿದಿಡುವ ಅಷ್ಟೇ ಗಟ್ಟಿಯಾಗಿ ಸೈದ್ಧಾಂತಿಕ ಬದ್ಧತೆಯನ್ನು ರೂಢಿಸುವ ವ್ಯಕ್ತಿತ್ವವಾಗಿತ್ತು. ಮೈಥಿಲಿ ಶಿವರಾಮನ್ ವ್ಯಕ್ತಿ ಮಾತ್ರವಲ್ಲ ವ್ಯಕ್ತಿತ್ವವಾಗಿ ಗುರುತಿಸಬೇಕಾದವರು.

ಮಣ್ಣೊಂದನ್ನು ಮೂರ್ತಿಯಾಗಿಸಿದ ಶಿಲ್ಪಿ

ನಾನೊಂದು ಚಿಕ್ಕ ಸಸಿಯಾಗಿದ್ದೆ. ಆಗ ತಾನೇ ಬೀಜ ಒಡೆದು ಹೊರ ಪ್ರಪಂಚಕ್ಕೆ ಮೊಗ ಮಾಡಿ ನಿಲ್ಲುವ ಎಳೆ ಹಸಿರಿನ ಅರೆ ಕವಚ ಹೊತ್ತ ಸಸಿಯದು. ಹೊರಗಿನ ಪ್ರಪಂಚದ ಹಲವು ತಣ್ಣನೆಯ ಕ್ರೌರ್ಯಗಳಿಗೆ ಬಲಿಯಾಗಿಯೂ ಒಳಗಿನ ಹೆಣ್ತನದ ಘನತೆಯ ಭಾವಕ್ಕೆ ಕುಂದಾಗದಂತೆ ಬದುಕಲು ಹವಣಿಸುತ್ತಿದ್ದಾಗ, ಬಿರುಗಾಳಿ ಬೀಸುವಾಗ ಮೇಲಿನಿಂದ ಕಳಚಿ ಕೆಳಗಿಳಿದ ಎಲೆಯೇ ಸಸಿಗೆ ಕವಚ ಒದಗಿಸುವ ಹಾಗೆ ಒದಗಿ ಬಂದಿದ್ದು ಜನವಾದಿ. ಅಲ್ಲಿ ಸಿಕ್ಕ ಕೆಲವು ಅಪರೂಪದ ವ್ಯಕ್ತಿಗಳಲ್ಲಿ ಮೈಥಿಲಿ ಕೂಡಾ ಒಬ್ಬರು.

ಜಡ ಮೌಲ್ಯಗಳಿಗೆದುರಾಗಿ ಚೈತನ್ಯಶೀಲತೆ

ತಮಗರಿವಿಲ್ಲದೆಯೇ ಪುರುಷ ಶ್ರೇಷ್ಠತೆಯ ಮೌಲ್ಯಗಳಿಗೆ ನೀರೆರೆದು ಪೋಷಿಸುವ ಕೆಲಸಕ್ಕೆ ಮಹಿಳೆಯರೇ ತೊಡಗಿಬಿಡುವ ವಿಪರೀತಗಳು ನಮ್ಮ ಕಣ್ಣಮುಂದಿವೆ. ತಮ್ಮನ್ನೂ ತೊಡಗಿಸಿಕೊಂಡು ತಾವೇ ಅದಕ್ಕೆ ಬಲಿಯಾಗುವ ಮಹಿಳಾ ಸಮೂಹವೂ ಸೇರಿದಂತೆ ಇಡೀ ಸಮಾಜ ಈ ಮೌಲ್ಯಗಳ ಬಲಿಪಶು. ಅದರ ವಿರುದ್ಧ ಎದ್ದ ಧ್ವನಿಗಳಲ್ಲಿ ಒಂದು ಜನವಾದಿ. ಅದರ ಬೇರುಗಳಲ್ಲಿನ ಕಸುವು ಅದರ ಸಂಸ್ಥಾಪಕರಿಗೆ ಈ ಸಮಾಜ ಮತ್ತದರಲ್ಲಿ ಅಡಕಗೊಂಡಿರುವ ವರ್ಗ ಗುಣದ ಬಗ್ಗೆ ಇದ್ದ ಸ್ಪಷ್ಟತೆಯಾಗಿತ್ತು. ಅಲ್ಲಿ ತರಬೇಕಾದ ಬದಲಾವಣೆಗಳ ಬಗ್ಗೆ, ಪ್ರಗತಿ ಪರ ಮತ್ತು ಪುರುಷ ಶ್ರೇಷ್ಠ ಮೌಲ್ಯಗಳಿಗೆದುರಾಗಿ ಮಾನವೀಯ ಅರ್ಥಾತ್ ಮಹಿಳಾ ಪರ ಮೌಲ್ಯಗಳ ಕುರಿತು ಇದ್ದ ಸ್ಪಷ್ಟತೆಯಾಗಿತ್ತು. ಈ ಸ್ಪಷ್ಟತೆಯನ್ನು ಮೈಗೂಡಿಸಿಕೊಂಡವರು ಮೈಥಿಲಿ ಶಿವರಾಮನ್. ಅದಕ್ಕೆ ಬೇಕಾದ ಅಧ್ಯಯನಶೀಲತೆಗೂ ತನ್ನನ್ನು ತೆರೆದುಕೊಂಡು ಅಷ್ಟೇ ಸಶಕ್ತವಾಗಿ ನೆಲ ಮೂಲದಲ್ಲಿ ಮಹಿಳೆಯರನ್ನು ಸಂಘಟಿಸುವ ಹೋರಾಟಗಳಲ್ಲಿ ತೊಡಗಿಸುತ್ತ ತಾನೂ ಸಕ್ರಿಯವಾಗಿ ಪಾಲ್ಗೊಳ್ಳುವ ಮತ್ತು ತನ್ನೆಲ್ಲ ಶಕ್ತಿ ಸಾಮರ್ಥ್ಯವನ್ನು ಜನ ಚಳುವಳಿಗೆ ನಿಸ್ವಾರ್ಥವಾಗಿ ಒದಗಿಸಿದ ಮೈಥಿಲಿ ಒಂದು ರೀತಿಯ ಬೆರಗು.

ಅಧ್ಯಯನಕ್ಕೆ ಆಕರವಾಗುವ ಬದುಕು:

ಅವರ ಜೀವನದ ಒಂದೊಂದು ಎಳೆಗಳನ್ನು ಬಿಡಿಸಲು ಹೊರಟರೆ ಅಲ್ಲಿ ತೆರೆದುಕೊಳ್ಳುವ ಹಲವು ಸಂಗತಿಗಳು ಬಹುಷಃ ಜನ ಚಳುವಳಿಗಳ ಅದರಲ್ಲಿಯೂ ಮಹಿಳಾ ಚಳುವಳಿಗಳ ಹೊಸ ತಲೆಮಾರಿಗೆ ಅದೊಂದು ಅಧ್ಯಯನ ಕೇಂದ್ರವೆಂದರೆ ಅತಿಶಯೋಕ್ತಿಯಲ್ಲ. ತಿಳಿಯುವ ಆಸೆ ಇದ್ದರೆ ಬೆಳೆಯುವ ಮತ್ತು ಬೆಳೆಸುವ ಹಂಬಲವಿದ್ದರೆ ಮೈಥಿಲಿಯಂಥಹ ಆಲದಮರದ ಬಿಳಿಲುಗಳಾಗಿ ಗಟ್ಟಿಗೊಳ್ಳಲು ಎಷ್ಟೊಂದು ಆಕರಗಳು ಕೈಅಳತೆಯಲ್ಲಿವೆ.

ಹುಟ್ಟಿ ಬೆಳೆದಿದ್ದು ಈ ಸಮಾಜದ ಪರಿಭಾಷೆಯ ಒಂದು ಸುಶಿಕ್ಷಿತ, ಸುರಕ್ಷಿತ ಬ್ರಾಹ್ಮಣ ಕುಟುಂಬದಲ್ಲಿ. 60ರ ದಶಕದಲ್ಲಿ ಅವರ ವಿದ್ಯಾಭ್ಯಾಸ ನಡೆದಿದ್ದು ಅಮೇರಿಕಾದ ಸೈರಾಕ್ಯೂಸ್ ಯುನಿವರ್ಸಿಟಿಯಲ್ಲಿ. ಅದು ವಿಯಟ್ನಾಂ ಯುದ್ಧದ ವಿರುದ್ಧ ಜಗತ್ತಿನಾದ್ಯಂತ ಚರ್ಚೆ ನಡೆಯುತ್ತಿದ್ದ ಕಾಲಘಟ್ಟ, ಹಾಗೂ ಕರಿಯರ ಹಕ್ಕುಗಳ ಮಾತುಗಳು ಗಟ್ಟಿಗೊಳ್ಳುತ್ತಿದ್ದ ಮತ್ತು ಸ್ತ್ರೀವಾದ ತನ್ನ ಅಸ್ತಿತ್ವವನ್ನು ಪಡೆದುಕೊಳ್ಳುತ್ತಿದ್ದ ಕಾಲ. ಕಪ್ಪು ಜನರ ಹಕ್ಕುಗಳ ಹೋರಾಟದತ್ತ ತಾನು ಆಕರ್ಷಿತಳಾಗಿದ್ದೆ ಎಂದು ಮೈಥಿಲಿಯೇ ಹೇಳಿದ್ದರು.



ಸಾಮ್ರಾಜ್ಯಶಾಹಿಯ ವಿರುದ್ಧ ಗಟ್ಟಿಗೊಂಡ ಸೈದ್ಧಾಂತಿಕ ಬದ್ಧತೆ:

ತನ್ನ ವಿದ್ಯಾಭ್ಯಾಸದ ನಂತರ ಸುಮಾರು ಎರಡು ವರ್ಷ ಅವರು ವಿಶ್ವಸಂಸ್ಥೆಯ ಸಮಿತಿಯೊಂದರಲ್ಲಿ ಕಾರ್ಯನಿರ್ವಹಿಸಿದವರು ಮತ್ತು ಆ ಸಮಯದಲ್ಲಿ ಸಾಮ್ರಾಜ್ಯಶಾಹಿಯ ದುರುದ್ದೇಶಗಳನ್ನು, ಮನುಷ್ಯ ವಿರೋಧಿ ಧೋರಣೆಗಳನ್ನು ಅರ್ಥ ಮಾಡಿಕೊಳ್ಳಲು ಅವರಿಗೆ ಸಾಧ್ಯವಾಯಿತು. ಅದೇ ಸಂದರ್ಭದಲ್ಲಿ ಅಮೆರಿಕಾದ ಸೆರಗಿನಲ್ಲಿಯೇ ಕುಳಿತು ಸಾಮ್ರಾಜ್ಯಶಾಹಿಗೆ ಸವಾಲೊಡ್ಡುವ ಸೈದ್ಧಾಂತಿಕ ಸ್ಪಷ್ಟತೆಯ ಕ್ಯೂಬಾ ಎಂಬ ಪುಟ್ಟ ರಾಷ್ಟ್ರಕ್ಕೆ ಯಾವ ವೀಸಾ ಇಲ್ಲದೆಯೇ ಸಾಮಾನ್ಯ ಭಾಷೆಯಲ್ಲಿ ಹೇಳುವ ಕಾನೂನುಬಾಹಿರ ಭೇಟಿ ಕೊಟ್ಟ ಒಬ್ಬ ಗಟ್ಟಿಗಿತ್ತಿ. ಆ ಭೇಟಿ ಅವರೊಳಗೊಂದು ಅಚ್ಚಳಿಯದ ಪ್ರಭಾವವನ್ನು ಇಳಿಸಿಬಿಟ್ಟಿತು. ಈ ಬಗ್ಗೆ ಉಮಾ ಚಕ್ರವರ್ತಿಯವರು ಅವರ ಕುರಿತು ನಿರ್ಮಿಸಿದ ಸಾಕ್ಷ ಚಿತ್ರವೊಂದರಲ್ಲಿ ಅವರೇ ಹೇಳಿಕೊಳ್ಳುತ್ತಾರೆ. ಕ್ಯೂಬಾಗೆ ಭೇಟಿ ಕೊಡುವ ತಮ್ಮ ಆಸೆ ಮತ್ತು ಅದಕ್ಕಾಗಿ ಪಡೆದ ಸಲಹೆಗಳು ಅದರ ಆಧಾರದಲ್ಲಿ ನೇರವಾಗಿ ವಿಮಾನವೊಂದರ ಮೂಲಕ ಕೇವಲ ಒಂದು ಚಿಕ್ಕ ಬ್ಯಾಗ್ ಹಿಡಿದು ತಾನು ಹೇಗೆ ಭಾಷೆ ಬಾರದವಳ ಹಾಗೆ ನಟಿಸಿ ಕ್ಯೂಬಾಗೆ ಪ್ರಯಾಣ ಮಾಡಿದ್ದನ್ನು ಅವರ ಎಂದಿನ ಕಣ್ಣರಳಿಸಿ ಮಗುವಿನ ಮುಗ್ಧತೆಯ ಭಾವದಲ್ಲಿ ವಿವರಿಸಿದ್ದಾರೆ. ಅದೊಂದು ಟಪ್ಪಾಲು ಒಯ್ಯುವ ವಿಮಾನವಂತೆ. ಟಪ್ಪಾಲು ಮೂಟೆಗಳ ಜೊತೆ ಮೂಟೆಯಾಗಿ ಕುಳಿತು ಪ್ರಯಾಣಿಸಿದ್ದರಂತೆ!

ಕ್ಯೂಬಾಗೆ ಇಂಥಹ ಅಡ್ವೆಂಚರಿಸ್ಟ್ ಭೇಟಿ ಕೊಡುವ ಮೊದಲೇ ಅವರು ಫೋರ್ಡ್ ಫೌಂಡೇಷನ್ ನಲ್ಲಿ ಉದ್ಯೋಗಕ್ಕಾಗಿ ಸಂದರ್ಶನ ಕೊಟ್ಟಿದ್ದರಂತೆ. ಕ್ಯೂಬಾದಲ್ಲಿ ಅವರಿಗೆ ಗೈಡ್ ರೀತಿಯಲ್ಲಿ ಸಹಾಯ ಮಾಡಿದ ವ್ಯಕ್ತಿ ಅವರನ್ನು ಅವರ ಬದುಕಿನ ಮುಂದಿನ ಪ್ಲಾನ್ ಏನು ಎಂದು ಕೇಳಿದ್ದರಂತೆ. ಆಗ ತುಂಬ ಸರಳವಾಗಿ ಕೆಲಸಕ್ಕೆ ಕೊಟ್ಟ ಸಂದರ್ಶನದ ಕುರಿತು ಮತ್ತು ಅಲ್ಲಿಗೆ ಸೇರಿಕೊಳ್ಳುವ ಅಭಿಲಾಷೆಯನ್ನು ವ್ಯಕ್ತಪಡಿಸಿದರಂತೆ. ಆಗ ಆತನಿಗೆ ಆಶ್ಚರ್ಯವಾಗಿ ಇದು ಆಕೆಯ ಮುಗ್ಧತೆಯೋ ಅಥವಾ ಆಕೆಯನ್ನು ಪ್ರಭಾವಿಸಿದ ಅಂಶಗಳನ್ನು ಮುಂದೆ ಒಯ್ಯಲು ಅದು – (ಅವರು ಮುಂದೆ ಸೇರಿಕೊಳ್ಳಲಿರುವ ಉದ್ಯೋಗ) ಸಹಾಯವಾಗುತ್ತದೆಂಬ ವಿಶ್ವಾಸವಿದೆಯೇ ಎಂದು ಚಕಿತರಾಗಿದ್ದರಂತೆ. ಯಾಕೆಂದರೆ ಅಮೆರಿಕಾದ ಸವಾಲುಗಳಿಗೆ ಎದೆಯೊಡ್ಡಿ ಸೆಡ್ಡು ಹೊಡೆದು ನಿಂತ ಕ್ಯೂಬಾದ ಬಗ್ಗೆ ಕುತೂಹಲ ಇಟ್ಟುಕೊಂಡು ತನ್ನ ಜೀವವನ್ನೇ ಪಣಕ್ಕಿಟ್ಟು ಕಾನೂನುಬಾಹಿರವಾಗಿ ಕ್ಯೂಬಾಕ್ಕೆ ಬಂದಿಳಿದ ಯುವತಿ, ಫೋರ್ಡ್ ಫಂಡೇಷನ್ ನ ಉದ್ಯೋಗಾಕಾಂಕ್ಷಿ ಎಂಬುದೇ ಆತನಿಗೆ ಅಚ್ಚರಿ ಮೂಡಿಸಿತ್ತು. ಮೈಥಿಲಿಯೊಳಗೆ ಅದು ಬೀರಿದ ಪ್ರಭಾವವೆಂದರೆ ಅವರು ಆ ಕೆಲಸಕ್ಕೆ ಸೇರದಿರುವ ತೀರ್ಮಾನ ತೆಗೆದುಕೊಂಡಿದ್ದು.

ಮುಂದಿನ ದಿನಗಳಲ್ಲಿ ಸ್ಪಷ್ಟ ಸಮಾಜಮುಖೀ ಚಿಂತನೆಗಳನ್ನು ರೂಢಿಸಿಕೊಳ್ಳಲು ಮತ್ತು ಮಾನವ ಸಮೂಹಕ್ಕೆ ಒಳಿತು ಮಾಡುವ ಮೂಲ ಗುಣ ಇರುವುದು ಮಾರ್ಕ್ಸ್‌ವಾದಿ ಸಿದ್ಧಾಂತದಲ್ಲಿ ಎಂಬುದನ್ನು ಹುಡುಕಿಕೊಳ್ಳಲು ಕೂಡಾ ಕ್ಯೂಬಾದ ಘಟನೆ ಸಹಾಯವಾಯಿತೆನ್ನಬಹುದೇನೊ. ಕ್ಯೂಬಾಕ್ಕೆ ಭೇಟಿ ನೀಡಿದ ಸಮಯದಲ್ಲಿ ಅಲ್ಲಿನ ಕ್ರಾಂತಿಗೆ ಇನ್ನೂ ದಶಕವೂ ತುಂಬಿರಲಿಲ್ಲವಂತೆ. ಆದರೆ ಆ ವೇಳೆಗಾಗಲೇ ಭೂಸುಧಾರಣೆ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆಯಾಗಿ ಬಿಟ್ಟಿತ್ತು. ಚೆ ಗೆವೆರಾ ರ ಕನಸಿನ ಮೊದಲ ಗುರಿಯಾಗಿತ್ತು ಅದು. 1959ರಲ್ಲಿಯೇ ಭೂ ಸುಧಾರಣೆಯ ಕಾನೂನಿನ ಚಿತ್ರ ಸಿದ್ಧಗೊಳಿಸಿಕೊಂಡಿದ್ದ ಚೆ ಯ ಕನಸಿನ ಸಾಕಾರವನ್ನು ಕಣ್ಣಾರೆ ನೋಡುವ ಅವಕಾಶ ಮೈಥಿಲಿಗೆ ಸಿಕ್ಕಿತ್ತು. ಹಾಗೆಯೇ ಚೆ ಯ ಕ್ಯೂಬಾದಲ್ಲಿ 1961 ನೇ ಇಸವಿಯನ್ನು ಬೃಹತ್ ಸಮೂಹ ಸಾಕ್ಷರತೆಗಾಗಿ ಮುಡಿಪಿಟ್ಟು ಒಂದು ಲಕ್ಷ ಸ್ವಯಂ ಸೇವಕರನ್ನು ಗ್ರಾಮೀಣ ರೈತರಿಗೆ ಅಕ್ಷರಾಭ್ಯಾಸ ಮಾಡಿಸಲು ಸಜ್ಜುಗೊಳಿಸಲಾಗಿತ್ತು. ಉನ್ನತ ವ್ಯಾಸಂಗವೆಂಬುದು ಕನ್ನಡಿಯ ಗಂಟಾಗದಂತೆ ಎಲ್ಲರಿಗೂ ಲಭ್ಯವಾಗುವ ಜನಸಾಮಾನ್ಯರ ಅಗತ್ಯದಂತೆ ಪೂರೈಸಬೇಕೆಂಬ ದಿಟ್ಟ ಮತ್ತು ಸ್ಪಷ್ಟ ನಿಲುವು ಚೆ ಗೆವಾರ ರವರದ್ದಾಗಿತ್ತು. ಮುಂದೆ ತನ್ನ ಕಾರ್ಯಕ್ಷೇತ್ರದಲ್ಲಿ ಮೈಥಿಲಿ ಈ ಎರಡೂ ಕ್ಷೇತ್ರಗಳ ಬಗ್ಗೆ ಆಸಕ್ತಿ ವಹಿಸಿದ್ದರ ಹಿಂದೆ ಈ ಪ್ರಭಾವವಿತ್ತೆಂದು ನಾವು ಪರಿಗಣಿಸಬಹುದು.

ಹಲವು ಸಾಮರ್ಥ್ಯಗಳ ವ್ಯಕ್ತಿ ಮತ್ತು ರೂಪುಗೊಂಡ ವ್ಯಕ್ತಿತ್ವ:

ಮೈಥಿಲಿ ಒಬ್ಬ ಪತ್ರಕರ್ತೆಯಾಗಿ ಕೂಡಾ ಕೆಲಸ ನಿರ್ವಹಿಸಿದ್ದರು. ನಾಲ್ಕು ವರ್ಷಗಳ ಕಾಲ 'ದಿ ರ್‍ಯಾಡಿಕಲ್ ರಿವ್ಯೂ' ಸಂಪಾದಕಿಯಾಗಿ ಕೆಲಸ ಮಾಡಿದಾಗ ಭೂಸುಧಾರಣೆ ಮತ್ತು ಶಿಕ್ಷಣ ಕುರಿತು ಚರ್ಚೆ ಮಾಡುತ್ತಿದ್ದರು. ಇದು ಅವರ ರಾಜಕೀಯ ತಿಳುವಳಿಕೆಯನ್ನು ಇನ್ನಷ್ಟು ಹರಿತಗೊಳಿಸಲು ಸಹಾಯಕವಾಯಿತೆನ್ನಬಹುದು. 'ರ್‍ಯಾಡಿಕಲ್ ರಿವ್ಯೂ' ಪತ್ರಿಕೆಯಲ್ಲಿ ಕ್ಯೂಬಾ ಕ್ರಾಂತಿಯ ಕುರಿತು ಬಹಳ ಬರೆಯುತ್ತಿದ್ದರು ಮತ್ತು ಅದು ತನ್ನ ಸಾಮ್ರಾಜ್ಯಶಾಹಿ ವಿರೋಧಿ ನಿಲುವನ್ನು ಯಾವತ್ತೂ ಸಡಿಲಗೊಳಿಸದಂತೆ ನೋಡಿಕೊಂಡರು, ಕ್ಯೂಬಾ ಮಾದರಿಯೊಂದು ಭಾರತದಲ್ಲಿ ಹುಟ್ಟುವ ರೀತಿಯಲ್ಲಿ ಕಲ್ಪಿಸಿಕೊಳ್ಳುತ್ತಿರುವಷ್ಟರ ಮಟ್ಟಿಗೆ ಅವರ ಬರಹಗಳು ಇತ್ತೆಂದು ಅವರ 'ಹಾಂಟೆಡ್ ಬೈ ಫೈರ್' ಕೃತಿಯ ಪರಿಚಯದ ಪುಟಗಳಲ್ಲಿ ಬರೆಯಲಾಗಿದೆ.

ಜನಪರ ಕೆಲಸಗಳಲ್ಲಿ ತೊಡಗಿಕೊಳ್ಳಲು ಹುಡುಕಾಟ

ವಿಶ್ವ ಸಂಸ್ಥೆಯ ತನ್ನ ಕೆಲಸವನ್ನು ತೊರೆದು, ಫೋರ್ಡ್ ಫೌಂಡೇಷನ್ ಕೆಲಸಕ್ಕೂ ಸೇರಿಕೊಳ್ಳದೇ ಮೈಥಿಲಿ ಅಮೇರಿಕಾದಿಂದ ಭಾರತಕ್ಕೆ ವಾಪಸ್ ಬರುತ್ತಾರೆ. ತಾನು ತೊಡಗಿಕೊಂಡು ಕೆಲಸ ಮಾಡಬಹುದಾದ ಸಂಘಟನೆಗಳ ಹುಡುಕಾಟ ಶುರು ಇಟ್ಟುಕೊಳ್ಳುತ್ತಾರೆ. ಜಯಪ್ರಕಾಶ್ ನಾರಾಯಣ್ ರವರ ಮಾತುಗಳನ್ನು ಕೇಳುತ್ತಾರೆ. ಆ ಸಮಯದಲ್ಲಿ ಅವರಿಗೆ ಸಿಕ್ಕವರು ಕೃಷ್ಣಮ್ಮಾಳ್ ಮತ್ತು ಜಗನ್ನಾಥನ್ ಎಂಬಿಬ್ಬರು ತಮಿಳ್ನಾಡಿನ ದಲಿತರ ಮಧ್ಯೆ ಕೆಲಸ ಮಾಡುತ್ತಿದ್ದ ವಿನೋಬಾ ಭಾವೆಯವರ ಅನುಯಾಯಿಗಳು. ಅವರೇ ಸಾಕ್ಷ ಚಿತ್ರದಲ್ಲಿ ಹೇಳಿಕೊಂಡಂತೆ ವಿನೋಬಾ ಭಾವೆಯವರನ್ನು ಭೇಟಿ ಮಾಡುತ್ತಾರೆ. ಭೂದಾನ ಚಳುವಳಿಯನ್ನು ಗಮನಿಸುತ್ತಾರೆ. ಅಮೇರಿಕಾದಲ್ಲಿರುವಾಗಲೇ ಈ ಚಳುವಳಿಯನ್ನು ಗಮನಿಸಿದ ಇವರು ಮತ್ತು ಇವರ ಸ್ನೇಹಿತರು ಅದಕ್ಕಾಗಿ ಅಲ್ಲಿ ಹಣವನ್ನೂ ಸಂಗ್ರಹಿಸಿರುತ್ತಾರೆ. ಆದರೆ ಅಲ್ಲಿಗೆ ಭೇಟಿ ನೀಡಿದ ನಂತರ ಯಾಕೋ ಆ ಮಾರ್ಗದಲ್ಲಿ ಭೂಹಂಚಿಕೆ ಸರಾಗವಾಗಿ ಆಗದಿರಬಹುದೆಂಬ ಭಾವ ಅವರಿಗೆ ಬಂತೆಂದು ಅವರು ಒಂದು ಸಂದರ್ಶನದಲ್ಲಿ ಹಂಚಿಕೊಂಡ ಮಾತುಗಳಿಂದ ವ್ಯಕ್ತವಾಗುತ್ತದೆ. ಹಾಗೆಯೇ ವಿನೋಬಾ ಆಶ್ರಮದ ಪರಿಸರದ ರೆಜಿಮೆಂಟೇಷನ್ ಅವರಿಗೆ ಕಿರಿಕಿರಿ ಎನಿಸಿತು ಎಂದೂ ಉಲ್ಲೇಖಿಸಲಾಗಿದೆ (ಹಾಂಟೆಡ್ ಬೈ ಫೈರ್)

ಕೀಳೆವಣ್ಮಣೀ –ದಲಿತರ ಮೇಲಿನ ದೌರ್ಜನ್ಯಕ್ಕೆದುರಾಗಿ:

ಅದೇ ವೇಳೆಗೆ ತಮಿಳ್ನಾಡಿನ ಕೀಳ್ವೆನ್ಮಣಿ ಎಂಬ ಊರಿನಲ್ಲಿ ನಡೆದ ದಲಿತ ಹತ್ಯಾಕಾಂಡ ತಲ್ಲಣವನ್ನು ಸೃಷ್ಟಿಸುತ್ತದೆ. ಪುಟ್ಟ ಮಕ್ಕಳೂ ಸೇರಿದಂತೆ 44 ಜನ ದಲಿತ ಕುಟುಂಬದವರನ್ನು ಪುಟ್ಟದೊಂದು ಗುಡಿಸಿಲಿನಲ್ಲಿ ಕೂಡಿ ಹಾಕಿ ಬೆಂಕಿ ಹಾಕಿದ ಜಮೀನ್ದಾರರ ಅಟ್ಟಹಾಸವದು. ಕ್ರೌರ್ಯದ ಪರಮಾವಧಿಯನ್ನು ಮೀರಿದ ಆ ಘಟನೆಯ ಸ್ಥಳಕ್ಕೆ ಮೈಥಿಲಿ ಭೇಟಿ ನೀಡುತ್ತಾರೆ. ಅಲ್ಲಿಯ ಘನಘೋರ ದೃಶ್ಯ, ಯಾವ ಮನುಷ್ಯರೂ ಸಹಿಸಿಕೊಳ್ಳಲಾರದ ಹಾಗೆ ಪುಟ್ಟ ಮಕ್ಕಳು, ಮಹಿಳೆಯರನ್ನು ಜೀವಂತವಾಗಿ ದಹಿಸಿ ಬೆಂದ ದೇಹಗಳ ಕುರುಹು ಬಿಟ್ಟ ಸ್ಮಶಾನವಾಗಿತ್ತದು. ಒಬ್ಬ ಕಮ್ಯುನಿಸ್ಟ್ ಪಕ್ಷದ ಸದಸ್ಯರು ಮತ್ತು ಕೃಷ್ಣಮ್ಮಾಳ್ ಜೊತೆ ಸ್ಥಳಕ್ಕೆ ಭೇಟಿ ನೀಡಿದ ಮೈಥಿಲಿಯವರನ್ನು ಸ್ಥಳೀಯ ಪೋಲೀಸರು ಬಹುತೇಕ ವಶದಲ್ಲಿಟ್ಟುಕೊಂಡಂತೆಯೇ ಇಡೀ ರಾತ್ರಿ ಕಳೆಯಬೇಕಾಯಿತಂತೆ. ಅದಕ್ಕೆ ಯಾರೋ ಹೊರಗಿನವರು ಬಂದಿದ್ದು ಒಂದು ಕಾರಣವಾದರೆ ಇನ್ನೊಂದು ಮೈಥಿಲಿಯವರನ್ನು ನಕ್ಸಲೀಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದ ಕೇರಳದ ಕೆ.ಅಜಿತಾ ಎಂದು ಭಾವಿಸಿದ್ದೂ ಕೂಡ ಎಂದು ಮೈಥಿಲಿ ಸಂದರ್ಶನದಲ್ಲಿ ಹೇಳಿಕೊಂಡಿದ್ದರು. ಈಸ್ಟ್ ತಂಜಾವೂರಿನ ಕೀಳ್ವೆನ್ಮಣಿ ಗ್ರಾಮದಲ್ಲಿ ನಡೆದ ನರಹತ್ಯಾಕಾಂಡ ಮೈಥಿಲಿಯವರ ಅಂತಸ್ಸತ್ವವನ್ನು ಮತ್ತೊಮ್ಮೆ ಬಡಿದೆಬಿಸಿತ್ತು. ಅವರಿಗೆ ಅಲ್ಲಿ ತಿಳಿದ ಸತ್ಯವೆಂದರೆ ಆ ದಲಿತ ಕೂಲಿಕಾರರು ಜಮೀನ್ದಾರರ ದಬ್ಬಾಳಿಕೆಯ ವಿರುದ್ಧ ತಮ್ಮ ಘನತೆಯ ಬದುಕಿಗಾಗಿ ಧ್ವನಿ ಎತ್ತ ತೊಡಗಿದ್ದರು, ಮತ್ತು ಕಮ್ಯುನಿಸ್ಟ್ ಚಳುವಳಿಯ ಜೊತೆ ಸೇರತೊಡಗಿದ್ದರು. ಇದನ್ನು ಸಹಿಸಲಾಗದ ಭೂಮಾಲಿಕರಿಂದ ನಡೆದ ಕಗ್ಗೊಲೆ ಮತ್ತು ಘಟನೆಯ ನಂತರವೂ ಆ ಕ್ರೂರಿಗಳಿಗೆ ಲವಲೇಶವೂ ಪಶ್ಚಾತ್ತಾಪವಾಗದಿರುವುದು ಅವರನ್ನು ಕಲಕಿತ್ತು. ಮತ್ತು ಅರ್ಥವಾಗಿತ್ತು ಅಲ್ಲಿ ನಡೆದ ಕಗ್ಗೊಲೆಗೆ ಕಾರಣ ಕೇವಲ ಕೂಲಿ ಅಥವಾ ವೇತನದ ಪ್ರಶ್ನೆಯಾಗಿರಲಿಲ್ಲ ಬದಲಿಗೆ ಅದೊಂದು ವರ್ಗಹೋರಾಟದ ಭಾಗವಾಗಿತ್ತು. ಆ ಕೂಲಿಕಾರರು ಕಮ್ಯುನಿಸ್ಟ್ ಸಿದ್ಧಾಂತದ ಪರ ವಾಲುತ್ತ ತಮ್ಮ ಹಕ್ಕುಗಳನ್ನು ಪ್ರತಿಪಾದಿಸಲು ಸಿದ್ಧರಾಗುತ್ತಿದ್ದರು.

ದಮನಿತರ ಬದುಕಿಗೆ ಕನಿಷ್ಟ ಬೆಲೆಯೂ ಇಲ್ಲದ ಸಮಾಜದಲ್ಲಿ ನ್ಯಾಯವ್ಯವಸ್ಥೆ ಕೂಡಾ ದೌರ್ಜನ್ಯಕ್ಕೆ ಒಳಗಾದವರ ಪರವಾಗಿ ಸುಲಭವಾಗಿ ನಿಲ್ಲುವುದಿಲ್ಲ. ಕೀಳ್ವೆನ್ಮಣಿಯಲ್ಲಿಯೂ ನಮ್ಮ ಕಂಬಾಲಪಲ್ಲಿಯ ತರಹದ್ದೇ ತೀರ್ಪು ಬಂದಿತ್ತು. ತೀರ್ಪಿನಲ್ಲಿ ಬರೆದ ಅಂಶಗಳನ್ನು ಮೈಥಿಲಿ ಕಟುವಾಗಿ ಟೀಕಿಸಿ 'ರ್‍ಯಾಡಿಕಲ್ ರಿವ್ಯೂ' ಗೆ ವರದಿ ಬರೆದಿದ್ದರು. ಆ ತೀರ್ಪಿನಲ್ಲಿ ಜಮೀನ್ದಾರರು 'ಪ್ರತಿಷ್ಠಿತರು' ಅವರ ಕೈಲಿ ಅಪಾರ ಸಂಪತ್ತು, ವಾಹನ ಮತ್ತಿತರ ನಾಗರಿಕ ಸೌಲಭ್ಯಗಳೆಲ್ಲ ಇರುವವರಾಗಿ ಇಂಥಹ ಕೃತ್ಯ ಎಸಗುವುದಿಲ್ಲ ಎಂದು ಉಲ್ಲೇಖಿಸಲಾಗಿತ್ತು. ಅದಕ್ಕೆ ತಮ್ಮ ಲೇಖನದಲ್ಲಿ 'ಪ್ರತಿಷ್ಠಿತ ವ್ಯಕ್ತಿಗಳು ಪ್ರತಿಷ್ಠಿತ ಕೊಲೆಗಾರರೂ' ಆಗಬಲ್ಲರು ಎಂದು ಬರೆದಿದ್ದರು.

ಪುಟ 10 ಕ್ಕೆ

ಮೈಥಿಲಿ ಎಂಬ ಮಮತೆಯ ಮಡಿಲು, ಸಮತೆಯ ಒಡಲು....

ಪುಟ 9 ರಿಂದ



ಎಡ ಚಳುವಳಿಯ ಜೊತೆ ಸಂಪರ್ಕ


ನಂತರ ಮೈಥಿಲಿ ಆ ಪ್ರದೇಶದಲ್ಲಿ ಕೆಲಸ ಮಾಡಲು ಬಯಸಿದರಾದರೂ ಅದು ಸುಲಭವಾಗಲಿಲ್ಲ. ಈ ಅವಧಿಯಲ್ಲಿಯೇ ಕಾರ್ಮಿಕ ಮುಂದಾಳು, ಸಿ.ಪಿ.ಐ.(ಎಂ) ನ ವಿ.ಪಿ.ಚಿಂತನ್ ರವರನ್ನು ಮೈಥಿಲಿ ಭೇಟಿಯಾಗುತ್ತಾರೆ. ಮತ್ತು ಮತ್ತೊಮ್ಮೆ ಕೀಳ್ವೆನ್ಮಣಿಗೆ ಭೇಟಿ ಮಾಡುವಾಗ ಅವರ ಕೈಯಲ್ಲಿ ಕಾಮ್ರೆಡ್ ವಿ.ಪಿ.ಚಿಂತನ್ ರವರ ಕಾಗದವೊಂದಿರುತ್ತದೆ. ಅದು ಅವರಿಗೆ ರಹದಾರಿ ಪತ್ರದಂತೆ ಸ್ಥಳೀಯ ಕೃಷಿಕೂಲಿಕಾರರು, ಕೂಲಿಕಾರ ಸಂಘದ ಮುಖಂಡರು ರೈತರ ಜೊತೆ ಮಾತನಾಡಲು ಅವಕಾಶ ಕಲ್ಪಿಸಿತು. ಮುಂದಿನ ದಿನಗಳಲ್ಲಿ ಕೃಷಿ ಪ್ರಶ್ನೆಗಳ ಕುರಿತು ಅವರ ಬರಹಗಳಿಗೆ ಅದು ಸಹಾಯವಾಯಿತು.

ವಿದ್ಯಾರ್ಥಿ ಮತ್ತು ಭಾಷಾ ಅಸ್ಮಿತೆಯ ಚಳುವಳಿಯ ಜೊತೆ:

ತಮಿಳುನಾಡಿನಲ್ಲಿ ಹಿಂದಿ ಹೇರಿಕೆಯ ವಿರುದ್ಧ ನಡೆದ ಚಳುವಳಿಗಳಿಗಾಗಿ ರೂಪುಗೊಂಡ ವೇದಿಕೆಗಳಲ್ಲಿ ನೇರ ಭಾಗವಲ್ಲದಿದ್ದರೂ ಅದರ ಸಂಪರ್ಕದಲ್ಲಿ ಮೈಥಿಲಿ ಇದ್ದರು ಎಂದು ವಿ. ಗೀತಾ ಮತ್ತು ಕಲ್ಪನಾ ತಮ್ಮ ಲೇಖನದಲ್ಲಿ ಉಲ್ಲೇಖಿಸುತ್ತಾರೆ. ಅದೇ ವೇಳೆಗೆ ವಿಯಟ್ನಾಂ ಯುದ್ಧದ ವಿರುದ್ಧ ನಡೆದ ಪ್ರತಿಭಟನೆಯಲ್ಲಿ ಮೈಥಿಲಿ ಪಾಲ್ಗೊಳ್ಳುತ್ತಾರೆ. ಕ್ಯೂಬಾದ ಕುರಿತು ಒಂದು ಭಿತ್ತಿಚಿತ್ರಪ್ರದರ್ಶನವನ್ನು ಮೈಥಿಲಿ ಮತ್ತು ಕೆಲವರು ನಗರದ ಮಧ್ಯೆ ಏರ್ಪಡಿಸಿ ಸಾಮ್ರಾಜ್ಯವಾದದ ವಿರುದ್ಧ ಯುವಜನರನ್ನು ಎಚ್ಚರಿಸಲು ಪ್ರಯತ್ನಿಸುತ್ತಾರೆ.

ಕಾರ್ಮಿಕ ನಾಯಕಿಯಾಗಿ ಒಡಮೂಡಿದ ಮೈಥಿಲಿ:

69ರಲ್ಲಿ ಸಿಪಿಐ(ಎಂ) ಪಕ್ಷದ ಸದಸ್ಯರಾಗಿ ಸೇರುವ ಅವರು ಸಿ.ಐ.ಟಿ.ಯು. ನಲ್ಲಿ ಕೆಲಸ ಪ್ರಾರಂಭಿಸುತ್ತಾರೆ. ಆ ಮೂಲಕ ಅಶೋಕ ಲೈಲ್ಯಾಂಡ್, ಟ್ಯಾಬ್ಲೆಟ್ಸ್ ಇಂಡಿಯಾ, ಮೆಟಲ್ ಬಾಕ್ಸ್ ಮುಂತಾದ ಹಲವು ಫ್ಯಾಕ್ಟರಿಗಳ ಕಾರ್ಮಿಕ ಸಂಘಟನೆಗಳ ಜೊತೆ ಕೆಲಸ ಮಾಡುತ್ತಾರೆ. ಅವರ ಪ್ರತಿಭಟನೆ–ಮುಷ್ಕರಗಳಲ್ಲಿ ಪಾಲ್ಗೊಳ್ಳುತ್ತಾರೆ. ಟ್ಯಾಬ್ಲೆಟ್ಸ್ ಇಂಡಿಯಾ ಕಂಪನಿಯ ಮಹಿಳಾ ಉದ್ಯೋಗಿಗಳ ಪ್ರಶ್ನೆಗಳನ್ನೆತ್ತಿಕೊಂಡು ಹೋರಾಟಗಳನ್ನು ಸಂಘಟಿಸುತ್ತಾರೆ. ಹಾಗೆಯೇ ಅವರು ಗ್ರಾನೈಟ್ ಕ್ವಾರಿಗಳಲ್ಲಿ ಕೆಲಸ ಮಾಡುವ ಮಹಿಳೆಯರು ಎದುರಿಸುವ ಸಮಸ್ಯೆಗಳ ತೀವ್ರತೆಯನ್ನು ಅರಿತು ಹೋರಾಟಗಳನ್ನು ಸಂಘಟಿಸುತ್ತಾರೆ, ಮತ್ತು ಪ್ರಗತಿಪರ ಎಂದು ಕರೆದುಕೊಳ್ಳುವ ಎಡ ಕಾರ್ಮಿಕ ಸಂಘಟನೆಗಳ ನಾಯಕತ್ವದಲ್ಲಿ ಕೂಡಾ ಇರುವ ಈ ಸಮಾಜದಲ್ಲಿ ಬೇರೂರಿರುವ ಪಾಳೆಯಗಾರಿ ಮೌಲ್ಯಗಳನ್ನು ಗುರುತಿಸುತ್ತಾರೆ. ಕಾರ್ಮಿಕ ಸಂಘಟನೆಗಳ ನಾಯಕತ್ವ ಮಹಿಳೆಯರನ್ನು ನಾಯಕತ್ವದಲ್ಲಿ ಗುರುತಿಸಲು ಬಯಸದ ಹಾಗೂ ಅವರ ಮಾತುಗಳಿಗೆ ಮನ್ನಣೆ ಕೊಡದ ಧೋರಣೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಾರೆ. ಮೈಥಿಲಿಯಲ್ಲಿ ಇದ್ದ ಸಹಜ ನಾಯಕತ್ವದ ಮತ್ತು ಒಳಗೊಳ್ಳುವ ಗುಣಗಳಿಂದಾಗಿಯೇ ಮಹಿಳೆಯರನ್ನು ಸಂಘಟಿಸಲು ಹೋರಾಟಗಳಲ್ಲಿ ಅಣಿನೆರೆಸಲು ಸಾಧ್ಯವಾಯಿತು ಎಂದು ಅವರ ನಿಕಟವರ್ತಿಗಳು ಅಭಿಪ್ರಾಯ ಪಡುತ್ತಾರೆ.



ಜಾತಿ ಮತ್ತು ಲಿಂಗ ತಾರತಮ್ಯದ ಪ್ರಶ್ನೆಗಳು

ಜೊತೆಗೇ ತಮಿಳ್ನಾಡಿನ ರಾಜಕಾರಣದಲ್ಲಿ ಅತಿ ಪ್ರಮುಖ ಅಂಶವಾದ ಜಾತಿ ಆಧಾರಿತ ಸಂಗತಿಯಲ್ಲಿ ಹುಟ್ಟಿನ ಕಾರಣದಿಂದ ಇರುವ ಚಹರೆಗೆ ಬದಲಾಗಿ ತಾನೊಬ್ಬಳು ದುಡಿಯುವ ಜನರ ಧ್ವನಿ ಎಂಬುದನ್ನು ಮತ್ತೆ ಮತ್ತೆ ಸಾಬೀತುಗೊಳಿಸುವ ಅನಿವಾರ್ಯತೆಗೆ ಮೈಥಿಲಿ ಒಳಗಾಗುತ್ತಿದ್ದರು.

ದುಡಿಯುವ ಮಹಿಳೆಯರ ಸಮಸ್ಯೆಗಳನ್ನು ಗುರುತಿಸುವ ನಿಟ್ಟಿನಲ್ಲಿ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ರಚನೆ ಮತ್ತು ಕಾರ್ಯಶೀಲತೆಯಲ್ಲಿ ಕೂಡಾ ಮೈಥಿಲಿಯವರ ಕೊಡುಗೆ ಇದೆ. ಇಷ್ಟೆಲ್ಲ ಮಾಡುವಾಗಲೂ ಮಹಿಳೆ ಮತ್ತು ಅವಿವಾಹಿತ ಮಹಿಳೆಯಾಗಿ ಸಾರ್ವಜನಿಕ ವಲಯದಲ್ಲಿ ಕೆಲಸ ಮಾಡುವಾಗ ಲಿಂಗತ್ವದ ನೆಲೆಯ ಎಲ್ಲ ರೀತಿಯ ಮುಜುಗರಗಳನ್ನೂ ಮೈಥಿಲಿ ಕೂಡಾ ಅನುಭವಿಸಿದ್ದರು. ಯುವತಿಯಾಗಿ ಪೋಷಕರಿಂದ ನೆರೆಹೊರೆಯವರಿಂದ ಕೂಡಾ ಟೀಕೆ, ಮೂದಲಿಕೆಗಳನ್ನು ಎದುರಿಸಿಯೇ ಇದ್ದರಾದರೂ ಅವು ಅವರ ಬದ್ಧತೆಯನ್ನು ಕುಗ್ಗಿಸಿರಲಿಲ್ಲ. ಮುಂದಿನ ದಿನಗಳಲ್ಲಿ ಅವರು ಬರೆದ 'ಟುವರ್ಡ್ಸ್ ಈಕ್ವಾಲಿಟಿ'ಯ ಬರಹದಲ್ಲಿ ಈ ಮೌಲ್ಯಗಳ ಕುರಿತು ಅವರು ಬರೆಯುತ್ತಾರೆ. ಅದು 1988ರಲ್ಲಿಯೇ 'ವಿಮೋಚನೆಯೆಡೆಗೆ' ಎಂಬ ಹೆಸರಿನಲ್ಲಿ ಕನ್ನಡದಲ್ಲಿ ಕೂಡಾ ಪ್ರಕಟಗೊಂಡಿದೆ.

ತಮಿಳುನಾಡಿನಲ್ಲಿ ಮಹಿಳಾ ಸಂಘಟನೆಯ ರಚನೆ

1973ರಲ್ಲಿ ಮದ್ರಾಸ್ ನಲ್ಲಿ ಮಹಿಳಾ ಸಂಘಟನೆ ರಚನೆಯಾಗುತ್ತದೆ. 'ಜನನಾಯಕ ತಮಿಳ್ ಮಾತ್ರ ಸಂಘಂ' ಹೆಸರಿನ ಈ ಸಂಘಟನೆಯ ರಚನೆಯಲ್ಲಿ ಜಾನಕಿ ಅಮ್ಮಾಳ್, ಪಾಪಾ ಉಮಾನಾಥ್ ಮತ್ತು ಮೈಥಿಲಿಯವರ ಪಾತ್ರ ಅತಿ ಪ್ರಮುಖವಾದುದು. ನಂತರ ಅದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಜೊತೆ ಸಂಯೋಜಿತ ಸಂಘಟನೆಯಾಗಿ ಕಾರ್ಯ ನಿರ್ವಹಿಸುತ್ತಿದೆ. ಮೈಥಿಲಿ ಜನವಾದಿಯ ರಾಷ್ಟ್ರೀಯ ಉಪಾಧ್ಯಕ್ಷರಾಗಿ ಬಹಳ ಕಾಲ ಜವಾಬ್ದಾರಿ ನಿರ್ವಹಿಸಿದರು.

ಲೇಖಕಿ ಮತ್ತು ವಿಮರ್ಶಕಿಯಾಗಿ

1975ರಲ್ಲಿ ವಿಶ್ವಸಂಸ್ಥೆ ಆ ವರ್ಷವನ್ನು ಅಂತರರಾಷ್ಟ್ರೀಯ ಮಹಿಳಾ ವರ್ಷವನ್ನಾಗಿ ಘೋಷಿಸಿದಾಗ ಸಮಾಜವಾದಿ ನೆಲೆಯಲ್ಲಿ ಮಹಿಳಾ ಪ್ರಶ್ನೆಗಳನ್ನಾಧರಿಸಿ ಅವರು ಹಲವಾರು ಲೇಖನಗಳನ್ನು ಬರೆದರು. ಪತ್ರಿಕೆಯೊಂದನ್ನು ನಡೆಸುವುದು ಯಾವಾಗಲೂ ಸುಲಭವಲ್ಲವೆಂಬುದು ಸತ್ಯ. ಹಾಗೆ 'ದಿ ರ್‍ಯಾಡಿಕಲ್ ರಿವ್ಯು' ಕೂಡಾ ನಿಲ್ಲಬೇಕಾಯಿತು, ಆದರೆ ಮೈಥಿಲಿಯವರ ಬರಹ ನಿಲ್ಲಲಿಲ್ಲ. ಪ್ರಸಿದ್ಧ 'ಇಕಾನಾಮಿಕ ಅಂಡ್ ಪೊಲಿಟಿಕಲ್ ವೀಕ್ಲಿ' (ಈ.ಪಿ.ಡಬ್ಲ್ಯೂ) ನಲ್ಲಿ ಅವರ ಹಲವಾರು ಲೇಖನಗಳು ಪ್ರಕಟಗೊಂಡಿವೆ. ತಮಿಳು ಭಾಷೆಯಲ್ಲಿ ಹಲವಾರು ಲೇಖನಗಳು, ಪುಸ್ತಕಗಳ ವಿಮರ್ಶೆಗಳು ಹೀಗೆ ಅವರ ಕುರಿತು ಒಂದು ಅಧ್ಯಯನವನ್ನೇ ಮಾಡುವಷ್ಟು ಅಪಾರ ಸಂಪತ್ತು ಅವರು. ಮಹಿಳಾ ಪ್ರಶ್ನೆಗಳನ್ನು ಮುನ್ನೆಲೆಗೆ ತರುವ ಹಲವಾರು ಲೇಖನಗಳ ಜೊತೆ ನಿರಂತರವಾಗಿ ಅವರು ಮಹಿಳಾ ಕಾರ್ಯಕರ್ತರಿಗೆ ರಾಜಕೀಯ ಸ್ಪಷ್ಟತೆ ಮತ್ತು ಪ್ರಜ್ಞೆ ಹಾಗೂ ಸೈದ್ಧಾಂತಿಕ ಬದ್ಧತೆ ಮೂಡಿಸಲು ಹೆಚ್ಚು ಗಮನ ಹರಿಸುತ್ತಿದ್ದರು.

ಅವರ "ವಿಮೋಚನೆಯೆಡೆಗೆ" ಎಂಬ ಪುಸ್ತಕದಲ್ಲಿ ಅವರು ಮುಖ್ಯವಾಗಿ ಮೂರು ಅಂಶಗಳನ್ನಿಟ್ಟು ಚರ್ಚೆ ಮಾಡುತ್ತ ಪುರುಷ ವಿರೋಧಿ ಸ್ವೇಚ್ಛಾ ಪ್ರವೃತ್ತಿಯನ್ನು ಸ್ತ್ರೀವಾದವೆಂದು ಕರೆಯುತ್ತಿದ್ದ ಅಂದಿನ ಅಭಿಪ್ರಾಯಗಳಿಗೆ ಸ್ಪಷ್ಟ ಉತ್ತರ ನೀಡಿದ್ದಾರೆ. ಅದರಲ್ಲಿ ಅವರು ಬಹು ಮುಖ್ಯವಾಗಿ "ಮಹಿಳೆಗೆ ಸ್ವತಂತ್ರ ವ್ಯಕ್ತಿತ್ವ ಇದೆಯೇ? ಪುರುಷನ ಬದುಕಿನ ಪರಿಧಿಯಾಚೆ ಮಹಿಳೆಯ ಅಸ್ತಿತ್ವಕ್ಕೆ ಯಾವ ಅರ್ಥವೂ ಇಲ್ಲ ಎಂಬುದೇ ಸತ್ಯವಾದರೆ ಮಾನವ ಇತಿಹಾಸದ ಆರಂಭದ ಕಾಲದಿಂದಲೂ ಹೀಗೇ ಇತ್ತೇ? ಎಲ್ಲ ರೀತಿಯಿಂದ ಅಬಲೆ ಯಂತೆ ಬದುಕುತ್ತಿರುವ ಮಹಿಳೆಯ ವಿಮೋಚನೆಯ ದಾರಿ ಯಾವುದು?" ಎಂಬ ಪ್ರಶ್ನೆಗಳನ್ನು ಕೇಳಿಕೊಂಡು ಉತ್ತರಿಸಿದ್ದಾರೆ. ವರ್ಗ ಸಮಾಜದೊಂದಿಗೇ ಉದ್ಭವಿಸಿದ ಮಹಿಳಾ ಶೋಷಣೆಯು ವರ್ಗ ಸಮಾಜದೊಂದಿಗೇ ಅಸ್ತಂಗತವಾಗುವುದು ಅನಿವಾರ್ಯ. ಸಮಾಜವಾದಿ ವ್ಯವಸ್ಥೆಯನ್ನು ಸ್ಥಾಪಿಸಲು ಮಾಡುವ ಹೋರಾಟವೇ ಒಟ್ಟು ಮಾನವ ವಿಮೋಚನೆಯ ದಾರಿಯನ್ನು ಸೂಚಿಸುತ್ತದೆ. ಮಹಿಳಾ ವಿಮೋಚನೆಯೂ ಕೂಡಾ ಮಾನವರ ಸರ್ವಾಂಗೀಣ ಬಿಡುಗಡೆಯ ಅವಿಭಾಜ್ಯ ಅಂಗ ಎಂದು ಉತ್ತರದಲ್ಲಿ ಪ್ರತಿಪಾದಿಸಿದ್ದಾರೆ.

ಮಹಿಳಾ ಸಂಘಟನೆಯ ನಾಯಕಿಯಾಗಿ

ಮಹಿಳಾ ಸಂಘಟನೆಯ ನಾಯಕಿಯಾಗಿ ಅವರು ಮಹಿಳೆಯರನ್ನು ಬಾಧಿಸುವ ಹಲವು ಸಂಗತಿಗಳನ್ನು ಹೋರಾಟದ ಮೂಲಕ ಮುನ್ನೆಲೆಗೆ ತಂದಿದ್ದರು. ಮಹಿಳೆಯರ ಪ್ರಶ್ನೆಗಳೆಂದರೆ ಸಾಮಾನ್ಯವಾಗಿ ಪರಿಭಾವಿಸುವ ವರದಕ್ಷಿಣೆ, ಕೌಟುಂಬಿಕ ಕಿರುಕುಳಗಳ ಮಟ್ಟಕ್ಕೆ ನಿಲ್ಲಿಸದೆ, ಮಹಿಳೆಯೊಬ್ಬಳು ಕೌಟುಂಬಿಕ ನೆಲೆಯಲ್ಲಿ ಅನಿವಾರ್ಯವಾಗಿ ಮತ್ತು ಸಮಾಜ ಸಹಜವಾಗಿ ಪರಿಗಣಿಸುವ ಗೃಹಕೃತ್ಯಗಳು– ಕುಡಿಯುವ ನೀರಿಗಾಗಿ ಮಾಡುವ ಓಡಾಟಗಳು, ಸ್ವಚ್ಛತೆಯ ಕೆಲಸಗಳು, ಮನೆಯವರ ಲಾಲನೆ ಪಾಲನೆಗಳ ಸಂಬಂಧೀ ವಿಷಯಗಳನ್ನು ಚರ್ಚೆಗೆ ಒಡ್ಡಿ ಮದ್ರಾಸಿನ ಕನ್ಸರ್‌ವೇಟಿವ್ ಜನರ ಕೆಂಗಣ್ಣಿಗೆ ಗುರಿಯಾಗಿದ್ದರು. ಜಾತಿ ವ್ಯವಸ್ಥೆಯಲ್ಲಿ ಮಹಿಳೆಯ ಮೇಲೆ ನಡೆಯುವ ದುಪ್ಪಟ್ಟು ದೌರ್ಜನ್ಯಗಳನ್ನು ಗಂಭೀರವಾಗಿ ಗುರುತಿಸಿದ ಮದ್ರಾಸಿನ ಮೊದಲ ಮಹಿಳಾ ಸಮ್ಮೇಳನದಲ್ಲಿಯೇ, ಜಾತಿ ಆಧಾರಿತ ತಾರತಮ್ಯವನ್ನು ಕೈಗೆತ್ತಿಕೊಳ್ಳುವ ತೀರ್ಮಾನವನ್ನು ಮಾಡಲಾಗಿತ್ತು.

ಸ್ತ್ರೀ ಭ್ರೂಣ ಹತ್ಯೆಯ ವಿರುದ್ಧ ಆಂದೋಳನವನ್ನು ಸಂಘಟಿಸುತ್ತ ತಮಿಳ್ನಾಡಿನಲ್ಲಿ ವ್ಯಾಪಕವಾಗಿದ್ದ ಹೆಣ್ಣು ಭ್ರೂಣಹತ್ಯೆಯ ವಿರುದ್ಧ ಧ್ವನಿ ಎತ್ತಿದ್ದರು. ಬಾಲ ಕಾರ್ಮಿಕ ಪದ್ಧತಿಯ ವಿರುದ್ಧವೂ ಕೆಲಸ ಮಾಡುತ್ತ ಆ ಮಕ್ಕಳ ಅಭಿವೃದ್ಧಿಗಾಗಿ ಹಲವು ಕೆಲಸಗಳಿಗೆ ಮುಂಚೂಣಿಯಲ್ಲಿದ್ದರು.

ಮಹಿಳಾ ಸಂಘಟನೆಯ ಎಲ್ಲ ಚಟುವಟಿಕೆಗಳ ಮುಂಚೂಣಿಯಲ್ಲಿದ್ದು ಕರಪತ್ರ ತಯಾರಿ, ಲೇಖನ ತಯಾರಿ, ತಮಿಳ್ನಾಡಿನ ಸಂಘಟನೆ ತರುತ್ತಿದ್ದ 'ಮಹಿಳೈ ಸಿಂಘನೈ' ಪತ್ರಿಕೆಗೂ ಕೆಲಸ ಮಾಡುತ್ತಿದ್ದರು. ಮಗಳು ಕಲ್ಪನಾ ನೆನಪಿಸಿಕೊಳ್ಳುವಂತೆ ಮಹಿಳಾ ಸಂಘಟನೆಯ ಹೊಸ ತಲೆಮಾರಿನ ನಾಯಕರ ಜೊತೆ ಮಾರ್ಗದರ್ಶಕರಾಗಿ ಕೆಲಸ ಮಾಡುತ್ತಲೇ ಅವರು ಮಾಡುವ ತಪ್ಪುಗಳಿಗೆ ಕೆಲವೊಮ್ಮೆ ಕೋಪಿಸಿಕೊಳ್ಳುತ್ತಿದ್ದರೂ ಕೂಡಾ. ಆದರೆ ಆಕೆಯೊಳಗೆ ಇದ್ದ ತಾಯಿ ಭಾವ ಮತ್ತು ಸಂಘಟನಾ ಕ್ರಮಬದ್ಧತೆಯೇ ಅದಕ್ಕೆ ಮೂಲ ಕಾರಣವಾಗಿತ್ತು. ಒಬ್ಬ ಹೆಂಡತಿ, ತಾಯಿ, ಕುಟುಂಬದ ದೇಖರೇಖೆ ನೋಡಿಕೊಳ್ಳುವ ಜವಾಬ್ದಾರಿಯ ಹೆಣ್ಣಾಗಿ ಈ ಸಮಾಜ ಬಯಸುವ ಜವಾಬ್ದಾರಿ ಹೊರುವ ಒಬ್ಬಳಾಗಿ ಬದುಕಿದ್ದಕ್ಕಿಂತ ಹೆಚ್ಚು ಇವರು ಸಮಾಜಮುಖೀ ಜೀವಿಯಾಗಿ, ಸಂಘಟನೆಯ ಕಟ್ಟುವವಳಾಗಿಯೇ ಬದುಕಿದ್ದವರು.

ಕರ್ನಾಟಕದ ಜನವಾದಿಯ ಬೇರುಗಳಲ್ಲಿ ಮೈಥಿಲಿಯ ಹೆಸರು

ಕರ್ನಾಟಕದ ಜೊತೆ ಅವರ ನಂಟು ಜನವಾದಿಯ ಕೇಂದ್ರ ಸಮಿತಿಯಿಂದ ಮಾರ್ಗದರ್ಶಕರಾಗಿ. ಇಲ್ಲಿ ಜನವಾದಿಯನ್ನು ಕಟ್ಟಿ ಬೆಳೆಸುವಲ್ಲಿ ಅವರ ಪಾತ್ರ ಬಹಳ ದೊಡ್ಡದು. 90ರ ದಶಕದಲ್ಲಿ ಅವರು ನಿರಂತರವಾಗಿ ಇಲ್ಲಿನ ಚಟುವಟಿಕೆಗಳ ಜೊತೆ ನಂಟು ಹೊಂದಿದ್ದರು. ರಾಜ್ಯ ಸಮಿತಿಗೆ ಅವರು ಕೊಡುತ್ತಿದ್ದ ಗಮನದಿಂದಾಗಿಯೇ ರಾಜ್ಯದ ಇತರ ಜಿಲ್ಲೆಗಳಲ್ಲಿ ಸಂಘಟನೆಯನ್ನು ಕಟ್ಟುವ ಪ್ರಯತ್ನ ಸಫಲವಾಯಿತು. ಮೆದು ಮಾತಿನ ಸರಳ ಜೀವವಾಗಿದ್ದರೂ ಸಂಘಟನಾಕ್ರಮಗಳ, ಶಿಸ್ತಿನ ಉಲ್ಲಂಘನೆಯನ್ನು ಯಾವತ್ತೂ ಸಹಿಸುತ್ತಿರಲಿಲ್ಲ. ಮತ್ತೆ ಮತ್ತೆ ಹೇಳುತ್ತಿದ್ದ ಮಾತು ನಾಯಕತ್ವದಲ್ಲಿ ಇರುವವರಿಗೆ ಕೇಳುವ ಕಿವಿ ಬೇಕು. ಅರಿಯುವ ಹಸಿವು ಬೇಕು. ಅಧ್ಯಯನದ ಬಯಕೆ ಬೇಕು ಎಂದಾಗಿತ್ತು. ಸಂಘಟನೆಯ ಸಂವಿಧಾನ ಕಾರ್ಯಕ್ರಮಗಳನ್ನು ಪ್ರತಿನಿತ್ಯದ ಆಗುಹೋಗುಗಳಿಗೆ ಅನ್ವಯಿಸಿಕೊಳ್ಳುವಷ್ಟು ಪರಿಣತಿಯನ್ನು ಮುಖ್ಯ ನಾಯಕತ್ವ ಪಡೆದರೆ ಅವರು ಅರ್ಧ ಗೆದ್ದಂತೆ, ಮತ್ತರ್ಧ ಮಾಡುವ ಕೆಲಸವನ್ನು ಒರೆಗೆ ಹಚ್ಚಿಕೊಳ್ಳುವ ಮತ್ತು ಅದು ಸಂಘಟನೆಯ ಬೆಳವಣಿಗೆಗೆ ಎಷ್ಟು ಮಾತ್ರ ಸಹಕಾರಿ ಎಂಬುದನ್ನು ಸೂಕ್ಷ್ಮವಾಗಿ ಅವಲೋಕಿಸಿಕೊಳ್ಳುವ ಕೆಲಸ ನಿರಂತರವಾಗಿ ನಡೆಯಬೇಕು. ಮುಖ್ಯ ನಾಯಕತ್ವದಲ್ಲಿ ಇರುವವರಿಗೆ ತಮ್ಮನ್ನು ತಾವು ನಿರ್ದಾಕ್ಷಿಣ್ಯವಾಗಿ ವಿಮರ್ಶೆಗೆ ತೊಡಗಿಸಿಕೊಳ್ಳುವ ಮತ್ತು ಆ ಮೂಲಕ ಕಾರ್ಯಕರ್ತರಿಗೆ ಮಾದರಿಯಾಗಿ ನಿಲ್ಲುವ ಗುಣ ಇರಲೇಬೇಕು. ಅದು ಮಾತ್ರವೇ ತಪ್ಪು ಸರಿಗಳ ವಿಮರ್ಶೆಗೆ ಸರಿದಾರಿ ತೋರಿಸುತ್ತದೆ ಎನ್ನುತ್ತಿದ್ದರು.



ದಣಿದ ಜೀವ ಆರಿತು ದೀಪ

ಸಣ್ಣವರಿರುವಾಗಲೇ ಪ್ರಾರಂಭಿಸಿದ ದಣಿವರಿಯದ ಕೆಲಸಗಳು, ಸದಾ ಸರ್ವದಾ ತೀವ್ರ ಒತ್ತಡಗಳ ಮಧ್ಯೆ ಮಾಡುತ್ತಿದ್ದ ಕೆಲಸದ ಒತ್ತಡಗಳಿರಬಹುದು ಇಲ್ಲಿಗೆ ಬರುವಾಗಲೇ ಒಳ್ಳೇಯ ಆರೋಗ್ಯ ಹೊಂದಿರಲಿಲ್ಲ. ಸದಾ ಮೈಗ್ರೇನ್ ತಲೆನೋವಿನಿಂದ, ಅರೆ ತಲೆಶೂಲೆಯಿಂದ ಬಳಲುತ್ತಿದ್ದ ಅವರು ನೋವಿನಿಂದ ಪಾರಾಗಲು ಮಾತ್ರೆಗಳ ಮೊರೆ ಹೋಗುವುದು ಅನಿವಾರ್ಯವಾಗಿತ್ತು. ಆದರೆ ಅವರ ಬದ್ಧತೆ ಎಷ್ಟಿತ್ತೆಂದರೆ ಅವುಗಳ ದುಷ್ಪರಿಣಾಮ ತನ್ನ ಮೇಲೆ ಆಗುವುದೆಂದು ತಿಳಿದಿದ್ದರೂ ತನ್ನ ಅನಾರೋಗ್ಯ ಸಂಘಟನೆಯ ಕೆಲಸದೆದುರು ಬಂದು ನಿಲ್ಲದಂತೆ, ಅಡ್ಡಿಯಾಗದಂತೇ ಕಣ್ಗಾವಲಿಟ್ಟುಕೊಳ್ಳುತ್ತಿದ್ದರು.

ಜನವಾದಿಯ ಪ್ರಾರಂಭದ ದಿನಗಳಿಂದ ನನ್ನ ಬೆರಳು ಹಿಡಿದು ನಡೆಸಿದ ಮಾರ್ಗದರ್ಶಿ, ಗೊತ್ತಿದ್ದೋ ಗೊತ್ತಿಲ್ಲದೆಯೋ ತಪ್ಪೆಸಗಿದಾಗ ನಿರ್ದಾಕ್ಷಿಣ್ಯವಾಗಿ ಸರಿಪಡಿಸಿಕೊಳ್ಳಲು ಹೇಳುತ್ತಿದ್ದ, ಬೆಂಗಳೂರಿಗೆ ಬಂದಾಗೆಲ್ಲ ನಮ್ಮ ಮನೆಯಲ್ಲೇ ತಂಗುತ್ತಿದ್ದ, ಮೇಲ್ಮಹಡಿಯ ಪುಟ್ಟ ಕೊಠಡಿಯನ್ನು ತುಂಬಾ ಇಷ್ಟಪಡುತ್ತಿದ್ದ ಮೈಥಿಲಿ ಅಲ್ಜೈಮರ್ ರೋಗಕ್ಕೆ ತುತ್ತಾದರು. ಅದಿನ್ನೂ ಪ್ರಾರಂಭದ ಹಂತವಿತ್ತೋ ಏನೋ, ಯಾವುದೋ ಕಾರಣಕ್ಕೆ ಚೆನ್ನೈಗೆ ಹೋದಾಗ ಮನೆಗೆ ಭೇಟಿ ಕೊಟ್ಟಿದ್ದೆವು. ತಾಸೆರಡು ತಾಸು ಮಾತಾಡಿದ್ದರು. ಹಳೆಯದೆಲ್ಲ ನೆನಪಿಸಿಕೊಳ್ಳುವ, ಕರ್ನಾಟಕದಲ್ಲಿ ಸಂಘಟನೆ ವಿಸ್ತರಿಸಿ ಚಳುವಳಿಯ ರೂಪ ಪಡೆಯಬೇಕೆಂಬ ಕನಸನ್ನು ಇಬ್ಬರೂ ಹಂಚಿಕೊಂಡೆವು. ನಂತರ ಕಾನ್ಪುರದ ಸಮ್ಮೇಳನದಲ್ಲಿ ಅವರ ಭೇಟಿ. ಅಷ್ಟೊತ್ತಿಗಾಗಲೇ ನೆನಪು ನೇಪಥ್ಯಕ್ಕೆ ಸರಿದಿತ್ತು. ಪಕ್ಕದಲ್ಲಿಯೇ ಕುಳಿತು ಮಾತನಾಡಿದಾಗ ಎಷ್ಟೋ ಹೊತ್ತು ಮಾತನಾಡಿದ ಮೈಥಿಲಿ ಮತ್ತೆ ನನಗೆ ಪ್ರಶ್ನಿಸಿದ್ದು..ನೀನು ಯಾವ ಕಾಲೇಜಿನಲ್ಲಿ ಓಧುತ್ತಿದ್ದೀ.. ಎಂದು. ನನಗರಿವಿಲ್ಲದೆಯೇ ನನ್ನ ಕಣ್ಣಿನಿಂದ ನೀರು ಹರಿದಿತ್ತು. ಒಬ್ಬ ಅತ್ಯಂತ ಮೇಧಾವಿ, ಸೂಕ್ಷ್ಮಮತಿ, ತೀಕ್ಷ್ಣಮತಿ, ಬುದ್ಧಿಮತಿಯೊಬ್ಬರು ಹೀಗೊಂದು ರೋಗಕ್ಕೆ ತುತ್ತಾಗುವ ಮತ್ತು ಹಾಗೆಯೇ ಕರಗಿ ಹೋಗುವುದು ಅದೆಷ್ಟು ನೋವು. ಅವರಿಗೆ ಪ್ರಾರಂಭವಾಗಿದ್ದು ಮಾನಸಿಕ ಖಿನ್ನತೆಯಿರಬಹುದು ಆದರೆ ಅದನ್ನು ಪ್ರಾರಂಭದಲ್ಲಿ ಪತ್ತೆ ಹಚ್ಚಲು ಸಾಧ್ಯವಾಗಿಲ್ಲ ಎನ್ನುವುದು ಕುಟುಂಬದವರ ಅಭಿಪ್ರಾಯ. ಆದರೆ ಅವರನ್ನು ಮಗುವಿನಂತೆ ನೋಡಿಕೊಂಡ ಕುಟುಂಬವನ್ನು ವಂಚಿಸಿ ಕೊವಿಡ್ ಅವರನ್ನು ಸೆಳೆದೊಯ್ದಿದೆ. ವ್ಯವಸ್ಥೆಯ ವೈಫಲ್ಯವಿದು. ಕ್ಷಮಿಸಲಾಗದು.

ತೀವ್ರವಾದ ಆರ್ಥಿಕ ಬಿಕ್ಕಟ್ಟು ಮತ್ತು ಹೆಚ್ಚಿದ ಕಾರ್ಮಿಕ ವರ್ಗದ ಪ್ರತಿರೋಧ 1985-1989



ರಾಜೀವ್ ಗಾಂಧಿಯವರ ಹೊಸ ಆರ್ಥಿಕ ನೀತಿ ಭಾರತದ ಆರ್ಥಿಕತೆಯನ್ನು ಜಾಗತಿಕ ಆರ್ಥಿಕತೆಯೊಂದಿಗೆ ಜೋಡಿಸುವ ಪ್ರಯತ್ನ ಮತ್ತು ಅವರು ಪ್ರಾರಂಭಿಸಿದ ಆರ್ಥಿಕ ಕ್ರಮಗಳು ಭಾರತವನ್ನು 1980 ರ ದಶಕದ ಅಂತ್ಯದ ವೇಳೆಗೆ, ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಅತಿದೊಡ್ಡ ಸಾಲಗ್ರಸ್ತ ದೇಶಗಳಲ್ಲಿ ಒಂದಾಗಿಸಿತು. ಈ ಹೊಸ ಆರ್ಥಿಕ ನೀತಿಯ ಈ ದುಷ್ಪರಿಣಾಮಗಳ ಹೊರೆಯನ್ನು ದುಡಿಯುವ ಜನವಿಭಾಗಗಳೆ ಹೊರಬೇಕಾಯಿತು. ಈ ಹಿನ್ನೆಲೆಯಲ್ಲಿ ದೇಶದಲ್ಲಿ 1985-89ರ ಅವಧಿಯಲ್ಲಿ ಹಲವಾರು ಕಾರ್ಮಿಕ ಹೋರಾಟಗಳು, ಕಾರ್ಯಾಚರಣೆಗಳು ನಡೆದವು.

ಮೂಲ ಲೇಖಕರು: **ಸುಕೋಮಲ್ ಸೇನ್** ಸಂಗ್ರಹ-ಅನುವಾದ: ಸಿ.ಆರ್.ಶಾನಭಾಗ್

ಇಂದಿರಾಗಾಂಧಿ ಅವರ ಹತ್ಯೆಯ ನಂತರ 1984 ರ ಡಿಸೆಂಬರ್‌ನಲ್ಲಿ ನಡೆದ ಸಂಸತ್ ಚುನಾವಣೆಯು ರಾಜೀವ್ ಗಾಂಧಿ ನೇತೃತ್ವದ ಕಾಂಗ್ರೆಸ್ (ಐ) ಗೆ ಅಗಾಧ ಬಹುಮತವನ್ನು ನೀಡಿತು. ಹತ್ಯೆಯಾದ ಇಂದಿರಾ ಗಾಂಧಿಯವರ ಬಗ್ಗೆ ಜನಸಾಮಾನ್ಯರ ಆಳವಾದ ಸಹಾನುಭೂತಿ ಅವರ ಮಗ ಮತ್ತು ಪಕ್ಷಕ್ಕೆ ಒಂದು ದೊಡ್ಡ ಚುನಾವಣಾ ಬೆಂಬಲವಾಗಿ ಮಾರ್ಪಟ್ಟಿತು. ವಾಸ್ತವವಾಗಿ ಇದು ರಾಷ್ಟ್ರೀಯ ಏಕತೆಗಾಗಿ ಜನರ ಆಳವಾದ ಕಾಳಜಿಯಾಗಿತ್ತು, ಕಾರ್ಮಿಕ ವರ್ಗ ಮತ್ತು ಲಕ್ಷಾಂತರ ದುಡಿಯುವ ಜನ ತಮ್ಮ ಮೇಲೆ ಪರಿಣಾಮ ಬೀರಿದ್ದ ಸರ್ಕಾರದ ದುಷ್ಕೃತ್ಯಗಳನ್ನು ಮರೆತುಬಿಟ್ಟಿತು.

ಜಾಗತೀಕರಣದ ಆರ್ಥಿಕತೆಗೆ ಅನುಗುಣವಾಗಿ ರಾಜೀವ್ ಗಾಂಧಿಯುವರ ಹೊಸ ಆರ್ಥಿಕ ನೀತಿ ಭಾರತದ ಆರ್ಥಿಕತೆಯುನ್ನು ಜಾಗತಿಕ ಆರ್ಥಿಕತೆಯೊಂದಿಗೆ ಜೋಡಿಸುವ ಪ್ರಯತ್ನ ಮತ್ತು ಅವರು ಪ್ರಾರಂಭಿಸಿದ ಆರ್ಥಿಕ ಕ್ರಮಗಳು, 1980 ರ ದಶಕದ ಆರಂಭದಲ್ಲಿ ಇಂದಿರಾ ಗಾಂಧಿಯವರ ಅಡಿಯಲ್ಲಿ ಪ್ರಾರಂಭವಾದ ಉದಾರೀಕರಣ ನೀತಿಯ ಮುಂದುವರಿಕೆಯಾಗಿತ್ತು.

ಖಾಸಗಿ ಉತ್ಪಾದಕ ಮತ್ತು ಹೂಡಿಕೆದಾರರಿಗೆ ಹೆಚ್ಚಿನ ಪಾತ್ರವನ್ನು ಒದಗಿಸುವ ಹೊಸ ಕೈಗಾರಿಕಾ ನೀತಿಯನ್ನು ಘೋಷಿಸಲಾಯಿತು. ನಿಯಂತ್ರಣಗಳು ಮತ್ತು ನಿಯಂತ್ರಕ ಕಾರ್ಯಗಳನ್ನು ದೊಡ್ಡ ಪ್ರಮಾಣದಲ್ಲಿ ಹಿಂತೆಗೆದುಕೊಳ್ಳಲಾಯಿತು ಮತ್ತು ಖಾಸಗಿ ಮತ್ತು ವಿದೇಶಿ ಬಂಡವಾಳದ ಮುಕ್ತ ಆಟಕ್ಕೆ ಅನುಮತಿಸಲಾಯಿತು. ಆದರೆ ದಾಖಲಾದ ಕೈಗಾರಿಕಾ ಬೆಳವಣಿಗೆಯು ಮುಖ್ಯವಾಗಿ ಜನಸಂಖ್ಯೆಯು ಮೇಲ್‌ಸ್ತರದ 10 ಪ್ರತಿಶತ ಗ್ರಾಹಕರ ಬಳಕೆಯ ಸರಕುಗಳದ್ದೇ ಅಗಿತ್ತು.

ಆದರೆ 1980 ರ ದಶಕದ ಈ 'ಬೆಳವಣಿಗೆಯನ್ನು' ಸಾರ್ವಜನಿಕ ಖರ್ಚಿನಲ್ಲಿ ಭಾರಿ ಹೆಚ್ಚಳ ಅಥವಾ ಸರ್ಕಾರದ, ವಿಶೇಷವಾಗಿ ಕೇಂದ್ರ ಸರ್ಕಾರದ ದೊಡ್ಡ ಕೊರತೆ ಹಣಕಾಸಿನಿಂದ ಸಾಧಿಸಲಾಯಿತು. 1980 ರ ದಶಕದ ಅಂತ್ಯದ ವೇಳೆಗೆ, ಬಾಕಿ ಉಳಿದಿರುವ ವಾಣಿಜ್ಯ ಸಾಲಗಳದೃಷ್ಟಿಯಿಂದ ಭಾರತವು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಅತಿದೊಡ್ಡ ಸಾಲಗ್ರಸ್ತ ದೇಶಗಳಲ್ಲಿ ಒಂದಾಯಿತು.

ಉದ್ಯೋಗದ ಬೆಳವಣಿಗೆಯ ದರವು 1977-78ರಿಂದ 1983- 84 ರಲ್ಲಿ ಶೇಕಡಾ 2.22 ಇದ್ದುದು 1983-84ರಿಂದ 1987-88ರವರೆಗೆ 1.55 ಕ್ಕೆ ಇಳಿಯಿತು.. ಕೃಷಿ ಕ್ಷೇತ್ರದಲ್ಲಿಯೂ ಸಹ ಉದ್ಯೋಗದ ಬೆಳವಣಿಗೆಯ ದರವು ದಶಕದ ಕೊನೆಯಲ್ಲಿ ಶೇಕಡಾ 1.2 ಕ್ಕೆ ಇಳಿಯಿತು.

ಉದ್ಯೋಗದ ಬೆಳವಣಿಗೆಯ ದರದಲ್ಲಿನ ಈ ತೀವ್ರ ಕುಸಿತವು ಅದಾಗಲೇ ಭೀಕರವಾಗಿದ್ದ ನಿರುದ್ಯೋಗ ಸಮಸ್ಯೆಯನ್ನು ಇನ್ನಷ್ಟು ತೀವ್ರಗೊಳಿಸಿತು. ಇದರ ಪರಿಣಾಮವಾಗಿ ಕಾರ್ಮಿಕರು ಹೆಚ್ಚಾಗಿ ಈ ಹೊಸ ಆರ್ಥಿಕ ನೀತಿಯ ಪರಿಣಾಮಗಳ ಹೊರೆಯನ್ನು ಹೊರಬೇಕಾಯಿತು

1985-86ರಲ್ಲಿ ರಾಜೀವ್ ಗಾಂಧಿ ಸರ್ಕಾರದ ಮೊದಲ ಬಜೆಟ್ ಆರ್ಥಿಕ ಮತ್ತು ಕಾರ್ಮಿಕ ನೀತಿಯ ಹೊಸ ದೃಷ್ಟಿಕೋನವನ್ನು ಸ್ಪಷ್ಟವಾಗಿ ತೋರ್ಪಡಿಸಿತು.. ಎಂಆರ್‌ಟಿಪಿ (ಏಕಸ್ವಾಮ್ಯ ನಿರ್ಬಂಧಿತ ವ್ಯಾಪಾರ ಅಭ್ಯಾಸ) ಕಂಪನಿಗಳ ಆಸ್ತಿ ಮಿತಿಯನ್ನು ರೂ. 20 ಕೋಟಿಯಿಂದ ರೂ. 100 ಕೋಟಿ ರೂ. ಗೆ ಏರಿಸಿತು. 25 ಕೈಗಾರಿಕೆಗಳಿಗೆ ಪರವಾನಿಗೆಗಳ ಅಗತ್ಯವಿಲ್ಲದಂತೆ ಮಾಡಲಯಿತು. ಆಮದುಗಳ ಉದಾರೀಕರಣ ಮತ್ತು ಸಾರ್ವಜನಿಕ ವಲಯವನ್ನು ಬಲಿಗೊಟ್ಟು ವಿದ್ಯುತ್ ಉಪಕರಣಗಳು, ಎಲೆಕ್ಟ್ರಾನಿಕ್ ಇತ್ಯಾದಿ ತಯಾರಿಕೆಯಲ್ಲಿ ವಿದೇಶಿ ಸಹಯೋಗದ ಹೆಚ್ಚಳ, ಸಾರ್ವಜನಿಕ ವಲಯವನ್ನು ತೀವ್ರವಾಗಿ ದುರ್ಬಲಗೊಳಿಸುವುದು, ರೈಲ್ವೆ ಪ್ರಯಾಣ ಮತ್ತು ಸರಕು ಸಾಗಣೆ ಶುಲ್ಕ ಹೆಚ್ಚಳಗಳು, ಸರ್ಕಾರದ ಬಜೆಟ್ ಮತ್ತು ಹಣಕಾಸಿನ ನೀತಿಯನ್ನು ವ್ಯಕ್ತಪಡಿಸಿದವು. .

ನಿರುದ್ಯೋಗ ಪರಿಸ್ಥಿತಿಯು ದೇಶದಲ್ಲಿ ಭೀಕರ ಸಮಸ್ಯೆಯನ್ನು ತಂದೊಡ್ಡಿದ್ದರೂ ಸಹ, ಗಣಕೀಕರಣ ಮತ್ತು ಯಾಂತ್ರೀಕರಣದ ವ್ಯಾಪಕ ಯೋಜನೆಯನ್ನು ಸರ್ಕಾರ ಕೈಗೊಂಡಿತು. ಸೇವಾ ವಲಯ, ವಿಶೇಷವಾಗಿ ಹಣಕಾಸು ವಲಯ ಅಂತಹ ಗಣಕೀಕರಣದಿಂದ ಕೆಟ್ಟ ಪರಿಣಾಮ ಅನುಭವಿಸಿತು.

ರೇಲ್ವೆ, ವಿಮಾನಯಾನ ಮತ್ತು ಇತರ ಅನೇಕ ಕೈಗಾರಿಕೆಗಳು. ಕಾರ್ಮಿಕರು ಮತ್ತು ನೌಕರರ ಹೋರಾಟದ ಪರಿಣಾಮವಾಗಿ, ಗಣಕೀಕರಣ ಮತ್ತು ಯಾಂತ್ರೀಕರಣದ ಮೂಲಕ ಹೆಚ್ಚುವರಿಯಾದ ನೌಕರರನ್ನು ವಜಾಮಾಡಲು ಸರ್ಕಾರ ಅಂತಿಮವಾಗಿ ವಿಫಲವಾಯಿತು ಮತ್ತು ಮರು ತರಬೇತಿ ಪಡೆದ ನಂತರ ಹೆಚ್ಚುವರಿ ಸಿಬ್ಬಂದಿಗಳನ್ನು ಇತರ ಇಲಾಖೆಗಳಲ್ಲಿ ನಿಯೋಜಿಸಲು ಸರಕಾರವನ್ನು ನಿರ್ಬಂದಿಸಲು ಸಾದ್ಯವಾಯಿತು. ಇದು ಕಾರ್ಮಿಕ ಸಂಘಗಳ ಗಣೀಕರಣ- ವಿರೋಧಿ ಚಳವಳಿಯ ಸಕಾರಾತ್ಮಕ ಸಾಧನೆಯಾಗಿದೆ.

ವಾಸ್ತವವಾಗಿ ಕಾರ್ಮಿಕ ಸಂಘಗಳು ಅಗತ್ಯವಿದ್ದ ಕಡೆ ಆಯ್ದ ಗಣಕೀಕರಣ ಮತ್ತು ಯಾಂತ್ರೀಕರಣವನ್ನು ಬಯಸಿದವು, ಆದರೆ ನೌಕರರ ಉದ್ಯೋಗ ಸುರಕ್ಷತೆ ಮತ್ತು ನಿರುದ್ಯೋಗ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಳ್ಳದ ವಿವೇಚನೆಯಿಲ್ಲದ ಯಾಂತ್ರೀಕರಣವನ್ನು ವಿರೋಧಿಸುತ್ತಿದ್ದವು.

ಕಾರ್ಮಿಕ ಸಂಘಗಳು ವಿರೋಧಿಸಿದ ಸರ್ಕಾರದ ಹೊಸ ಜವಳಿ ನೀತಿಯು ಹಲವಾರು ಗಿರಣಿಗಳನ್ನು ಮುಚ್ಚಲು ಕಾರಣವಾಯಿತು ಮತ್ತು ಸಾವಿರಾರು ಕಾರ್ಮಿಕರು ತಮ್ಮ ಉದ್ಯೋಗವನ್ನು ಕಳೆದುಕೊಂಡರು ಎಂದು ಇಲ್ಲಿ ಗಮನಿಸಬಹುದು.

ಇತರ ಕ್ಷೇತ್ರಗಳಲ್ಲಿನ ಹೋರಾಟಗಳು

ರಾಷ್ಟ್ರೀಕೃತ ಕಲ್ಲಿದ್ದಲು ಗಣಿಗಾರಿಕೆ ಕೈಗಾರಿಕೆಯ ಕಾರ್ಮಿಕರು ತಮ್ಮ ಕಾನೂನುಬದ್ಧ ಬಾಕಿಗಳಿಂದ ತಮ್ಮನ್ನು ವಂಚಿತಗೊಳಿಸಲು ಬಯಸಿದ ಕೋಲ್ ಇಂಡಿಯಾ ಲಿಮಿಟೆಡ್‌ನ ಮನೋಭಾವದ ವಿರುದ್ಧ ನಿರಂತರ ಹೋರಾಟವನ್ನು ನಡೆಸಬೇಕಾಯಿತು. ಏಪ್ರಿಲ್ 9, 1986 ರಂದು, ದೇಶದ ಎಲ್ಲಾ 450 ಕಲ್ಲಿದ್ದಲು ಗಣಿಗಳ ಕಾರ್ಮಿಕರು ಒಗ್ಗೂಡಿ ಒಂದು ದಿನದ ಮುಷ್ಕರದಲ್ಲಿ ಎರಡನೇ ರಾಷ್ಟ್ರೀಯ ಕಲ್ಲಿದ್ದಲು ವೇತನ ಒಪ್ಪಂದವನ್ನು ಪೂರ್ಣವಾಗಿ ಜಾರಿಗೆ ತರಬೇಕೆಂದು ಒತ್ತಾಯಿಸಿದರು..

ಸಾರ್ವಜನಿಕ ವಲಯುವನ್ನು ಕ್ರಮೇಣ ಖಾಸಗೀಕರಣಗೊಳಿಸುವ ಸರ್ಕಾರದ ನೀತಿಯ ವಿರುದ್ಧ ಅಖಿಲ ಭಾರತ ಸಮಾವೇಶ 1986 ರ ಮಾರ್ಚ್ 28 ಮತ್ತು 29 ರಂದು ದುರ್ಗಾಪುರದಲ್ಲಿ ನಡೆದು, 1986 ರ ಮೇ 21 ರಂದು 'ಸಾರ್ವಜನಿಕ ವಲಯ ಉಳಿಸಿ ದಿನವನ್ನು 'ಆಚರಿಸಲು ಕರೆ ನೀಡಿತು.

ಸರ್ಕಾರದ ಹೊಸ ಜವಳಿ ನೀತಿಯ ಹಿನ್ನೆಲೆಯಲ್ಲಿ ಹಲವಾರು ಗಿರಣಿಗಳನ್ನು ಮುಚ್ಚುತ್ತಿದ್ದುದರಿಂದ ಜವಳಿ ಕಾರ್ಮಿಕರು ಆರ್ಥಿಕ ಬೇಡಿಕೆಗಳಿಗಾಗಿ ಮತ್ತು ಉದ್ಯೋಗ ಸುರಕ್ಷತೆಗಾಗಿ ಎರಡು ಆಯಾಮಗಳಲ್ಲಿ ಹೋರಾಟಗಳನ್ನು ಆಯೋಜಿಸಬೇಕಾಯಿತು.

ಲೊಕೊ ರನ್ನಿಂಗ್ ಸ್ಟಾಫ್ ಅಸೋಸಿಯೇಷನ್ ಘಟಕಗಳು 1986 ರ ಜುಲೈ 26 ರಿಂದ ಅನಿರ್ದಿಷ್ಟ ಉಪವಾಸ ಕಾರ್ಯಕ್ರಮವನ್ನು ನಡೆಸಿದವು, ಇದು 32 ರಿಂದ 58 ಗಂಟೆಗಳವರೆಗೆ ಮುಂದುವರೆಯಿತು ಮತ್ತು ಸಂಘ ಮತ್ತು ರೈಲ್ವೆ ಅಧಿಕಾರಿಗಳ ನಡುವೆ ಗೌರವಾನ್ವಿತ ಒಪ್ಪಂದದ ನಂತರ ಅದನ್ನು ಹಿಂತೆಗೆದುಕೊಳ್ಳಲಾಯಿತು. ಸಮನ್ವಯ ಸಮಿತಿಯ ಕರೆಯ ಮೇರೆಗೆ, ಪಶ್ಚಿಮ ಬಂಗಾಳದ ಡಾರ್ಜಿಲಿಂಗ್ ಪ್ರದೇಶದ ಚಹಾ ತೋಟದ ಕಾರ್ಮಿಕರು ತಮ್ಮ ಬೇಡಿಕೆಗಳಿಗೆ ಒತ್ತಾಯಿಸಲು 1986 ರ ಸೆಪ್ಟೆಂಬರ್ 11 ರಂದು ಒಂದು ದಿನದ ಮುಷ್ಕರವನ್ನು ನಡೆಸಿದರು.

ರಾಷ್ಟ್ರೀಯ ಸಮಗ್ರತೆ ಮತ್ತು ಕೋಮು-ಸೌಹಾರ್ದಕ್ಕಾಗಿ ಕಾರ್ಮಿಕ ಸಂಘಟನೆಗಳ ಹೋರಾಟ

ಇದು ದೇಶದ ವಿವಿಧ ಭಾಗಗಳಲ್ಲಿ- ಪಂಜಾಬ್, ಅಸ್ಸಾಂ, ಇತರ ಈಶಾನ್ಯ ರಾಜ್ಯಗಳಲ್ಲಿ, ಡಾರ್ಜಿಲಿಂಗ್ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಕಾಶ್ಮೀರದಲ್ಲಿ ಪ್ರತ್ಯೇಕತಾವಾದಿ ಶಕ್ತಿಗಳ ಏರಿಕೆಗೆ ಸಾಕ್ಷಿಯಾದ ಅವಧಿ. ರಾಷ್ಟ್ರೀಯ ಸ್ವಯಂ ಸೇವಕ ಸಂಘ ಮತ್ತು ಇತರ ಕೋಮುವಾದಿ ಸಂಘಟನೆಗಳ ಕೋಮು ಪಡೆಗಳು ದೇಶದ ವಿವಿಧ ಭಾಗಗಳಲ್ಲಿ ಕೋಮು ಉದ್ವೇಗ ಮತ್ತು ಹಿಂಸಾಚಾರವನ್ನು ರೂಪಿಸಿದವು.

ಈ ಪ್ರತಿಗಾಮಿ ಶಕ್ತಿಗಳ ಏರಿಕೆ ಕಾರ್ಮಿಕ ವರ್ಗದ ಚಳವಳಿಯ ಏಕತೆಗೆ ಸವಾಲಾಗಿತ್ತು. ಆದ್ದರಿಂದ ವಿವಿಧ ಪ್ರಗತಿಪರ ಕಾರ್ಮಿಕ ಸಂಘಗಳು ಶೈಕ್ಷಣಿಕ ತರಭೇತಿಯ ಮೂಲಕ ಮತ್ತು ಕೆಲವು ಕಾರ್ಯಾಚರಣೆಗಳ ಮೂಲಕ ಕಾರ್ಮಿಕರನ್ನು ಮತ್ತು ನೌಕರರನ್ನು ಈ ವಿಛಿದ್ರಕಾರಿ ಶಕ್ತಿಗಳ ವಿರುದ್ಧ ಸಜ್ಜುಗೊಳಿಸಲು ಪ್ರಯತ್ನಿಸಿದವು. 1986 ರ ಮೇ 11 ರಂದು ದೆಹಲಿಯಲ್ಲಿ ಅಖಿಲ ಭಾರತ ಸಮಾವೇಶವನ್ನು ಆಯೋಜಿಸಲಾಯಿತು ಮತ್ತು ರ‍್ಯಾಲಿಗಳು ಮತ್ತು ಮೆರವಣಿಗೆಗಳ ಮೂಲಕ ದೇಶಾದ್ಯಂತ 1986 ರ ಆಗಸ್ಟ್ 9 ರಂದು ರಾಷ್ಟ್ರೀಯ ಸಮಗ್ರತಾ ದಿನವನ್ನು ಆಚರಿಸಲು ಕರೆ ನೀಡಲಾಯಿತು.

ಅಂತರರಾಷ್ಟ್ರೀಯ ಕಾರ್ಮಿಕ ವರ್ಗದ ಚಳುವಳಿ ಮತ್ತು ಡಬ್ಲ್ಯೂ.ಎಫ್.ಟಿ.ಯೂ. ಅಧಿವೇಶನ

1986 ರ ಸೆಪ್ಟೆಂಬರ್ 16 ರಿಂದ ಸೆಪ್ಟೆಂಬರ್ 22 ರವರೆಗೆ ಬರ್ಲಿನ್‌ನಲ್ಲಿ ನಡೆದ ವರ್ಲ್ಡ್ ಫೆಡರೇಶನ್ ಆಫ್ ಟ್ರೇಡ್ ಯೂನಿಯನ್ಸ್ ಹನ್ನೊಂದನೇ ಅಧಿವೇಶನ ಅಂತರರಾಷ್ಟ್ರೀಯ ಮಟ್ಟದಲ್ಲಿ ಕಾರ್ಮಿಕ-ವರ್ಗದ ಚಳವಳಿಗೆ ಪ್ರಮುಖ ಘಟನೆಯಾಗಿತ್ತು.

ಅಧಿವೇಶನ ಮೂರನೇ ವಿಶ್ವದ ರಾಷ್ಟ್ರಗಳನ್ನು ಶೋಷಿಸುವಲ್ಲಿ ಬಹುರಾಷ್ಟ್ರೀಯ ನಿಗಮಗಳ ಪಾತ್ರವನ್ನು ಖಂಡಿಸಿತು. ನಡೆಯುತ್ತಿದ್ದ ಶಸ್ತ್ರಾಸ್ತ್ರ ಸ್ಪರ್ಧೆಯ ಬಗ್ಗೆ ಗಮನ ಸೆಳೆಯಿತು ಮತ್ತು ವಿಶ್ವ ಶಾಂತಿಗಾಗಿ ಹೋರಾಟವನ್ನು ಬಲಪಡಿಸುವ ಅಗತ್ಯವನ್ನು ಒತ್ತಿಹೇಳಿತು.

ಅದೇ ಸಮಯದಲ್ಲಿ ಅಧಿವೇಶನ ವಿವಿಧ ದೇಶಗಳಲ್ಲಿನ ಕಾರ್ಮಿಕ ವರ್ಗವನ್ನು ತಮ್ಮ ಸರ್ಕಾರಗಳ ಪ್ರತಿಗಾಮಿ ನೀತಿಗಳ ವಿರುದ್ಧ ಹೋರಾಡುತ್ತಲೇ, ವರ್ಣಭೇದ ನೀತಿ ಮತ್ತು ಶೋಷಣೆಯ ವಿರುದ್ಧ ಹೋರಾಡಲು ಒತ್ತಾಯಿಸಿತು.

1987 ರ ಜನವರಿ 21 ರಂದು ಆಯೋಜಿಸಿದ್ದ ಸಾರ್ವಜನಿಕ ವಲಯದ ನೌಕರರ ಬೃಹತ್ ಮುಷ್ಕರದಿಂದ 1987 ರ ವರ್ಷ ಪ್ರಾರಂಭವಾಯಿತು.

ಕೇಂದ್ರ ಸಾರ್ವಜನಿಕ ವಲಯದ, ಬ್ಯಾಂಕಿಂಗ್ ಮತ್ತು ವಿಮಾ ಕೈಗಾರಿಕೆಗಳ ಸುಮಾರು 25ಲಕ್ಷ ಉದ್ಯೋಗಿಗಳು. ತಮ್ಮ 14 ಅಂಶಗಳ ಬೇಡಿಕೆಗಳನ್ನು ಬೆಂಬಲಿಸಿ ದೇಶಾದ್ಯಂತ ಒಂದು ದಿನ ಕೆಲಸವನ್ನು ನಿಲ್ಲಿಸಿದರು.

ಅಖಿಲ ಭಾರತ ರಾಸಾಯನಿಕ ಮತ್ತು ಔಷಧೀಯ ನೌಕರರ ಒಕ್ಕೂಟ ಮತ್ತು ಫೆಡರೇಶನ್ ಆಫ್ ಮೆಡಿಕಲ್ ಅಂಡ್ ಸೇಲ್ಸ್ ರೆಪ್ರೆಸೆಂಟೇಟಿವ್ಸ್ ಅಸೋಸಿಯೇಶನ್ ಆಫ್ ಇಂಡಿಯಾ ಸೇರಿ 1987 ರ ಜನವರಿ 9 ರಂದು ದೆಹಲಿಯಲ್ಲಿ ಆಯೋಜಿಸಿದ್ದ ಸಮಾವೇಶ, ಹೊಸ ಔಷಧ ನೀತಿಯನ್ನು ತಿರಸ್ಕರಿಸಿತು ಮತ್ತು ಹಾಥಿ ಸಮಿತಿಯು ಶಿಫಾರಸು ಮಾಡಿದಂತೆ ಬಹುರಾಷ್ಟ್ರೀಯ ಔಷಧಿ ಕಂಪನಿಗಳನ್ನು ರಾಷ್ಟ್ರೀಕರಣಗೊಳಿಸುವಂತೆ ಮತ್ತು ಔಷಧ ಉದ್ಯಮದಲ್ಲಿ ಸಾರ್ವಜನಿಕ ವಲಯಕ್ಕೆ ಪ್ರಮುಖ ಪಾತ್ರವನ್ನು ನೀಡುವಂತೆ ಒತ್ತಾಯಿಸಿತು..

ಅದೇ ರೀತಿ, ಜನವರಿ 19, 1987 ರಂದು ಕೇಂದ್ರ ಹಣಕಾಸು ಸಚಿವರು ಟ್ರೇಡ್ ಯೂನಿಯನ್ ಪ್ರತಿನಿಧಿಗಳ ಸಭೆಯನ್ನು ಬಜೆಟ್ ಪೂರ್ವ ಚರ್ಚೆಗೆ ಕರೆದಾಗ. ಎಡ ಕಾರ್ಮಿಕ ಸಂಘಗಳು ಮತ್ತು ಇತರ ಕಾರ್ಮಿಕ ಸಂಘಗಳು ಕೈಗಾರಿಕಾ ವಲಯದಲ್ಲಿ ಸರ್ಕಾರದ ನೀತಿಗಳನ್ನು ಟೀಕಿಸಿದವು.

ಸಿಮೆಂಟ್ ಕೈಗಾರಿಕೆಯ ವಿವಿಧ ಸಂಘಗಳ ಜಂಟಿ ಸಮಾವೇಶದ ಕರೆಯನ್ನು ಅನುಸರಿಸಿ ಸುಮಾರು ಒಂದು ಲಕ್ಷ ಕಾರ್ಮಿಕರು 5.2.1987 ರಂದು ಮುಷ್ಕರ ನಡೆಸಿದರು..

ಸಕ್ಕರೆ ಕಾರ್ಖಾನೆ ಕಾರ್ಮಿಕರು, ಎರಡು ಅಂಶಗಳ ಚಾರ್ಟರ್-ಎರಡನೇ ಮಧ್ಯಂತರ ಪರಿಹಾರ ಮತ್ತು ಡಿಎ ರೂ. ಪ್ರತಿ ಪಾಯಿಂಟ್‌ಗೆ 1.65 ರೂ. ಗಾಗಿ ಒತ್ತಾಯಿಸಿ, ಜನವರಿ 28, 1987 ರಂದು ದೇಶವ್ಯಾಪಿ ಮುಷ್ಕರ ನಡೆಸಿದರು.

ಎಲ್ಲಾ ಕೈಗಾರಿಕಾ ಎಸ್ಟೇಟ್‌ಗಳ ಕಾರ್ಮಿಕರು ವಿವಿಧ ಕಾರ್ಮಿಕ ಸಂಘಗಳ ಜಂಟಿ ಕರೆಯ ಮೇರೆಗೆ, ಸಮರ್ಪಕ ಕನಿಷ್ಠ ವೇತನವನ್ನು ಕೋರಿ 1987 ರ ಜನವರಿ 16 ರಂದು ಒಂದು ದಿನದ ಮುಷ್ಕರ ನಡೆಸಿದರು.

ದೆಹಲಿಯು ಕೇಂದ್ರ ಸರ್ಕಾರಿ ಆಸ್ಪತ್ರೆಗಳ ದಾದಿಯರು ಸಹ ನಾಲ್ಕನೇ ವೇತನ ಆಯೋಗವು ಶಿಫಾರಸು ಮಾಡಿದಂತೆ ವೇತನವನ್ನು ಮೇಲ್ಮುಖವಾಗಿ ಪರಿಷ್ಕರಿಸುವಂತೆ ಒತ್ತಾಯಿಸಿ, ಜನವರಿ 19, 1987 ರಿಂದ ಅನಿರ್ದಿಷ್ಟ ಮುಷ್ಕರವನ್ನು ಪ್ರಾರಂಭಿಸಿದರು.)

ಏತನ್ಮಧ್ಯೆ, ಮಾರ್ಚ್ 1987 ರಲ್ಲಿ ನಡೆದ ವಿಧಾನಸಭಾ ಚುನಾವಣೆಗಳಲ್ಲಿ, ಪಶ್ಚಿಮ ಬಂಗಾಳದಲ್ಲಿ ಎಡರಂಗ ಮತ್ತೆ ಅಧಿಕಾರಕ್ಕೆ ಬಂದಿತು ಮತ್ತು ಕೇರಳದಲ್ಲಿ ಎಡ ಪ್ರಜಾಪ್ರಭುತ್ವ ರಂಗವು ಚುನಾವಣೆಯಲ್ಲಿ ಗೆದ್ದು ಸರ್ಕಾರವನ್ನು ರಚಿಸಿತು. ಎರಡೂ ರಾಜ್ಯಗಳಲ್ಲಿ, ಎಡಪಂಥೀಯರನ್ನು ಅಧಿಕಾರಕ್ಕೆ ತರುವಲ್ಲಿ ಕಾರ್ಮಿಕ ವರ್ಗವು ಮಹತ್ವದ ಪಾತ್ರ ವಹಿಸಿತು.

16 ಜೂನ್ 1987 ರಂದು ದೆಹಲಿಯುಲ್ಲಿ ನಡೆದ ಸಾರ್ವಜನಿಕ ವಲಯದ ಸಂಘಗಳ ಜಂಟಿ ಸಭೆಯು 1.1.1986 ರಿಂದ ಜಾರಿಗೆ ಬರುವಂತೆ ಒಟ್ಟು ವೇತನದ ಶೇಕಡಾ 20 ಕ್ಕೆ ಸಮನಾದ ಮಧ್ಯಂತರ ಪರಿಹಾರ,. ಬೆಲೆ ಸೂಚ್ಯಂಕದ ಏರಿಕೆಯ ಸಂಪೂರ್ಣ ತಟಸ್ಥೀಕರಣಕ್ಕೆ ಮತ್ತು ಬೇಡಿಕೆಗಳ ಚಾರ್ಟರ್‌ನ ಇತ್ಯರ್ಥಕ್ಕೆ ಒತ್ತಾಯಿಸಿ, 21 ಜುಲೈ 1987 ರಂದು ಒಂದು ದಿನದ ಮುಷ್ಕರಕ್ಕೆ, ಮತ್ತು ನಂತರ ಅನಿರ್ದಿಷ್ಟ ಮುಷ್ಕರಕ್ಕೆ ನಿರ್ಧರಿಸಿತು. ಸರ್ಕಾರವು ಸಂಘಗಳೊಂದಿಗೆ ಮಾತುಕತೆ ನಡೆಸಿತು ಮತ್ತು ಮಧ್ಯಂತರ ಪರಿಹಾರದ ಸಮಸ್ಯೆಯನ್ನು ಆಗಸ್ಟ್ 18, 1987 ರಂದು ಇತ್ಯರ್ಥಪಡಿಸಲಾಯಿತು.

ಪಶ್ಚಿಮ ಬಂಗಾಳದಲ್ಲಿ ಸುಮಾರು 60,000 ಜವಳಿ ಕಾರ್ಮಿಕರು ಜುಲೈ 22, 1987 ರಂದು

ಪುಟ 14 ನೋಡಿ

ಭಾರತದ ಲಸಿಕೆ ಪೂರೈಕೆಯನ್ನು ತುರ್ತಾಗಿ ವಿಸ್ತರಿಸಬೇಕಾಗಿದೆ ಮತ್ತು ಅದು ಸಾಧ್ಯವಿದೆ





ಅಖಿಲ ಭಾರತ ಜನವಿಜ್ಞಾನ ಜಾಲದ ಹೇಳಿಕೆ
200ಕ್ಕೂ ಹೆಚ್ಚು ವಿಜ್ಞಾನಿಗಳು, ಡಾಕ್ಟರುಗಳು, ಅಕೆಡೆಮಿಕ್‌ಗಳ ಅನುಮೋದನೆ

ಭಾರತದಲ್ಲಿ ಕೊವಿಡ್–19 ಮಹಾಸೋಂಕನ್ನು ಎದುರಿಸಲು ಅತ್ಯಗತ್ಯವಾದ ಲಸಿಕೆಗಳ ಸದ್ಯದ ಉತ್ಪಾದನೆಯ ಸ್ವರೂಪವನ್ನು ಕಂಡರೆ ದೇಶದ ಇಡೀ ಜನಸಂಖ್ಯೆಗೆ ಲಸಿಕೆ ನೀಡುವುದು ಬಹಳ ದೂರದ ಕನಸು; ಇದು ಕೈಗೂಡಬೇಕಾದರೆ ಸಾರ್ವಜನಿಕ ಮತ್ತು ಖಾಸಗಿ ವಲಯದಲ್ಲಿ ಉತ್ಪಾದನೆಯನ್ನು ತುರ್ತಾಗಿ ವಿಸ್ತರಿಸುವುದು ಅತ್ಯಗತ್ಯ, ಲಸಿಕೆ ಸಂಬಂಧಿತ ಸಂಶೋಧನೆ ಮತ್ತು ಅಭಿವೃದ್ಧಿಯನ್ನು ಆದಷ್ಟು ಬೇಗನೇ ವಿಸ್ತರಿಸಬೇಕು ಎಂದು 'ಅಖಿಲ ಭಾರತ ಜನವಿಜ್ಞಾನ ಜಾಲ'(ಎಐಪಿಎಸ್‌ಎನ್) ಮೇ 27 ರಂದು ಪ್ರಕಟಿಸಿರುವ ಹೇಳಿಕೆ ಆಗ್ರಹಿಸಿದೆ.

2000ದ ದಶಕದವರೆಗೆ, ಸಾರ್ವತ್ರಿಕ ಲಸಿಕಾ ಕಾರ್ಯಕ್ರಮಕ್ಕೆ 80%ದಷ್ಟು ಭಾರತದ ಲಸಿಕೆ ಸಾರ್ವಜನಿಕ ವಲಯದ ಮೂಲದಿಂದ ಉತ್ಪಾದನೆಯಾಗಿತ್ತು. ಇಂದು, 90%ದಷ್ಟು, ಅದೂ ದುಬಾರಿ ಬೆಲೆಗೆ ಖಾಸಗಿ ವಲಯದಿಂದ ಪೂರೈಕೆಯಾಗುತ್ತಿದೆ ಎಂದು ಖೇದ ವ್ಯಕ್ತಪಡಿಸಿರುವ ಎಐಪಿಎಸ್‌ಎನ್ ಹೇಳಿಕೆ, **ಲಸಿಕೆಗಳ ಸ್ಥಳೀಯ ಉತ್ಪಾದನೆಯನ್ನು ವಿಸ್ತರಿಸಲು ಕೊಡುಗೆ ನೀಡಬಲ್ಲ ಹಲವು ಸಾರ್ವಜನಿಕ ವಲಯದ ಮತ್ತು ಖಾಸಗಿ ವಲಯದ ಘಟಕಗಳನ್ನು ಭಾರತ ಹೊಂದಿದೆ, ಇವನ್ನು ತುರ್ತಾಗಿ ಬಳಸಿಕೊಳ್ಳಬೇಕು** ಎಂದಿದೆ.

ಲಸಿಕೆಗಳ ದೇಶೀಯ ಉತ್ಪಾದನೆಯನ್ನು ತುರ್ತಾಗಿ ಹೆಚ್ಚಿಸಲು ಹಾಗೂ, ಸಂಬಂಧಿತ ಸಂಶೋಧನೆ ಮತ್ತು ಅಭಿವೃದ್ಧಿ ಉತ್ತಮಪಡಿಸಲು, ಶೀಘ್ರವಾಗಿ ನೀತಿಯನ್ನು ಘೋಷಿಸಲು ಸರ್ಕಾರಕ್ಕೆ ಏಳು ನಿರ್ದಿಷ್ಟ ಸಲಹೆಗಳನ್ನು ಈ ಹೇಳಿಕೆ ನೀಡಿದೆ.

ಈ ಹೇಳಿಕೆಗೆ ದೇಶದ ಪ್ರಖ್ಯಾತ ವೈರಾಣು ತಜ್ಞೆ ಗಗನ್‌ದೀಪ್ ಕಂಗ್, ಪುಣೆಯ ಐಐಎಸ್‌ಇಆರ್ ನ ವಿಜ್ಞಾನಿ ಸತ್ಯಜಿತ್ ರಥ್, ಜಾಗತಿಕ ಜನಾರೋಗ್ಯ ಆಂದೋಲನದ ಟಿ.ಸುಂದರರಾಮನ್, ದಿಲ್ಲಿ ಸಾಯನ್ಸ್ ಫೋರಂನ ಡಿ.ರಘುನಂದನ್, ಬೆಂಗಳೂರಿನ ರಾಷ್ಟ್ರೀಯ ಉನ್ನತ ಅಧ್ಯಯನ ಸಂಸ್ಥೆಯ ತೇಜಲ್ ಕಾನಿಟ್ಕರ್, ವಿಜ್ಞಾನಿ ಗೌಹರ್ ರಝಾ ಮುಂತಾದ 214 ವಿಜ್ಞಾನಿಗಳು, ಡಾಕ್ಟರುಗಳು ಮತ್ತು ವಿವಿಧ ಉನ್ನತ ಅಧ್ಯಯನ ಸಂಸ್ಥೆಗಳ ಚಿಂತಕರು ಅನುಮೋದನೆ ವ್ಯಕ್ತಪಡಿಸಿ ಸಹಿ ಮಾಡಿದ್ದಾರೆ. ಈ ಹೇಳಿಕೆಯ ಪೂರ್ಣ ಪಾಟವನ್ನು ಈ ಮುಂದೆ ಕೊಡಲಾಗಿದೆ.

ಭಾರತದ ಲಸಿಕೆ ಅಗತ್ಯವನ್ನು ಪೂರೈಸಲು ಸಂಶೋಧನೆ ಮತ್ತು ಉತ್ಪಾದನೆಯನ್ನು ತುರ್ತಾಗಿ ವಿಸ್ತರಿಸಬೇಕು

ಹೊಸ ರಣನೀತಿಗಳು ಅಗತ್ಯ

ಪ್ರಸ್ತುತ ಭಾರತದ ಜನಸಂಖ್ಯೆ 130 ಕೋಟಿಗೂ ಅಧಿಕವಿದ್ದು, ಪೂರ್ಣ ಪ್ರಮಾಣದ ಜನಸಂಖ್ಯೆಗೆ ಲಸಿಕೆಯನ್ನು ನೀಡಲು 310 ಕೋಟಿ ಡೋಸೇಜ್ (3.1 ಬಿಲಿಯನ್ ಡೋಸೇಜ್) ಅಥವಾ (ಪ್ರಕ್ರಿಯೆಯಲ್ಲಿ ಪ್ರತಿಶತ 15ರಷ್ಟು ಪೋಲಾಗುವುದು ಎಂದಿಟ್ಟುಕೊಂಡು) 18 ಮೇಲ್ಪಟ್ಟು ವಯಸ್ಕರಿಗೆ 218.5 ಕೋಟಿ ಡೋಸೇಜ್ ಆದರೂ ಅಗತ್ಯವಿದೆ. ಇದು ಸುಲಭದ ಕೆಲಸವಲ್ಲ. ಹಾಗಾಗಿ ಲಸಿಕೆಯ ಪ್ರಮುಖ ರಫ್ತುದಾರನಾಗಿದ್ದ ಮತ್ತು ಪ್ರಸಕ್ತ ಸಾಂಕ್ರಾಮಿಕಕ್ಕೆ ಮುಂಚಿನಿಂದಲೂ ಬೃಹತ್ ಪ್ರಮಾಣದ ಲಸಿಕೆ ಉತ್ಪಾದನೆಯಲ್ಲೂ ಮುಂಚೂಣಿಯಲ್ಲಿದ್ದ ಭಾರತ, ಕೋವಿಡ್–19 ಲಸಿಕೆಗಳನ್ನು ಉತ್ಪಾದಿಸಲು ಕೇವಲ ಎರಡು ಖಾಸಗಿ ದೇಶೀ ಕಂಪನಿಗಳಾದ, ಸೆರಮ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾ (ಎಸ್.ಐ.ಐ) ಮತ್ತು ಭಾರತ್ ಬಯೋಟೆಕ್ ಮೇಲೆ ಏಕೆ ಅವಲಂಬಿಸಬೇಕಾಗಿತ್ತು – ಎಂಬುದನ್ನು ಭಾರತೀಯರು ತಿಳಿಯಬೇಕಾಗಿದೆ. ಇದು ದೇಶಕ್ಕೆ ತ್ರಾಸದಾಯಕ ತೊಡಕು ಆಗಿದೆ.

ಇಂದು ಭಾರತದಲ್ಲಿ ಲಸಿಕೆಯ ಸ್ಥಳೀಯ ಉತ್ಪಾದನೆಯನ್ನು ವಿಸ್ತರಿಸಲು ಕೊಡುಗೆಯನ್ನು ನೀಡಬಹುದಾದ ಹಲವು ಸರ್ಕಾರಿ ಮತ್ತು ಖಾಸಗಿ ಸ್ವಾಮ್ಯದ ಉತ್ಪಾದನಾ ಘಟಕಗಳಿವೆ. ಸದ್ಯ ಭಾರತದಲ್ಲಿ ಸೆರಮ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾ (ಎಸ್.ಐ.ಐ), ಪುಣೆ ಯ ಕೋವಿಶೀಲ್ಡ್ ಮತ್ತು ಭಾರತ್ ಬಯೋಟೆಕ್ (ಬಿ.ಬಿ), ಹೈದರಬಾದ್ ನ ಕೋವಾಕ್ಸಿನ್ ಪೂರೈಕೆಯಾಗುತ್ತಿವೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಸಂಸ್ಥೆಯಾದ ಭಾರತೀಯ ವೈದ್ಯಕೀಯ ಸಂಶೋಧನಾ ಸಂಸ್ಥೆ (ಐ.ಸಿ.ಎಂ.ಆರ್)ಯಡಿಯ ಸಾರ್ವಜನಿಕ ವಲಯದ ಸಂಶೋಧನಾ ಮತ್ತು ಅಭಿವೃದ್ಧಿ (ಆರ್ ಅಂಡ್ ಡಿ) ಸಂಸ್ಥೆಯು ಭಾರತ್ ಬಯೋಟೆಕ್ ಮತ್ತು ನ್ಯಾಷನಲ್ ಇನಸ್ಟೀಟ್ಯೂಟ್ ಆಫ್ ವೈರಾಲಜಿ (ಎನ್.ಐ.ವಿ)ಯ ಸಹಯೋಗದೊಂದಿಗೆ ಕೋವ್ಯಾಕ್ಸಿನ್ ತಂತ್ರಜ್ಞಾನವನ್ನು ಸಂಪೂರ್ಣವಾಗಿ ದೇಶೀಯವಾಗಿ ಅಭಿವೃದ್ಧಿಪಡಿಸಿದೆ. ಆದ್ದರಿಂದ, ಸಾರ್ವಜನಿಕ ಘಟಕಗಳನ್ನು (ಉತ್ಪಾದನೆಗೆ) ಬೆಂಬಲಿಸಲು ಕೇಂದ್ರ ಸರ್ಕಾರಕ್ಕೆ (ಮಾರ್ಚ್–ಇನ್–ರೈಟ್ಸ್ ಎಂದು ಕರೆಯಲಾಗುವ ಕಾನೂನುಬದ್ಧ) ಅಧಿಕಾರವಿರುವುದರಿಂದಲೇ, ಭಾರತ್ ಬಯೋಟೆಕ್ ಮೂರು ಸಾರ್ವಜನಕ ವಲಯದ ಘಟಕಗಳಿಗೆ ತಂತ್ರಜ್ಞಾನವನ್ನು ವರ್ಗಾಯಿಸಲು ಮೌನವಾಗಿ ಸಮ್ಮತಿಸಿತು.

2000ದ ದಶಕದವರೆಗೆ, ಸಾರ್ವತ್ರಿಕ ಲಸಿಕಾ ಕಾರ್ಯಕ್ರಮಕ್ಕೆ ಪ್ರತಿಶತ 80ರಷ್ಟು ಭಾರತದ ಲಸಿಕೆ ಸಾರ್ವಜನಿಕ ವಲಯದ ಮೂಲದಿಂದ ಉತ್ಪಾದನೆಯಾಗಿತ್ತು. ಇಂದು, 90%ರಷ್ಟು, ಅದೂ ದುಬಾರಿ ಬೆಲೆಗೆ ಖಾಸಗಿ ವಲಯದಿಂದ ಪೂರೈಕೆಯಾಗುತ್ತಿದೆ. ಬ್ರೆಜಿಲ್, ಕ್ಯೂಬಾ ಮತ್ತು ಚೀನಾ ಗಳು ತಮ್ಮ ಜನಸಂಖ್ಯೆಗೆ ಲಸಿಕೆಯನ್ನು ನೀಡಲು ಮತ್ತು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಅಗತ್ಯಗಳನ್ನು ಪೂರೈಸಲು ರಫ್ತಿಗಾಗಿ, ಸಂಶೋಧನೆ ಮತ್ತು ಅಭಿವೃದ್ಧಿ ಹಾಗೂ ಉತ್ಪಾದನೆಯ ಸಂಯೋಜಿತ ಯೋಜನೆಗಳನ್ನು ಕೈಗೊಳ್ಳಲು, ಸಾರ್ವಜನಿಕ ವಲಯದ ಕಂಪನಿಗಳು ಮತ್ತು ಸಂಸ್ಥೆಗಳನ್ನು ಬಳಸಿಕೊಳ್ಳುತ್ತಿದೆ. ಇದಕ್ಕೆ ವ್ಯತಿರಿಕ್ತವಾಗಿ, ಭಾರತ ತನ್ನ ಸಾರ್ವಜನಿಕ ವಲಯದ ಘಟಕಗಳನ್ನು ನಿರ್ಲಕ್ಷಿಸಿದೆ. ಭಾರತವು, ಬಹು ಸಂಖ್ಯೆಯ ಕೆಲವು ದಶಕಗಳಷ್ಟು ಹಳೆಯ ಘಟಕಗಳ ಜೊತೆಗೆ, ಸೂಕ್ತ ಆಧುನಿಕ ಮೂಲ ಸೌಕರ್ಯವಿರುವ ಹೊಸ ಘಟಕಗಳನ್ನು ಸಹ ಹೊಂದಿದೆ. ಪ್ರಸ್ತುತ ಭಾರತದಲ್ಲಿ ಹನ್ನೊಂದು ಸಾರ್ವಜನಿಕ ವಲಯದ ಘಟಕಗಳಿವೆ. ಕೆಲವು ಉತ್ಪಾದನೆಯನ್ನು ಆರಂಭಿಸಲು ಬಹುತೇಕ ಸಿದ್ಧವಾಗಿವೆ. 2016ರಲ್ಲಿ ಇತ್ತೀಚೆಗೆ ನಿರ್ಮಾಣ ಪೂರ್ಣಗೊಂಡಿರುವ ಚೆಂಗಾಲಪಟ್ಟುವಿನಲ್ಲಿರುವ, 'ಸಮಗ್ರ ಲಸಿಕಾ ಸಂಕೀರ್ಣ'ಕ್ಕೆ ಕೋವಿಡ್ ಲಸಿಕೆಯ ದೇಶೀ ಉತ್ಪಾದನೆಯನ್ನು ಪ್ರಾರಂಭಿಸಲು ಸ್ವಲ್ಪ ಬೆಂಬಲ ಮತ್ತು ಕೇವಲ ರೂ. 100 ಕೋಟಿಯ ಅವಶ್ಯಕತೆಯಿದೆ.

ಕೋವಿಡ್ ಲಸಿಕೆಯ ದೇಶೀಯ ಉತ್ಪಾದನೆಗೆ ಕೊಡುಗೆಯನ್ನು ನೀಡಬಹುದಾದಂತಹ ಬಯೋಲಾಜಿಕಲ್–ಇ ಹೈದರಾಬಾದ್, ಪನೆಶಿಯಾ ಬಯೋಟೆಕ್, ಸೋಲಾನ್ ಮಂತಾದ ಹಲವಾರು ಖಾಸಗಿ ವಲಯದ ಘಟಕಗಳೂ ಇವೆ. ಲಸಿಕೆಯನ್ನು ತಯಾರಿಸುವ ಕಂಪನಿಗಳ ಜೊತೆಗೆ, ಲಸಿಕೆ ಉತ್ಪಾದನೆಗಾಗಿ ಪುನರ್–ರೂಪಿಸುವ ಸಾಮರ್ಥ್ಯವನ್ನು ಹೊಂದಿರುವ ಬಯೋಲಾಜಿಕ್ಸ್(ಜೈವಿಕ)ನ್ನು ಉತ್ಪಾದಿಸುವ ಕಂಪನಿಗಳೂ ಇವೆ. ಈಗಾಗಲೇ ಡಾ. ರೆಡ್ಡಿಸ್ ಪ್ರಯೋಗಾಲಯ ಮತ್ತು ಕನಿಷ್ಟ ಐದು ಬಯೋಲಾಜಿಕ್ ರಷ್ಯಾದೊಂದಿಗೆ ಕೂಡಿ ದೇಶದಲ್ಲಿ ಸ್ಪುಟ್ನಿಕ್–ವಿ (Sputnik-V) ನ್ನು ತರಿಸಲು ತಯಾರಿ ನಡೆಸಿವೆ. ಕೋವಿಡ್ ಲಸಿಕೆ ಉತ್ಪಾದನೆಯಲ್ಲಿ ತೊಡಗಬಹುದಾದ ಒಟ್ಟಾರೆ, ಸರಿಸುಮಾರು ಮೂವತ್ತು ಘಟಕಗಳಿವೆ. ಭಾರತದಲ್ಲಿ ಇಂತಹ ವಿಸ್ತೃತ ಉತ್ಪಾದನೆಯು ದೇಶದ ಅವಶ್ಯಕತೆಯನ್ನು ಪೂರೈಸುವುದಷ್ಟೇ ಅಲ್ಲದೆ, ಭಾರತ, (ಅದರಲ್ಲೂ ನಿರ್ದಿಷ್ಟವಾಗಿ, ಎಸ್.ಐ.ಐ, ಮುಂಗಡ ಪಾವತಿಯನ್ನು ಸಹ ಪಡೆದಿರುವ) ಅಂತರರಾಷ್ಟ್ರೀಯ ಒಪ್ಪಂದಗಳ ಅಗತ್ಯಗಳನ್ನು ಪೂರೈಸಲು ಸಹಾಯಕವಾಗಬಹುದು. ಖಾಸಗಿ ವಲಯದ ಘಟಕಗಳಿಂದ ಅನುಮೋದಿತ ವಿದೇಶಿ ಲಸಿಕೆಗಳನ್ನು ತರಿಸುವುದು ಒಂದು ಆಯ್ಕೆ.

ಬಹಳ ತಡವಾಗಿ ಆದರೂ ಖಾಸಗಿ ವಲಯವು ಸರ್ಕಾರದಿಂದ ಸಾಕಷ್ಟು ಧನ ಸಹಾಯವನ್ನು ಪಡೆಯುತ್ತಿದೆ. ಆದರೆ ಸಾರ್ವಜನಿಕ ವಲಯಗಳಿಗೆ ಇನ್ನೂ ಅಗತ್ಯ ಬೆಂಬಲ ದೊರೆಯುತ್ತಿಲ್ಲ. ರಾಜ್ಯ ಸರ್ಕಾರಿ ಸ್ವಾಮ್ಯಗಳಿಗೆ ಪರವಾನಿಗೆಯಡಿಯಲ್ಲಿ ಇತ್ತೀಚೆಗಷ್ಟೇ ಸಾಪೇಕ್ಷವಾಗಿ ಸ್ವಲ್ಪ ಪ್ರಮಾಣದ ಸರ್ಕಾರಿ ಅನುದಾನವನ್ನು ಕೋವ್ಯಾಕ್ಸಿನ್ (Covaxin) ಉತ್ಪಾದನೆಗೆ ಇಂಡಿಯನ್ ಇಮ್ಯೂನೋಲಾಜಿಕಲ್ಸ್ ಲಿಮಿಟೆಡ್, ಹೈದರಾಬಾದ್, ಭಾರತ್ ಇಮ್ಯೂನೋಲಾಜಿಕಲ್ಸ್ ಅಂಡ್ ಬಯೋಲಾಜಿಕಲ್ಸ್ ಕಾರ್ಪೊರೇಶನ್ ಲಿಮಿಟೆಡ್, ಬುಲಂದ್ಶಹರ್, ಮತ್ತು ಮಹಾರಾಷ್ಟ್ರದ ಮುಖ್ಯಮಂತ್ರಿಯಿಂದ ಸಾರ್ವಜನಿಕ ವಲಯ ಘಟಕ ಎಂದು ಕರೆಯಲ್ಪಟ್ಟ ಹಾಫ್ಕಿನ್ ಸಂಸ್ಥೆಯಂತಹ ಕಂಪನಿಗಳಿಗೆ ನೀಡಲಾಗಿದೆ. ಆಸ್ಟ್ರಾ–ಝೆನೆಕ ಕಂಪನಿಯಿಂದ ಲೈಸೆನ್ಸ್ ಪಡೆದು ಎಸ್.ಐ.ಐ ಕೋವಿಶೀಲ್ಡ್ ಉತ್ಪಾದಿಸುತ್ತಿರುವುದಿಂದ, ಅದು ತಾನಾಗಿ ತಂತ್ರಜ್ಞಾನವನ್ನು ವರ್ಗಾಯಿಸಲು ಸಾಧ್ಯವಿಲ್ಲ. ಆದರೆ, ಖಂಡಿತವಾಗಿ ಇತರೆ ಘಟಕಗಳಿಗೆ ಸಹ–ಗುತ್ತಿಗೆಯನ್ನು ನೀಡುವಂತೆ ಭಾರತ ಸರಕಾರ ಒತ್ತಾಯಿಸಬಹುದಾಗಿತ್ತು. ಭಾರತ ಸರ್ಕಾರ ಮತ್ತು ಸಾರ್ವಜನಿಕ ವಲಯಗಳಿಗೆ ತಮ್ಮ ದೀರ್ಘಕಾಲದ ಕೃತಜ್ಞತೆಯ ಸಂದಾಯವಾಗಿ, ಇತರ ಘಟಕಗಳಲ್ಲಿ ಲಸಿಕೆ ಉತ್ಪಾದನೆಗೆ ಬೆಂಬಲಿಸಲು, ಎಸ್.ಐ.ಐ. ಮತ್ತು ಭಾರತ್ ಬಯೋಟೆಕ್ ಎರಡನ್ನೂ, ಭಾರತ ಸರಕಾರ ಸೂಕ್ತವಾಗಿ ಒಪ್ಪಿಸಬಹುದಾಗಿತ್ತು.

ಲಸಿಕೆಗಳ ದೇಶೀಯ ಉತ್ಪಾದನೆಯನ್ನು ತುರ್ತಾಗಿ ಹೆಚ್ಚಿಸಲು ಹಾಗೂ, ಸಂಬಂಧಿತ ಸಂಶೋಧನೆ ಮತ್ತು ಅಭಿವೃದ್ಧಿ ಉತ್ತಮಪಡಿಸಲು, ಶೀಘ್ರವಾಗಿ ನೀತಿಯನ್ನು ಘೋಷಿಸಲು ಸರ್ಕಾರಕ್ಕೆ ನಿರ್ದಿಷ್ಟ ಸಲಹೆಗಳು ಈ ಕೆಳಕಂಡಂತಿವೆ.

1. ಅಸ್ತಿತ್ವದಲ್ಲಿರುವ ಸಾರ್ವಜನಿಕ ವಲಯದ ಸಂಸ್ಥೆಗಳು ಮತ್ತು ರಾಜ್ಯ ಸರ್ಕಾರಿ ಸ್ವಾಮ್ಯದ ಉದ್ಯಮಗಳನ್ನು ಪುನಶ್ಚೇತನಗೊಳಿಸುವುದು ಮತ್ತು ಲಸಿಕೆಗಳ ಉತ್ಪಾದನೆಯನ್ನು ಹೆಚ್ಚಿಸಲು ಸಹಾಯ ಮಾಡುವುದು.
2. ಚೆಂಗಲಪಟ್ಟುವಿನಲ್ಲಿರುವ ಸಮಗ್ರ ಲಸಿಕೆ ಸಂಕೀರ್ಣದ ಬಳಕೆಯನ್ನು – ರಾಜ್ಯ ಸರ್ಕಾರ, ಸಾರ್ವಜನಿಕ ವಲಯದ ಸಂಸ್ಥೆಗಳು ಮತ್ತು ರಾಜ್ಯ ಸರ್ಕಾರಿ ಸ್ವಾಮ್ಯದ ಉದ್ಯಮಗಳಿಗೆ ಈ ಸಂಕೀರ್ಣದಲ್ಲಿರುವ ಸೌಲಭ್ಯವನ್ನು ಬಳಸಿಕೊಂಡು ಕೋವಿಡ್ ಲಸಿಕೆಗಳ ಉತ್ಪಾದನೆಗೆ ಅವಕಾಶ ಕಲ್ಪಿಸುವ ಸ್ಪಷ್ಟ ಕರಾರಿನೊಂದಿಗೆ – ತಮಿಳುನಾಡು ಸರ್ಕಾರಕ್ಕೆ ಹಸ್ತಾಂತರಿಸುವುದು
3. ಕೋವಿಡ್ –19 ಲಸಿಕೆಗಳ ಉತ್ಪಾದನೆಯಲ್ಲಿ ಆಸಕ್ತರನ್ನು ಉತ್ತೇಜಿಸಲು ಅಗತ್ಯವಿರುವೆಡೆಯಲ್ಲಿ ಕಡ್ಡಾಯ ಪರವಾನಿಗೆ ನೀಡುವುದು. ಅಥವಾ ಸೂಕ್ತ ಕಾನೂನನ್ನು ಮಾಡುವುದು
4. ಸಾರ್ವಜನಿಕ ವಲಯದ ಘಟಕಗಳು, ಸರ್ಕಾರಿ ಸ್ವಾಮ್ಯದ ಉದ್ಯಮಗಳು ಮತ್ತು ಇತರ ಘಟಕಗಳಿಗೆ ದೇಶೀಯ ಬಳಕೆಗಾಗಿ ಲಸಿಕೆಗಳನ್ನು ಉತ್ಪಾದಿಸಲು ಸಮರ್ಥಗೊಳಿಸಲು ಭಾರತ್ ಬಯೋಟೆಕ್ ನಿಂದ ಸಹಕಾರ ಮತ್ತು ತಂತ್ರಜ್ಞಾನ ವರ್ಗಾವಣೆಯನ್ನು ಖಚಿತಗೊಳಿಸಲು ಸಾಂಪ್ರದಾಯಿಕವಾಗಿ ಬಳಕೆಯಲ್ಲಿರುವ ಭಾರತ ಸರ್ಕಾರ ಮತ್ತು ಐ.ಸಿ.ಎಂ.ಆರ್.ಗೆ ಲಭ್ಯವಿರುವ ಮಾರ್ಚ್–ಇನ್–ರೈಟ್ಸ್ ಉಪಯೋಗಿಸುವುದು.
5. ಸ್ಪುಟ್ನಿಕ್–ವಿ ತಯಾರಿಕೆಗೆ ಸಿದ್ಧವಾಗುತ್ತಿರುವ ಕಂಪನಿಗಳಿಗೆ ಉತ್ಪಾದನೆ ವಿಸ್ತರಿಸಲು ಅಗತ್ಯಬಿದ್ದರೆ ಸಹಾಯ ಮಾಡುವುದು.
6. ವಿಶೇಷವಾಗಿ (ವಿಶ್ವಸಂಸ್ಥೆಯ ಯೋಜನೆಯಾದ) ಕೋವ್ಯಾಕ್ಸ್ ಗೆ ರಫ್ತು ಮತ್ತು ಗೃಹ ಬಳಕೆಯೆರಡಕ್ಕೂ ಸೂಕ್ತ ಸಾರ್ವಜನಿಕ ಮತ್ತು ಖಾಸಗಿ ವಲಯದ ಸಂಸ್ಥೆಗಳೊಂದಿಗೆ ಜಂಟಿ ಉದ್ಯಮ ಅಥವಾ ಇತರೆ ಸಹಯೋಗಗಳ ಮೂಲಕ ಭಾರತದಲ್ಲಿ ಉತ್ಪಾದನೆಯನ್ನು ವಿಸ್ತರಿಸಲು ಎಸ್..ಐ.ಐ., ಆಸ್ಟ್ರಾ–ಝೆನೆಕ ಮತ್ತು ನೊವವ್ಯಾಕ್ಸ್ ಗಳನ್ನು ಒಪ್ಪಿಸುವುದು.
7. ಸಂಶೋಧನಾ ಪ್ರಯೋಗಾಲಯಗಳು, ಸಾರ್ವಜನಿಕ ವಲಯ ಮತ್ತು ಖಾಸಗಿ ವಲಯ ಸಂಸ್ಥೆಗಳಲ್ಲಿ ಅನೇಕ ಲಸಿಕೆಗಳ ಅಭಿವೃದ್ಧಿ ಮತ್ತು ಹೊಸ ಲಸಿಕೆ ಅಭಿವೃದ್ಧಿ ತಂತ್ರಗಳ ಮೇಲಿನ ಸಂಶೋಧನೆಯನ್ನು ಬಲಗೊಳಿಸುವುದು ಮತ್ತು ಉತ್ತೇಜಿಸುವುದು. ಜೆನೋಮಿಕ್ ಕಣ್ಗಾವಲನ್ನು ಗಮನಾರ್ಹವಾಗಿ ಹೆಚ್ಚಿಸುವುದು ಮತ್ತು ಸೋಂಕುಶಾಸ್ತ್ರ ಅಧ್ಯಯನ ಹಾಗು ವೈರಾಣು–ವಿರುದ್ಧ ಪರಿಣಾಮಕಾರಿತನ ಹೆಚ್ಚಿಸುವುದರ ಜೊತೆಗೆ ಜೋಡಿಸುವುದು. ಅದರಿಂದಾಗಿ, ವಿಶೇಷವಾಗಿ ಹೊರಹೊಮ್ಮುತ್ತಿರುವ ರೂಪಾಂತರಗಳನ್ನು ಮತ್ತು ಮಕ್ಕಳಂತಹ ಭಿನ್ನ ಜನಸಂಖ್ಯಾ ವಿಭಾಗಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಅಗತ್ಯವಿರುವ, ಉತ್ಪಾದಕರಲ್ಲಿ ಸಹಯೋಗಾತ್ಮಕ ಮಾರ್ಪಾಡುಗಳನ್ನು ಬಲಗೊಳಿಸುವ ಮೂಲಕ, ರೂಪಾಂತರಗಳ ವಿರುದ್ಧ ಪರಿಣಾಮಕಾರಿತನಕ್ಕಾಗಿ ಲಸಿಕೆಗಳನ್ನು ನಿರಂತರವಾಗಿ ಪರೀಕ್ಷೆಗೊಳಪಡಿಸಬಹುದು.

ಸಮಾಜವಾದ ಮಾತ್ರವೇ ಮೋದಿಯನ್ನು ಸೋಲಿಸಬಲ್ಲದು



ಚಿತ್ರ ಕೃಪೆ: ಫಿನಾನ್ಷಿಯಲ್ ಟೈಮ್ಸ್

ಸಮಾಜವಾದದ ಪರಿಕಲ್ಪನೆಯನ್ನು ಒಂದು ಹಳಸಲು ನುಡಿಯ ಮಟ್ಟಕ್ಕೆ ಇಳಿಸಲಾಗಿದೆ. ಆದಾಗ್ಯೂ, ಈ ಸಮಾಜವಾದವು, ಧರ್ಮನಿರಪೇಕ್ಷತೆ (ಜಾತ್ಯತೀತತೆ)ಯ ಪರಿಕಲ್ಪನೆಯು ಒಳಗಾದ ಮಟ್ಟದ ನಿರ್ದಯ ಅಪಹಾಸ್ಯಕ್ಕೆ ಒಳಗಾಗಲಿಲ್ಲ. ಹಾಗಾದಿರಲು ಕಾರಣವೆಂದರೆ, ಸಮಾಜವಾದವನ್ನು ನಂಬದಿರುವಂತೆ ಮಾಡಲು ಅಥವಾ ಸಮಾಜವಾದದ ಹೆಸರಿಗೆ ಕಳಂಕ ಹಚ್ಚಲು ಬಿಜೆಪಿ ಟ್ರೋಲ್ ಸೇನೆ ಮಾಡಬಹುದಾದರೂ ಏನು? ಒಂದು ಪೈಸೆಯನ್ನೂ ಖರ್ಚು ಮಾಡದೆ ಚಿಕಿತ್ಸೆ ಒದಗಿಸುವ ಉನ್ನತ ದರ್ಜೆಯ ಸಾರ್ವಜನಿಕ ಆಸ್ಪತ್ರೆಗಳನ್ನು ಅಣಕಿಸುವ ಚಿತ್ರಗಳನ್ನು ಕಳುಹಿಸುತ್ತಾರಾ? ಖಾಸಗಿ ವಲಯದ ಲಸಿಕೆ ಉತ್ಪಾದನೆಯ ಕೊರತೆಯೇ ಪ್ರಸ್ತುತ ಹತ್ಯಾಕಾಂಡಕ್ಕೆ ಕಾರಣವಾಗಿರುವ ಸಂದರ್ಭದಲ್ಲಿ ಲಸಿಕೆ ತಯಾರಿಸುವ ಸಾರ್ವಜನಿಕ ವಲಯದ ಘಟಕಗಳ ಬಲವರ್ಧನೆಯ ಬಗ್ಗೆ ನಗಲುಂಟೆ? ಅನೇಕ ಸಮಾಜವಾದಿ ನೀತಿಗಳಲ್ಲಿ, ಸಾರ್ವತ್ರಿಕ ಆರೋಗ್ಯ ಸೇವೆಯ ಈ ಒಂದು ನೀತಿಯ ಸುತ್ತ ವಿರೋಧಿ ರಾಜಕೀಯ ಪಕ್ಷಗಳು ನೆರೆಯಲು ಸಾಧ್ಯವಿದೆ. ಭಾರತದ ಜನರು ಹಿಂದುತ್ವ ಮತ್ತು ಅದರ ಗಡ್ಡಧಾರಿ ದ್ಯೋತಕದಿಂದ ಬೇಸತ್ತಿದ್ದಾರೆ. ಅವರಿಂದ ತಮ್ಮ ವಿಮೋಚನೆಯಯ ದಿನಕ್ಕೆ ಕಾಯುತ್ತಿದ್ದಾರೆ.

ಶುಭಂ ಶರ್ಮ ಅನು: ಕೆ.ಎಂ.ನಾಗರಾಜ್ ಕೃಪೆ: ನ್ಯೂಸ್‌ಕ್ಲಿಕ್, ಜೂನ್ 2, 2021

ಲೇಖಕರು ಕೇಂದ್ರಿಜ್ ವಿಶ್ವವಿದ್ಯಾಲಯದ ಜಾಗತಿಕ ಇತಿಹಾಸ ವಿಭಾಗದಲ್ಲಿ ರಿಸರ್ಚ್ ಸ್ಕಾಲರ್ ಆಗಿದ್ದಾರೆ.

ಕೊವಿಡ್–19 ಬಿಕ್ಕಟ್ಟಿನ ನಿರ್ವಹಣೆಯಲ್ಲಿ ಸಂಪೂರ್ಣವಾಗಿ ವಿಫಲವಾಗಿರುವ ನರೇಂದ್ರ ಮೋದಿ ಸರ್ಕಾರದ ನಿರಾಶೆಗಳ ಪಯಣವು ಮುಂದುವರೆದಿದೆ. ಐದು ರಾಜ್ಯಗಳಲ್ಲಿ ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಗೆ ಭಾರೀ ಮುಖಭಂಗವಾಗಿದೆ. ಶಕ್ತಿಶಾಲಿಯಾದದ್ದೆಂದು ಹೇಳಲಾದ ಕೋಮು ರಥದ ಚಕ್ರಗಳು ಪಶ್ಚಿಮ ಬಂಗಾಳದಲ್ಲಿ ಕಳಚಿ ಬಿದ್ದಿವೆ. ಶಬರಿಮಲೈ ದೇವಾಲಯ ಪ್ರವೇಶ ಸಂಬಂಧಿಸಿ ಕೋಮು ವಿಷ ಹರಡುವ ಪ್ರಯತ್ನಗಳು ಕೇರಳದಲ್ಲಿ ಖಾತೆ ಮುಚ್ಚುವಲ್ಲಿ ಪರಿಣಮಿಸಿವೆ. ತಮಿಳುನಾಡಿನಲ್ಲಿ ಅದ್ದೂರಿಯಾಗಿ ನಿರ್ಮಿಸಿದ ರಾಜಕೀಯ ಸಿನೆಮಾ ತೋಪಾಗಿದೆ. ಅಸ್ಸಾಂ ರಾಜ್ಯದ ಫಲಿತಾಂಶಗಳು ಈ ಪ್ರವೃತ್ತಿಯಿಂದ ಭಿನ್ನವಾಗಿವೆ. ಅಸ್ಸಾಂನಲ್ಲಿ ಕಾಂಗ್ರೆಸ್ ಪಕ್ಷವು ರೈತ ನಾಯಕ ಅಖಿಲ್ ಗೊಗೊಯ್ ಮತ್ತು ಇತರ ಕೆಲವು ಪ್ರಗತಿಪರ ಮತ್ತು ಸಾಮಾಜಿಕ ಶಕ್ತಿಗಳೊಂದಿಗೆ ಚುನಾವಣಾ ಮೈತ್ರಿಯನ್ನು ವಿಸ್ತರಿಸಲು ವಿಫಲವಾದ ಕಾರಣದಿಂದಾಗಿ ಬಿಜೆಪಿಗೆ ಗೆಲ್ಲುವ ಅವಕಾಶ ದೊರಕಿದೆ. ಒಟ್ಟಾರೆಯಾಗಿ ಹೇಳುವುದಾದರೆ, ಒಂದು ಜಾತ್ಯತೀತ ಮತ್ತು ಪ್ರಗತಿಪರ ಮೈತ್ರಿಕೂಟವು ಮೋದಿ ನೇತೃತ್ವದ ಬಿಜೆಪಿಯನ್ನು ಚುನಾವಣಾ ಕಣದಲ್ಲಿ ಸೋಲಿಸಬಹುದು ಎಂಬುದು ಸ್ಪಷ್ಟವಾಗುತ್ತದೆ. ಈಗ, 31 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಪೈಕಿ 14 ರಲ್ಲಿ ಬಿಜೆಪಿಯೇತರ ಸರ್ಕಾರಗಳಿವೆ.

ಈ ಚುನಾವಣಾ ಪರಿಣಾಮಗಳ ವಿಶ್ಲೇಷಣೆಯನ್ನು ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿಯವರು ಇತ್ತೀಚೆಗೆ ಬಹಳ ನಿಖರವಾಗಿ ಮತ್ತು ಬಹಳ ಸಂಕ್ಷಿಪ್ತವಾಗಿ ಒಂದೇ ಮಾತಿನಲ್ಲಿ "ಜನರು ಒಂದು ಜಾತ್ಯತೀತ ಸರ್ಕಾರವನ್ನು ಬಯಸುತ್ತಾರೆ– ಇದು ಗೋಡೆಯ ಮೇಕಿನ ಬರಹ" ಎಂದು ಹೇಳಿದ್ದಾರೆ. ಅವರು ಹೇಳಿರದ ಮತ್ತು ಒತ್ತುಕೊಟ್ಟು ಹೇಳಬಹುದಾದ ಮಾತೆಂದರೆ, ಭಾರತದ ಜನರು ಒಂದು ಸಮಾಜವಾದಿ ಸರ್ಕಾರವನ್ನು ಬಯಸುತ್ತಾರೆ ಎಂಬುದು.

ಇಂದಿರಾ ಗಾಂಧಿ ಅವರನ್ನು ಅಧಿಕಾರದಿಂದ ಕೆಳಗಿಳಿಸುವ ತಂತ್ರದ ಭಾಗವಾಗಿ, ಒಂದು ಗೊತ್ತು ಗುರಿ ಇಲ್ಲದ ಸಮಾಜವಾದದ ಬ್ಯಾನರ್ ಅಡಿಯಲ್ಲಿ ಕೆಲವು ವಿರೋಧ ಪಕ್ಷಗಳು ಒಗ್ಗೂಡಿದ ಸನ್ನಿವೇಶದಲ್ಲಿ, ವಿರೋಧ ಪಕ್ಷಗಳನ್ನು ನಿರಾಯುಧರನ್ನಾಗಿಸುವ ಕಪಟೋಪಾಯದ ಭಾಗವಾಗಿ ದಿವಂಗತ ಪ್ರಧಾನಿ ಇಂದಿರಾ ಗಾಂಧಿ ಅವರು 1976ರಲ್ಲಿ "ಸಮಾಜವಾದಿ" ಎಂಬ ಪದವನ್ನು ಭಾರತದ ಸಂವಿಧಾನಕ್ಕೆ ಸೇರಿಸಿದರು. ಅಂದಿನಿಂದ, ಇಂದಿನವರೆಗೆ ಭಾರತದ ಬಡವರಿಗೆ ಯಾವುದೇ ಪ್ರಯೋಜನವನ್ನೂ ತಂದು ಕೊಡದ ಸಮಾಜವಾದದ ಪರಿಕಲ್ಪನೆಯನ್ನು ಒಂದು ಹಳಸಲು ನುಡಿಯ ಮಟ್ಟಕ್ಕೆ ಇಳಿಸಲಾಗಿದೆ. ಆದಾಗ್ಯೂ, ಈ ಸಮಾಜವಾದವು, ಧರ್ಮನಿರಪೇಕ್ಷತೆ (ಜಾತ್ಯತೀತತೆ)ಯ ಪರಿಕಲ್ಪನೆಯು ಒಳಗಾದ ಮಟ್ಟದ ನಿರ್ದಯ ಅಪಹಾಸ್ಯಕ್ಕೆ ಒಳಗಾಗಲಿಲ್ಲ. ಹಾಗಾದಿರಲು ಕಾರಣವೇನು ಎಂಬ ಪ್ರಶ್ನೆ ಏಳುತ್ತದೆ. ಕಾರಣವೆಂದರೆ, ಸಮಾಜವಾದವು ದುಡಿಯುವ ಜನರ ಮತ್ತು ಮಧ್ಯಮ ವರ್ಗಗಳ ಸ್ಥಿತಿ–ಗತಿಗಳನ್ನು ಉತ್ತಮಗೊಳಿಸುವ ಸಾಮರ್ಥ್ಯವನ್ನು ಹೊಂದಿದೆ.

ಬಿಜೆಪಿ ಕೂಡ ತಾನು ಸ್ಥಾಪನೆಗೊಂಡ ಸಮಯದಲ್ಲಿ ಒಂದು ಕೆಲಸಕ್ಕೆ ಬಾರದ ರೀತಿಯ ಗಾಂಧಿ–ಸಮಾಜವಾದದ ಪರಿಕಲ್ಪನೆಯನ್ನು ತನ್ನ ಪಕ್ಷದ ಸಂವಿಧಾನದಲ್ಲಿ ಸೇರಿಸಿಕೊಂಡಿತ್ತು. ತಳ ಸಮುದಾಯಗಳ ಚಳುವಳಿಗಳ ಒತ್ತಡದಿಂದಾಗಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಒದಗಿಸುವ ಮಂಡಲ್ ಆಯೋಗದ ವರದಿಯ ಅನುಷ್ಠಾನದ ನಂತರ ಬಿಜೆಪಿಯು ಹಿಂಸಾತ್ಮಕ ಹಿಂದುತ್ವವನ್ನು ತನ್ನ ಸಿದ್ಧಾಂತವಾಗಿ ಅಳವಡಿಸಿಕೊಂಡಿತು. ಬಿಜೆಪಿಯ ಒಲವುಳ್ಳ ಕಾರ್ಮಿಕರು ಮತ್ತು ರೈತರು ಈಗಲೂ "ಅತ್ಮನಿರ್ಭರತಾ"ದ ಅಡಿಯಲ್ಲಿ ಸದ್ದಿಲ್ಲದ ಸಮಾಜವಾದದ ರೂಪದ ಬಗ್ಗೆ ಹೆಮ್ಮೆಪಡುತ್ತಾರೆ. ಅದೇನೇ ಇರಲಿ, ಇತರ ಪಕ್ಷಗಳಿಗಿಂತ ಬಿಜೆಪಿ ಹೊಂದಿರುವ ಒಂದು ದೊಡ್ಡ ಅನುಕೂಲವೆಂದರೆ, ಅದರ ಸಾಮಾಜಿಕ ಮಾಧ್ಯಮ (ಅಪ)ನಿರ್ವಹಣೆ. ವಾಟ್ಸಪ್, ಟ್ವಿಟರ್ ಅಥವಾ ಫೇಸ್‌ಬುಕ್ ಮಾಧ್ಯಮಗಳ ಮೂಲಕ ಒಂದು ಹಸುವಿನ ಹತ್ಯೆಯ ಅಥವಾ ಬೀದಿ ಬದಿ ವ್ಯಾಪಾರದ ಒಬ್ಬ ಮುಸ್ಲಿಂ ಉಗುಳಿದ ತರಕಾರಿ ಮಾರಿದ ದೃಷ್ಯ ಅಥವಾ ವಿಶ್ವದ ಯಾವುದೇ ಭಾಗದಲ್ಲಿ ನಡೆದಿದೆ ಎಂದು ಹೇಳಲಾದ "ಗುಂಪು ಹಿಂಸಾಚಾರ"ದ ವಿಡಿಯೊ ಸಂದೇಶಗಳನ್ನು ಕ್ಷಣಾರ್ಧದಲ್ಲಿ ತಲುಪಿಸುವ ಫಾರ್ವರ್ಡ್‌ಗಳು, ಅಪಹಾಸ್ಯಕ್ಕೊಳಗಾದ ಸಾಂವಿಧಾನಿಕ ಮೌಲ್ಯವಾದ ಜಾತ್ಯತೀತತೆಯನ್ನು ಬೀದಿಯಲ್ಲಿ ಅಟ್ಟಾಡಿಸಿ ಕೊಲ್ಲುವ ಸಾಮರ್ಥ್ಯ ಹೊಂದಿವೆ.

ಆದರೂ, ಭಾರತದಲ್ಲಿ ಸಮಾಜವಾದವನ್ನು ಕೊನೆಗಾಣಿಸುವುದು ಅಸಾಧ್ಯವೇ ಸರಿ. ಸಮಾಜವಾದವನ್ನು ನಂಬದಿರುವಂತೆ ಮಾಡಲು ಅಥವಾ ಸಮಾಜವಾದದ ಹೆಸರಿಗೆ ಕಳಂಕ ಹಚ್ಚಲು ಬಿಜೆಪಿ ಟ್ರೋಲ್ ಸೇನೆ ಮಾಡಬಹುದಾದರೂ ಏನು? ಒಂದು ಪೈಸೆಯನ್ನೂ ಖರ್ಚು ಮಾಡದೆ ಚಿಕಿತ್ಸೆ ಒದಗಿಸುವ ಉನ್ನತ ದರ್ಜೆಯ ಸಾರ್ವಜನಿಕ ಆಸ್ಪತ್ರೆಗಳನ್ನು ಅಣಕಿಸುವ ಚಿತ್ರಗಳನ್ನು ಕಳುಹಿಸುತ್ತಾರಾ? ಎಲ್ಲರಿಗೂ ದೊರೆಯುವ ಉಚಿತ ಶಿಕ್ಷಣ ವ್ಯವಸ್ಥೆಯ ಬಗ್ಗೆ ಅಣಕವಾಡಲಾದೀತೇ? ಖಾಸಗಿ ವಲಯದ ಲಸಿಕೆ ಉತ್ಪಾದನೆಯ ಕೊರತೆಯೇ ಪ್ರಸ್ತುತ ಹತ್ಯಾಕಾಂಡಕ್ಕೆ ಕಾರಣವಾಗಿರುವ ಸಂದರ್ಭದಲ್ಲಿ ಲಸಿಕೆ ತಯಾರಿಸುವ ಸಾರ್ವಜನಿಕ ವಲಯದ ಘಟಕಗಳ ಬಲವರ್ಧನೆಯ ಬಗ್ಗೆ ನಗಲುಂಟೆ? ವ್ಯಾಪಾರ–ವಹಿವಾಟುಗಳ ಏಕಸ್ವಾಮ್ಯದ ಅಂತ್ಯವನ್ನು ಟೀಕಿಸುವುದೇ? ಭೂ–ರಹಿತ ದಲಿತ ಕೃಷಿ ಕಾರ್ಮಿಕರಿಗೆ ಕೃಷಿಯೋಗ್ಯ ಭೂಮಿ ಹಂಚುವುದನ್ನು ವಿರೋಧಿಸುವುದೇ? ಅಥವಾ, ಭಾರತದ ಕಾರ್ಮಿಕರು ಮತ್ತು ರೈತರ ಸ್ಥಿತಿ–ಗತಿಗಳನ್ನು ಉತ್ತಮಗೊಳಿಸುವುದನ್ನು ವಿರೋಧಿಸುತ್ತಾರಾ? ಇಂತಹ ಎಲ್ಲ ಪ್ರಯತ್ನಗಳಲ್ಲಿ ಟ್ರೋಲಿಗರು ನೆಲ ಕಚ್ಚುವುದು ಖಂಡಿತ. ಟ್ರೋಲಿಗರಲ್ಲಿ ಅನೇಕರು ನಿರುದ್ಯೋಗಿಗಳಾಗಿರುವುದರಿಂದ, ಅವರು ಬಿಡಿಗಾಸಿಗೆ ಮರುಳಾಗಿ ಸುಳ್ಳು–ದ್ವೇಷಗಳಿಂದ ಕೂಡಿದ ವಿಡಿಯೊಗಳನ್ನು ಹರಡುವ ಬದಲು, ಈ ಕೆಲವು ವಾಸ್ತವಿಕ ಪ್ರಸ್ತಾಪಗಳ ಪರವಾಗಿ ನಿಲ್ಲಬಹುದು. ಕೆಲಸದ ಹಕ್ಕು ಅಥವಾ ಉದ್ಯೋಗ ಖಾತ್ರಿ ಯೋಜನೆಯನ್ನು ಬಿಜೆಪಿ ಮತ್ತು ಮೋದಿ ಬಲುವಾಗಿ ಇಷ್ಟಪಡುವುದಿಲ್ಲ, ನಿಜ. ಆದರೆ, ಅದನ್ನು ಕೊನೆಗೊಳಿಸುವ ಪ್ರಯತ್ನದಲ್ಲಿ ವಿಫಲರಾಗಿದ್ದಾರೆ ಎಂಬುದನ್ನು ನೆನಪಿಸಿಕೊಳ್ಳಬಹುದು. ಕೊರೊನಾ ಸಾಂಕ್ರಾಮಿಕದ ಸಮಯದಲ್ಲಿ ನಿರುದ್ಯೋಗದ ಬಿಕ್ಕಟ್ಟಿನಿಂದ ಜನರು ಹೊರ ಬರಲು ಈ ಯೋಜನೆಯು ಸಹಾಯಕವಾಗಿದೆ ಮತ್ತು ಜನರ ಸಂಕಟಗಳು ಹೆಚ್ಚುತ್ತಿರುವುದರಿಂದಾಗಿ ಈ ಯೋಜನೆಯ ಅಡಿಯಲ್ಲಿ ಕೆಲಸ ಕೇಳುವವರ ಸಂಖ್ಯೆಯು ಹೆಚ್ಚುತ್ತಲೇ ಇದೆ.

ಈ ಕೆಲವು ಸಂಗತಿಗಳು ಇನ್ನೂ ಹೆಚ್ಚಿನ ರಾಜ್ಯಗಳಲ್ಲಿ ಬಿಜೆಪಿ ಸರ್ಕಾರಗಳನ್ನು ಸೋಲಿಸಲು ತೆರೆದಿಟ್ಟ ರಹಸ್ಯ ಉಪದೇಶವೂ ಆಗಿವೆ. ಹಾಗಾಗಿ, ಈ ನಿಟ್ಟಿನಲ್ಲಿ ಇಡಬೇಕಾದ ಮೊದಲ ಹೆಜ್ಜೆಯೆಂದರೆ, ಭಾರತದ ಜನರನ್ನು ಬಂಡವಾಳಶಾಹಿಯಿಂದ ಮತ್ತು ಜಿಡಿಪಿ ಬೆಳವಣಿಗೆ ದರಗಳ ನಿಗೂಢತೆಯಿಂದ ಹೊರತರುವುದು ಮತ್ತು ಬಂಡವಾಳಶಾಹಿಯು ಸೃಷ್ಟಿಸಿರುವ ಸಮಸ್ಯೆಗಳು ಮತ್ತು ಅದು ಉಂಟುಮಾಡಿರುವ ಬೃಹತ್ ಸಾಮಾಜಿಕ–ಆರ್ಥಿಕ ದುಷ್ಪರಿಣಾಮಗಳ ಬಗ್ಗೆ ಮತ್ತು ಅವುಗಳ ಪರಿಹಾರಗಳ ಬಗ್ಗೆ ಜನರನ್ನು ಎಚ್ಚರಿಸುವುದು. ಭಾರತದ ಅರ್ಥವ್ಯವಸ್ಥೆಯ ಗಾತ್ರವನ್ನು 5 ಟ್ರಿಲಿಯನ್ ಡಾಲರ್ ಮಟ್ಟಕ್ಕೆ ಕೊಂಡೊಯ್ಯುವ ಬಗ್ಗೆ ಮೋದಿ ಸರ್ಕಾರವು ಆಕಾಶದಲ್ಲಿ ತೇಲಾಡುತ್ತಿದೆ. ತನ್ನ ಆಳ್ವಿಕೆಯಲ್ಲಿ, ವಹಿವಾಟುಗಳ ಸುಗಮತೆಯಲ್ಲಿ 79 ಮೆಟ್ಟಿಲುಗಳನ್ನು ಏರಿದ ಭಾರತವು 190 ದೇಶಗಳ ಪೈಕಿ 63 ನೇ ಸ್ಥಾನದಲ್ಲಿರುವ ಬಗ್ಗೆ ಮೋದಿ ಸರ್ಕಾರ ಹೆಮ್ಮೆಪಡುತ್ತದೆ. ಆದರೆ, ಇತರ ಅಂತರರಾಷ್ಟ್ರೀಯ ಸಂಸ್ಥೆಗಳ ಶ್ರೇಯಾಂಕದ ಪ್ರಕಾರ, ಗಾಳಿಯ ಗುಣಮಟ್ಟದಲ್ಲಿ 180 ದೇಶಗಳಲ್ಲಿ 179ನೇ ಸ್ಥಾನ, ನೀರಿನ ಗುಣಮಟ್ಟದಲ್ಲಿ 122 ರಲ್ಲಿ 120ನೇ ಸ್ಥಾನ ಮತ್ತು ಜಾಗತಿಕ ಹಸಿವು ಸೂಚ್ಯಂಕದಲ್ಲಿ 107 ರಲ್ಲಿ 94ನೇ ಸ್ಥಾನಗಳಿಗೆ ಭಾರತವು ಕುಸಿದಿರುವ ಬಗ್ಗೆ ಮಾತೇ ಇಲ್ಲ. ಹಸಿವಿನ ಅಂಕಿ–ಅಂಶವು ಅತ್ಯಂತ ಆಶ್ಚರ್ಯಕರವಾಗಿದೆ. ಏಕೆಂದರೆ, ಭಾರತವು ಹೊಂದಿರುವ ಆಹಾರ ಧಾನ್ಯಗಳ ಬೃಹತ್ ಸಂಗ್ರಹವು ಕೊಳೆಯುವ ಮಟ್ಟದಲ್ಲಿದೆ.

ಈಗಿರುವ ವಿಷಮ ಪರಿಸ್ಥಿತಿಯೇ ಸಾಲದೆಂಬಂತೆ ಅದನ್ನು ಮತ್ತಷ್ಟು ಹದಗೆಡಿಸಲು ನೀತಿ ಆಯೋಗವು 2013ರ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯನ್ನು ಪರಿಷ್ಕರಿಸುವಂತೆ ಇತ್ತೀಚೆಗೆ ಶಿಫಾರಸು ಮಾಡಿದೆ. ಈ ತಿದ್ದುಪಡಿಯ ಉದ್ದೇಶವೆಂದರೆ, ಗ್ರಾಮೀಣ ಪ್ರದೇಶಗಳಲ್ಲಿ ಪಡಿತರದ ವ್ಯಾಪ್ತಿಯನ್ನು ಶೇ.75ರಿಂದ ಶೇ.60ಕ್ಕೆ ಮತ್ತು ನಗರ ಪ್ರದೇಶಗಳಲ್ಲಿ ಶೇ.50ರಿಂದ ಶೇ.40ಕ್ಕೆ ಕಡಿತಗೊಳಿಸುವ ಮೂಲಕ ಆಹಾರ ಸಬ್ಸಿಡಿಗಾಗಿ ಮಾಡುವ 47,229 ಕೋಟಿ ರೂಗಳ ವಾರ್ಷಿಕ ವೆಚ್ಚದ ಉಳಿತಾಯವೇ. ಉದ್ದೇಶಿತ ಕೃಷಿ ಕಾನೂನುಗಳು ಭಾರತದಲ್ಲಿ ಹಸಿವೆಯ ಸಮಸ್ಯೆಯನ್ನು ಉಲ್ಬಣಗೊಳಿಸುತ್ತವೆ. ಹಾಗಾಗಿ, ಈ ತಿದ್ದುಪಡಿಯು ಪ್ರಸ್ತಾಪಿತ ರೂಪದಲ್ಲಿ ಜಾರಿಗೆ ಬಂದರೆ, ಹಸಿವೆಯ ಬಿಕ್ಕಟ್ಟು ಮತ್ತಷ್ಟು ಉಲ್ಬಣಗೊಳ್ಳುತ್ತದೆ. ಏಕೆಂದರೆ, ದೊಡ್ಡ ದೊಡ್ಡ ಬಂಡವಾಳಗಾರರು ಆಹಾರ ಧಾನ್ಯಗಳನ್ನು ಬೃಹತ್ ಪ್ರಮಾಣದ ಖಾಸಗಿ ಸಿಲೋ(ಹಗೇವು)ಗಳಲ್ಲಿ ಸಂಗ್ರಹಿಸುತ್ತಾರೆ. ಪರಿಣಾಮವಾಗಿ ಆಹಾರ ಧಾನ್ಯಗಳ ಬೆಲೆಗಳು ಏರುತ್ತವೆ.

ತಮ್ಮ ಅನುಯಾಯಿಗಳಿಗೆ ಮತ್ತು ಸಾಮಾನ್ಯವಾಗಿ ಹಿಂದೂಗಳಿಗೆ ತಾವು ಹಿಂದೂ ಹೃದಯ ಸಾಮ್ರಾಟರೆಂದು ಮೋದಿ ತಮ್ಮನ್ನು ತಾವೇ ಬಿಂಬಿಸಿಕೊಳ್ಳುತ್ತಾರೆ. ಅದಕ್ಕಾಗಿ ಅವರು ಮಾಡದ ಪ್ರಯತ್ನವೇ ಇಲ್ಲ. ಗಣರಾಜ್ಯ ದಿನ ಮತ್ತು ಸ್ವಾತಂತ್ರ್ಯ ದಿನದ ಪ್ರದರ್ಶನಗಳಲ್ಲಿ ಅವರು ಮಾಡಿಕೊಳ್ಳುವ ಅಲಂಕಾರ, ವೇಷ–ಭೂಷಣ, ಮತ್ತು ತಲೆಗೆ ಸುತ್ತಿಕೊಳ್ಳುವ ಉದ್ದ ಬಾಲದ ಪಗ್ಡಿಗಳನ್ನು (ರುಮಾಲುಗಳು) ಗಮನಿಸಿ. ವಿಚಿತ್ರವೆಂದರೆ, ಈ ಸಾಮ್ರಾಟರು ಬಾದಶಹರಿಗೆ, ಅಂದರೆ, ದೊಡ್ಡ ಬಂಡವಾಳಗಾರರಿಗೆ ಋಣಿ ಎಂಬುದನ್ನು ಫೆಬ್ರವರಿ 2021 ರ ಬಜೆಟ್ ಅಧಿವೇಶನದಲ್ಲಿ ಅವರು ಸ್ಫಟಿಕದಷ್ಟು ಸ್ಪಷ್ಟಗೊಳಿಸಿದ್ದಾರೆ.

ಮೊಬೈಲ್ ಫೋನ್‌ಗಳ ಉತ್ಪಾದನೆ, ಲಸಿಕೆಗಳ ಉತ್ಪಾದನೆ ಮತ್ತು ಔಷಧಗಳ ತಯಾರಿಕೆಯಲ್ಲಿ ಸಾಧಿಸಿದ ಮೂರು ಪ್ರಮುಖ ಯಶಸ್ಸನ್ನು ಉಲ್ಲೇಖಿಸುವ ಮೂಲಕ ಮೋದಿ "ಸಂಪತ್ತಿನ ಸೃಷ್ಟಿಕರ್ತರನ್ನು" ಹಾಡಿ ಹೊಗಳಿದರು. ವಿಪರ್ಯಾಸವೆಂದರೆ, ಐದು ವರ್ಷಗಳಲ್ಲಿ ಭಾರತದಲ್ಲಿ ಹತ್ತು ಪಟ್ಟು ಹೆಚ್ಚಳವಾದ (2014–15 ರಲ್ಲಿ 2.9 ಬಿಲಿಯನ್‌ನಿಂದ 2019–20 ರಲ್ಲಿ 30 ಬಿಲಿಯನ್‌ಗೆ) ಮೊಬೈಲ್ ಫೋನ್‌ಗಳ ಉತ್ಪಾದನೆಯು ಸಾಧ್ಯವಾದದ್ದು ಚೀನಾದಿಂದ ಆಮದು ಮಾಡಿಕೊಂಡ ಬಿಡಿ–ಭಾಗಗಳಿಂದಲೇ. ದೇಶದಲ್ಲಿ ಉತ್ಪಾದನೆಯಾದ ಶೇ.85ಕ್ಕಿಂತ ಹೆಚ್ಚಿನ ಭಾಗದ ಮೊಬೈಲ್ ಫೋನ್‌ಗಳನ್ನು ಚೀನಾ ಮೂಲದ ಮೊಬೈಲ್ ಕಂಪನಿಗಳಾದ ಒಪ್ಪೋ, ವಿವೋ, ಶಿಯೋಮಿ ಇತ್ಯಾದಿಗಳೇ ತಯಾರಿಸಿವೆ.

ಎರಡನೆಯದಾಗಿ, ಯಾವ ಖಾಸಗಿ ವಲಯದ ವೈಭವವನ್ನು ಮೋದಿಯವರು ಹಾಡಿ ಹೊಗಳಿ ಅಟ್ಟಕ್ಕೇರಿಸಿದರೋ ಅದೇ ಖಾಸಗಿ ವಲಯದ ಲಸಿಕೆ ಉತ್ಪಾದಕರು ಎರಡನೇ ಅಲೆಯಿಂದ ಉಂಟಾದ ಹತ್ಯಾಕಾಂಡದಿಂದ ಭಾರತೀಯರನ್ನು ರಕ್ಷಿಸುವಲ್ಲಿ ವಿಫಲರಾದರು. ಹಣದ ಕೊರತೆಯಿಂದ ಒದ್ದಾಡುತ್ತಿದ್ದ ಈ ಖಾಸಗಿ ಕಂಪೆನಿಗಳು ಲಸಿಕೆ ಉತ್ಪಾದನೆಯನ್ನು ಹೆಚ್ಚಿಸಲು ಹಣಕ್ಕಾಗಿ ಕೈಚಾಚಿದಾಗ ಅವರ ಕೈ ಹಿಡಿದದ್ದು ಬಂಡವಾಳಶಾಹಿ ಮಾರುಕಟ್ಟೆಯಲ್ಲ, ತೆರಿಗೆದಾರರ ಹಣ. ಸರ್ಕಾರದ ಹಣ ಸಹಾಯದಿಂದಾಗಿ ಅವರು ತಮ್ಮ ಕಸುಬನ್ನು ಮುಂದುವರಿಸುವಂತಾಯಿತು.

ಖಾಸಗಿ ವಲಯದ ಬಗ್ಗೆ ಮೋದಿಯವರು ಹೊಂದಿರುವ ವ್ಯಾಮೋಹದಿಂದಾಗಿ ಭಾರತವು ಲಸಿಕೆಗಳ ಭಾರಿ ಪ್ರಮಾಣದ ಕೊರತೆಯನ್ನು ಎದುರಿಸುವಂತಾಗಿದೆ. ಎಲ್ಲಾ ಆಫ್ರಿಕನ್ ದೇಶಗಳೂ ಆಫ್ರಿಕನ್ ಯೂನಿಯನ್ ಟ್ರಸ್ಟ್‌ನ ಅಡಿಯಲ್ಲಿ ಒಗ್ಗೂಡಿ ಜಾನ್ಸನ್ ಮತ್ತು ಜಾನ್ಸನ್ ಕಂಪೆನಿಯಿಂದ 220 ಮಿಲಿಯನ್ ಡೋಸ್ ಲಸಿಕೆಗಳನ್ನು ಪಡೆಯಲು ಮಾತುಕತೆ ನಡೆಸಿರುವಾಗ ಮತ್ತು 27 ಯುರೋಪಿಯನ್ ದೇಶಗಳ ಪರವಾಗಿ ಯುರೋಪಿಯನ್ ಒಕ್ಕೂಟವು ಮಾತುಕತೆ ನಡೆಸಿರುವಾಗ, ಲಸಿಕೆಗಳನ್ನು ಸಂಗ್ರಹಿಸಿಕೊಳ್ಳಲು ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾತುಕತೆ ನಡೆಸುವ ಮನಸ್ಸು ಮೋದಿಯವರಿಗಿಲ್ಲ. ಅವರ ಈ ಕಾರ್ಯತಂತ್ರವು ಫಲಿಸದು.

ಭಾರತದ ಔಷಧ ವಲಯದ ಯಶಸ್ಸು, ಬಹುರಾಷ್ಟ್ರೀಯ ಔಷಧ ಕಂಪೆನಿಗಳ ಪ್ರೇಯಸಿಯಾದ ಟ್ರಿಪ್ಸ್–ಅನುಮೋದನೆಯ ಉತ್ಪನ್ನ ಪೇಟೆಂಟ್‌ಗಳ (product patent) ಮೂಲಕ ಸಾಧಿಸಿದ್ದಲ್ಲ, ಬದಲಿಗೆ ಔಷದ ತಯಾರಿಸುವ ಕಾರ್ಯವಿಧಾನ ಪೇಟೆಂಟ್ (process patent) ಮೂಲಕ ಗಳಿಸಿದ್ದಾಗಿದೆ. ಬೇರೆ ದೇಶಗಳಲ್ಲಿ, ಮುಖ್ಯವಾಗಿ ಅಮೇರಿಕಾದಲ್ಲಿ, ಸಾಮಾನ್ಯ(ಜೆನೆರಿಕ್) ಮತ್ತು ಜೀವ ಉಳಿಸುವ ಔಷಧಗಳ ಉತ್ಪಾದನೆಯನ್ನು ಏಕಸ್ವಾಮ್ಯಗೊಳಿಸುವ ಮೂಲಕ ಬೆಲೆಗಳನ್ನು ಹೆಚ್ಚಿಸಿದ ರೀತಿಯಲ್ಲಿ ಭಾರತದ ಔಷಧ ದೈತ್ಯರಿಗೆ ಸುಲಿಗೆ ಬೆಲೆ ನಿಗದಿಪಡಿಸುವುದು ಸಾಧ್ಯವಾಗಿಲ್ಲ. ಬೇರೆ ದೇಶಗಳ ಪರಿಸ್ಥಿತಿಗೆ ವ್ಯತಿರಿಕ್ತವಾಗಿ, ಈ ಕಾರ್ಯವಿಧಾನ ಪೇಟೆಂಟ್ (process patent) ನಿಂದಾಗಿ ಭಾರತದ ಔಷಧ

ಪುಟ 14 ನೋಡಿ

ಪುಟ 11 ರಿಂದ

ಹೆಚ್ಚಿದ ಕಾರ್ಮಿಕ ವರ್ಗದ ಪ್ರತಿರೋಧ 1985-89



ಮುಷ್ಕರ ಮಾಡಿದರು.

ಕೈಗಾರಿಕಾ ವಿವಾದ ಕಾಯ್ದೆ ಮತ್ತು ಟ್ರೇಡ್ ಯೂನಿಯನ್ ಕಾಯ್ದೆಗಳ ಪ್ರಸ್ತಾವಿತ ಪ್ರತಿಗಾಮಿ ತಿದ್ದುಪಡಿಗಳ ವಿರುದ್ದ ಮತ್ತು ಹೊಸ ಬೆಲೆ ಸೂಚ್ಯಂಕ ಸರಣಿಯ ಪರಿಚಯದ ವಿರುದ್ಧ ದೇಶಾದ್ಯಂತ 1987 ರ ಆಗಸ್ಟ್ 3 ರಂದು ಅಖಿಲ ಭಾರತ ಸತ್ಯಾಗ್ರಹ ದಿನ, ಜೈಲ್-ಭರೋ ಆಚರಿಸಲಾಯಿತು.

1987 ರ ಆಗಸ್ಟ್ 4 ರಿಂದ ನೂರ ಐವತ್ತು ವಿಶ್ವವಿದ್ಯಾಲಯುಗಳ ಸುಮಾರು ಎರಡು ಲಕ್ಷ ಮೂವತ್ತು ಸಾವಿರ ಶಿಕ್ಷಕರು ಅನಿರ್ದಿಷ್ಟ ಮುಷ್ಕರವನ್ನು ಪ್ರಾರಂಭಿಸಿದರು. 4 ಸೆಪ್ಟೆಂಬರ್ 1987 ರಂದು ಸರ್ಕಾರದೊಂದಿಗೆ ಒಪ್ಪಂದಕ್ಕೆ ಬಂದ ನಂತರವೇ ಮುಷ್ಕರವನ್ನು ಹಿಂತೆಗೆದುಕೊಳ್ಳಲಾಯಿತು.

ಭಾರತ ಸರ್ಕಾರದ ಆದಾಯ ತೆರಿಗೆ ಇಲಾಖೆಯ ಸುಮಾರು 53,000 ಉದ್ಯೋಗಿಗಳು 1987 ರ ಡಿಸೆಂಬರ್ 15 ರಂದು ಒಂದು ದಿನದ ಮುಷ್ಕರವನ್ನುಆಚರಿಸಿದರು.

ನಾಲ್ಕನೇ ಕೇಂದ್ರ ವೇತನ ಆಯೋಗದ ಶಿಫಾರಸುಗಳು ಮತ್ತು ಅದರ ಪರಿಣಾಮ

ನಾಲ್ಕನೇ ಕೇಂದ್ರ ವೇತನ ಆಯೋಗದ ಏಪ್ರಿಲ್ 1987 ರಲ್ಲಿ ಸಲ್ಲಿಸಿದ ವರದಿ, ರಾಷ್ಟ್ರೀಯ ಆದಾಯದ ಬೆಳವಣಿಗೆ ಮತ್ತು ಕೇಂದ್ರ ಸರ್ಕಾರದ ಸಂಪನ್ಮೂಲಗಳನ್ನು ಪರಿಶೀಲಿಸಿತು ಮತ್ತು ಬೆಳವಣಿಗೆ ಗಣನೀಯವಾಗಿದೆ ಎಂದು ಅಭಿಪ್ರಾಯಪಟ್ಟಿತು.. ಆದರೆ ಅಸಮಾನತೆಯನ್ನು ತೆಗೆದುಹಾಕುವ ಮಾರ್ಗದಲ್ಲಿ ವೇತನದ ಮೇಲ್ಮುಖ ಪರಿಷ್ಕರಣೆಯನ್ನು ಅಥವಾ ಅಗತ್ಯ ಆಧಾರಿತ ಕನಿಷ್ಟವೇತನದ ತತ್ವದ ಮೇಲೆ ಪಾವತಿಗೆ ಶಿಫಾರಸು ಮಾಡಲು ಮುಂದಾಗಲಿಲ್ಲ. .

23 ಏಪ್ರಿಲ್ 1987 ರಂದು ದೆಹಲಿಯಲ್ಲಿ ನಡೆದ ರೈಲ್ವೆ ಕಾರ್ಮಿಕರ ರಾಷ್ಟ್ರೀಯ ಪ್ರಚಾರ ಸಮಿತಿಯ ಎರಡನೇ ಸಮಾವೇಶದಲ್ಲಿ, ವೇತನ ಆಯೋಗದ ಶಿಫಾರಸುಗಳ ವಿರುದ್ಧ ಪ್ರತಿಭಟನೆಯ ಧ್ವನಿ ಎತ್ತಲಾಯಿತು. ಸಂಸತ್ತಿಗೆ ಬ್ರಹತ ಮೆರವಣಿಗೆಯ ನಂತರ ಕೇಂದ್ರ ಸರ್ಕಾರಿ ನೌಕರರ ಬೃಹತ್ ಮೇಳ ದೆಹಲಿಯ ಬೋಟ್ ಕ್ಲಬ್‌ನಲ್ಲಿ ನಡೆಯಿತು.

ಅಖಿಲ ಭಾರತ ರಾಜ್ಯ ಸರ್ಕಾರಿ ನೌಕರರ ಒಕ್ಕೂಟವು ಕೇಂದ್ರ ನೌಕರರೊಂದಿಗೆ ರಾಜ್ಯ ಸರಕಾರಿ ನೌಕರರ ವೇತನದ ಸಮಾನತೆಗೆ ಒತ್ತಾಯಿಸಿ ಫೆಬ್ರವರಿ 10, 1988 ರಂದು ರ ಅಖಿಲ ಭಾರತ ಮುಷ್ಕರಕ್ಕೆ ಕರೆ ನೀಡಿತು. ಸುಮಾರು ಎಂಭತ್ತು ಲಕ್ಷ, ರಾಜ್ಯ ಸರಕಾರಿ ನೌಕರರು, ಸರ್ಕಾರಿ ಶಿಕ್ಷಕರು ಮತ್ತು ರಾಜ್ಯಗಳ ಮಂಡಳಿಗಳು ಮತ್ತು ನಿಗಮಗಳ ನೌಕರರು ಮುಷ್ಕರದಲ್ಲಿ ಭಾಗವಹಿಸಿದರು..

ಹೋರಾಟದ ಅಲೆಗಳು ಮುಂದುವರೆದವು

ಸುಮಾರು ಇಪ್ಪತ್ತು ಲಕ್ಷ ಸಾರ್ವಜನಿಕ ವಲಯದ ಕಾರ್ಮಿಕರು 1988 ರ ಮಾರ್ಚ್ 14 ರಿಂದ 1988 ರ ಮಾರ್ಚ್ 16 ರವರೆಗೆ 3 ದಿನಗಳ ಸುದೀರ್ಘ ಮುಷ್ಕರವನ್ನು, ಸಿಪಿಎಸ್‌ಟಿಯು (ಸಾರ್ವಜನಿಕ ವಲಯದ ಕಾರ್ಮಿಕ ಸಂಘಗಳ ಸಮಿತಿ) ಕರೆಯ ಮೇರೆಗೆ ನಡೆಸಿದರು. ಈ ದೇಶವ್ಯಾಪಿ ಮುಷ್ಕರದಲ್ಲಿ, ಹೈದರಾಬಾದ್. ಮದ್ರಾಸ್. ತಿರುಚಿರಪಳ್ಳಿ. ಗಾಜಿಯಾಬಾದ್, ಕಾನ್ಪುರ. ಭಿಲೈ. ರಾಂಚಿ, ಬರೌನಿ, ರೂರ್ಕೆಲಾ, ದುರ್ಗಾಪುರ. ಕಲ್ಕತ್ತಾ ಮತ್ತು ಇತರ ಸ್ಥಳಗಳಲ್ಲಿ ಸಾರ್ವಜನಿಕ ವಲಯದ ಘಟಕಗಳು ಕೆಲಸವನ್ನು ಸಂಪೂರ್ಣವಾಗಿ ನಿಲ್ಲಿಸಿದವು.

ದೇಶದ ಕಲ್ಲಿದ್ದಲು ಕಾರ್ಮಿಕರು ಮತ್ತೆ 20 ಮಾರ್ಚ್ 1988 ರಿಂದ ಮಾರ್ಚ್ 25, 1988 ರವರೆಗೆ ಆರು ದಿನಗಳ ಮುಷ್ಕರಕ್ಕೆ ಇಳಿದಾಗ, ಸುಮಾರು ಏಳು ಲಕ್ಷ ಕಾರ್ಮಿಕರು ಮುಷ್ಕರಕ್ಕೆ ಸೇರಿದರು. ಎಸ್ಮಾ ಘೋಷಣೆ ಮತ್ತು ಆರು ತಿಂಗಳ ಜೈಲು ಶಿಕ್ಷೆ ಅಥವಾ ಒಂದು ಸಾವಿರ ರೂಪಾಯಿ ದಂಡ ಅಥವಾ ಎರಡೂ ಮತ್ತು ಒಂದು ದಿನದ ಅನುಪಸ್ಥಿತಿಗೂ 8 ದಿನಗಳ ವೇತನ ಕಡಿತದ ಮತ್ತು ವಜಾಗೊಳಿಸುವ ಬೆದರಿಕೆಯ ಹೊರತಾಗಿಯೂ ಮುಷ್ಕರ ಯಶಸ್ವಿಯಾಯಿತು.

ಕಾರ್ಮಿಕ ವಿರೋಧಿ ಶಾಸನಗಳ ವಿರುದ್ಧ ಹೋರಾಟ

ಕೇಂದ್ರಸರ್ಕಾರವು ಆಸ್ಪತ್ರೆ ಮತ್ತು ಇತರ ಸಂಸ್ಥೆಗಳ ಮಸೂದೆ ಮತ್ತು ಟ್ರೇಡ್ ಯೂನಿಯನ್ ಮತ್ತು ಕೈಗಾರಿಕಾ ವಿವಾದಗಳ (ತಿದ್ದುಪಡಿ) ಮಸೂದೆ ಯನ್ನು ಮಂಡಿಸಿತು

ಆಸ್ಪತ್ರೆ ಮತ್ತು ಇತರ ಸಂಸ್ಥೆಗಳ ಮಸೂದೆಯು ಆಸ್ಪತ್ರೆಗಳು, ಶೈಕ್ಷಣಿಕ ಮತ್ತು ಸಂಶೋಧನಾ ಸಂಸ್ಥೆಗಳ, ದತ್ತಿ, ಸಾಮಾಜಿಕ ಮತ್ತು ಲೋಕೋಪಕಾರಿ ಸೇವೆಗಳಿಗೆ ಮೀಸಲಾಗಿರುವ ಸಂಸ್ಥೆಗಳ ಮತ್ತು ಖಾದಿ ಮತ್ತು ಗ್ರಾಮ ಕೈಗಾರಿಕೆಗಳ ನೌಕರರಿಂದ ಟ್ರೇಡ್ ಯೂನಿಯನ್ ಹಕ್ಕುಗಳನ್ನು ಕಸಿದುಕೊಳ್ಳುವ ಉದ್ದೇಶವನ್ನು ಹೊಂದಿತ್ತು

ಕಾರ್ಮಿಕರ ಚಾಲ್ತಿಯಲ್ಲಿದ್ದ ಅನೇಕ ಟ್ರೇಡ್ ಯೂನಿಯನ್ ಹಕ್ಕುಗಳನ್ನು ತಡೆಯುವ ಉದ್ದೇಶದಿಂದ ಎರಡನೇ ಮಸೂದೆಯನ್ನು 1947 ರ ಕೈಗಾರಿಕಾ ವಿವಾದ ಕಾಯ್ದೆ ಮತ್ತು 1926 ರ ಭಾರತ ಟ್ರೇಡ್ ಯೂನಿಯನ್ ಕಾಯ್ದೆಗೆ ತಿದ್ದುಪಡಿ ಮಾಡಲು ವಿನ್ಯಾಸಗೊಳಿಸಲಾಗಿತ್ತು

ಜುಲೈ 14, 1988 ರಂದು ದೆಹಲಿಯಲ್ಲಿ ನಡೆದ ಕಾರ್ಮಿಕ ಸಂಘಗಳ ಸಮಾವೇಶದಲ್ಲಿ. ಈ ಮಸೂದೆಗಳನ್ನು ಬಲವಾಗಿ ಖಂಡಿಸಿ, ಮಸೂದೆಗಳ ಅಂಗೀಕಾರವನ್ನು ತಡೆಗಟ್ಟಲು ದೇಶವ್ಯಾಪಿ ಮುಷ್ಕರ ಕ್ರಮಕ್ಕೆ ಸಿದ್ಧತೆ ನಡೆಸಲು ಮತ್ತು ಈ ಮಧ್ಯೆ ಸಂಸತ್ತಿನ ಮಳೆಗಾಲದ ಅಧಿವೇಶನದ ಆರಂಭಿಕ ದಿನವಾದ ಜುಲೈ 27, 1988 ರಂದು ಸಂಸತ್ತಿನ ಮುಂದೆ ರ್‍ಯಾಲಿಗಳು ಮತ್ತು ಪ್ರದರ್ಶನಗಳನ್ನು ಆಯೋಜಿಸಲು ಕಾರ್ಮಿಕ ವರ್ಗಕ್ಕೆ ಕರೆ ನೀಡಲಾಯಿತು.

ವಾಸ್ತವವಾಗಿ, ಈ ಮಸೂದೆಗಳಿಗೆ ವಿರೋಧವು ಎಷ್ಟು ವ್ಯಾಪಕವಾಗಿ ಹರಡಿತೆಂದರೆ, ಐದು ಕಾಂಗ್ರೆಸ್ಸೇತರ ರಾಜ್ಯಗಳ ಕಾರ್ಮಿಕ ಮಂತ್ರಿಗಳು ಸಹ ಜುಲೈ 30, 1988 ರಂದು ಕಲ್ಕತ್ತಾದಲ್ಲಿ ಭೇಟಿಯಾಗಿ, ಮಸೂದೆಗಳನ್ನು ಖಂಡಿಸಿದರು. ಈ ಸಭೆಯಲ್ಲಿ ಪಶ್ಚಿಮ ಬಂಗಾಳ, ಕೇರಳ, ಕರ್ನಾಟಕ, ಆಂಧ್ರಪ್ರದೇಶ ಮತ್ತು ಅಸ್ಸಾಂ ರಾಜ್ಯಗಳ ಕಾರ್ಮಿಕ ಮಂತ್ರಿಗಳು ಭಾಗವಹಿಸಿದ್ದರು.

ಸಾರ್ವಜನಿಕ ವಲಯದ ಕಾರ್ಮಿಕರಿಂದ ನವೀಕೃತ ಆಂದೋಲನ

ಜುಲೈ 1987 ರ ನಂತರ ಹಳೆಯ ವೇತನ ಒಪ್ಪಂದಗಳು ಮುಕ್ತಾಯಗೊಂಡಿದ್ದವು ಮತ್ತು ಸರ್ಕಾರವು ಕಾರ್ಮಿಕರಿಗೆ ಮಧ್ಯಂತರ ಪರಿಹಾರವನ್ನು ನೀಡಿದ ಸಾರ್ವಜನಿಕ ವಲಯದ ಘಟಕಗಳ ಆಡಳಿತವರ್ಗಕ್ಕೆ ಪಾವತಿಯನ್ನು ನಿಲ್ಲಿಸಲು ಮತ್ತು ಈಗಾಗಲೇ ಪಾವತಿಸಿದ ಮೊತ್ತವನ್ನು ಮರುಪಡೆಯಲು ನಿರ್ದೇಶನವನ್ನು ನೀಡಿತು.

ಸಿಪಿಎಸ್‌ಟಿಯು 18 ನವೆಂಬರ್ 1988 ರಂದು ದೆಹಲಿಯಲ್ಲಿ ಸಭೆ ನಡೆಸಿ ಈ ಆದೇಶದ ವಿರುದ್ಧ ತೀವ್ರ ಖಂಡನೆ ವ್ಯಕ್ತಪಡಿಸಿತು ಮತ್ತು 8 ಡಿಸೆಂಬರ್ 1988 ರಂದು ಅಖಿಲ ಭಾರತ ಪ್ರತಿಭಟನಾ ದಿನವನ್ನು ಆಚರಿಸಲು ಸಾರ್ವಜನಿಕ ವಲಯದ ಕಾರ್ಮಿಕರಿಗೆ ಕರೆ ನೀಡಿತು.

ಬಂದರು ಮತ್ತು ಹಡಗುಕಟ್ಟೆ ಕಾರ್ಮಿಕರ ನಾಲ್ಕು ಒಕ್ಕೂಟಗಳು. ನಿರ್ಧಾರವನ್ನು ಹಿಂತೆಗೆದುಕೊಳ್ಳಲು 1988 ರ ನವೆಂಬರ್ 4 ರಂದು ಜಂಟಿ ಪತ್ರದಲ್ಲಿ ಸರ್ಕಾರವನ್ನು ಕೋರಿದವು. ಮತ್ತು ಕಾರ್ಮಿಕರ ದೇಶವ್ಯಾಪಿ ಮುಷ್ಕರ ಕ್ರಮದ ಕುರಿತು ಸರ್ಕಾರವನ್ನು ಎಚ್ಚರಿಸಿದವು.

ಇಂಡಿಯನ್ ಏರ್‌ಲೈನ್ಸ್‌ನ ನೌಕರರು ಏರ್‌ಲೈನ್ಸ್‌ನ ಆಡಳಿತ ಮಂಡಳಿಯು ಕನಿಷ್ಟ ರೂ. 1080.ವೇತನ ನೀಡುವ ವಚನದಿಂದ ಹಿಂದೆ ಸರಿದಿದ್ದನ್ನು ಪ್ರತಿಭಟಿಸಿ, 1988 ರ ನವೆಂಬರ್ 22 ರಂದು ಒಂದು ದಿನದ ಮುಷ್ಕರವನ್ನು ಆಯೋಜಿಸಿದರು.

ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್(ಬಿ.ಪಿ.ಇ.)ನ ಸರ್ವಾಧಿಕಾರಶಾಹಿ ಮಾರ್ಗಸೂಚಿಗಳಿಂದಾಗಿ ಸಾರ್ವಜನಿಕ ವಲಯದಲ್ಲಿ ವೇತನ ಮಾತುಕತೆಗೆ ತಡೆಯಾದ ಮಹತ್ವದ ಘಟ್ಟದಲ್ಲಿ 1988 ರ ಡಿಸೆಂಬರ್ 12-13 ರಂದು ಸಿಪಿಎಸ್‌ಟಿಯು ಮತ್ತೆ ದೆಹಲಿಯಲ್ಲಿ ಸಭೆ ಸೇರಿ, ಸಾರ್ವಜನಿಕ ವಲಯದಲ್ಲಿ ವೇತನ ಮಾತುಕತೆಗಳಲ್ಲಿ ಬಿಪಿಇ ನಡೆಸುತ್ತಿರುವ ತೀವ್ರ ಹಸ್ತಕ್ಷೇಪದ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿತು. ಜನವರಿ 1989 ರ ಅಂತ್ಯದ ವೇಳೆಗೆ ಬೇಡಿಕೆಗಳ ಚಾರ್ಟರ್ ಅನ್ನು ಇತ್ಯರ್ಥಪಡಿಸುವಲ್ಲಿ ಆಡಳಿತದವರು ವಿಫಲವಾದ ಸಂದರ್ಭದಲ್ಲಿ ಅನಿರ್ದಿಷ್ಟ ಮುಷ್ಕರಕ್ಕೆ ಸಿದ್ಧರಾಗುವಂತೆ ಕರೆ ನೀಡಿತು.

ಇತರ ವಲಯಗಳ ಕಾರ್ಮಿಕರು ಹೋರಾಟದಲ್ಲಿ

ದೆಹಲಿ ಪ್ರದೇಶದಲ್ಲೂ ಕಾರ್ಮಿಕರು ಕನಿಷ್ಠ ವೇತನವನ್ನು ನಿಗದಿಪಡಿಸುವಂತೆ ಒತ್ತಾಯಿಸಿ 1988 ರ ನವೆಂಬರ್ 22 ರಿಂದ ನವೆಂಬರ್ 28 ರವರೆಗೆ 7 ದಿನಗಳ ಮುಷ್ಕರವನ್ನು ನಡೆಸಿದರು. ಅಸಂಘಟಿತ ವಲಯುಗಳ ಕಾರ್ಮಿಕರ ಈ ಮುಷ್ಕರವನ್ನು ಸಿಐಟಿಯು ಸ್ವತಂತ್ರವಾಗಿ ಆಯೋಜಿಸಿತ್ತು.

ರಾಷ್ಟ್ರೀಯ ಸಕ್ಕರೆ ಕಾರ್ಮಿಕರ ಸಮನ್ವಯ ಸಮಿತಿಯೊಂದಿಗೆ ವೇತನ ಮಾತುಕತೆ ಆರಂಭಿಸಬೇಕು ಎಂದು ಒತ್ತಾಯಿಸಿ ದೇಶದ ಸಕ್ಕರೆ ಕಾರ್ಮಿಕರು ಫೆಬ್ರವರಿ 15, 1989 ರಂದು ಮತ್ತೆ ಒಂದು ದಿನದ ಮುಷ್ಕರವನ್ನು ನಡೆಸಿದರು.

ದೇಶದ ಹತ್ತು ಪ್ರಮುಖ ಬಂದರುಗಳಲ್ಲಿನ ಕಾರ್ಮಿಕರ 17 ಏಪ್ರಿಲ್ 1989 ರಿಂದ ಅನಿರ್ದಿಷ್ಟ ಮುಷ್ಕರದ ಐದು ದಿನಗಳ ನಂತರ, ಸರ್ಕಾರ ಅಂತಿಮವಾಗಿ ನಾಲ್ಕು ಫೆಡರೇಷನ್‌ಗಳೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿತು, ಮುಷ್ಕರವು ಬಂದರು ಮತ್ತು ಹಡಗುಕಟ್ಟೆ ಕಾರ್ಮಿಕರಿಗೆ ಸಾಕಷ್ಟು ಯಶಸ್ಸನ್ನು ಗಳಿಸಿಕೊಟ್ಟಿತು.

1989 ರ ಏಪ್ರಿಲ್ 10 ರಂದು ಹರಿಯಾಣದಲ್ಲಿ ರೋಹಟಕ್, ಫರಿದಾಬಾದ್ ಮತ್ತು ಇತರ ಸ್ಥಳಗಳಲ್ಲಿ ಹಲವಾರು ಕಾರ್ಖಾನೆಗಳ ಕ್ಲೋಜರ್ ಮತ್ತು ಬೀಗಮುದ್ರೆ ವಿರುದ್ಧ ನಡೆದ ರಾಜ್ಯವ್ಯಾಪಿ ಮುಷ್ಕರವನ್ನು ಸಿಐಟಿಯು ಆಯೋಜಿಸಿತ್ತು.

ಹಲವಾರು ವರ್ಷಗಳಿಂದ ಭಯೋತ್ಪಾದಕ ಹಿಂಸಾಚಾರದ ಹಿಡಿತದಲ್ಲಿದ್ದ ಪಂಜಾಬ್‌ನಲ್ಲಿಯೂ ಸಹ, ಕಾರ್ಮಿಕರು ಎಲ್ಲಾ ಕೈಗಾರಿಕಾ ಕೇಂದ್ರಗಳಲ್ಲಿ ಹಾಗೂ ಇಟ್ಟಿಗೆಬಟ್ಟಿ ಕ್ಷೇತ್ರಗಳಲ್ಲಿ ಕೌಶಲ್ಯರಹಿತ ಕಾರ್ಮಿಕರಿಗೆ ಕನಿಷ್ಠ ವೇತನವನ್ನು ತಿಂಗಳಿಗೆ 1050 ರೂ.ಗೆ ಏರಿಸುವ. ಮತ್ತು ಇತರ ಕಾರ್ಮಿಕರಿಗೆ ಉನ್ನತ ದರ್ಜೆಯ ಕನಿಷ್ಟ ವೇತನ, ಕಾರ್ಮಿಕ ಕಾನೂನುಗಳ ಅನುಷ್ಠಾನ ಮತ್ತು ಗುತ್ತಿಗೆ ವ್ಯವಸ್ಥೆಯನ್ನು ರದ್ದುಪಡಿಸುವುದಕ್ಕೆ ಒತ್ತಾಯಿಸಿ, 1989 ರ ಏಪ್ರಿಲ್ 19 ರಿಂದ ಏಪ್ರಿಲ್ 21 ರವರೆಗೆ 3 ದಿನಗಳ ಮುಷ್ಕರವನ್ನು ನಡೆಸಿದರು. ಈ ಮುಷ್ಕರದಲ್ಲಿ ಸುಮಾರು 1,25,000 ಕಾರ್ಮಿಕರು ಭಾಗವಹಿಸಿದ್ದರು.

ಸೆಣಬಿನ ಉದ್ಯಮದ ರಾಷ್ಟ್ರೀಕರಣಕ್ಕೆ, ಒತ್ತಾಯಿಸಿ, ಮುಚ್ಚಿದ ಕಾರ್ಖಾನೆಗಳನ್ನು ಕೇಂದ್ರ ಸರ್ಕಾರವು ಸ್ವಾಧೀನಪಡಿಸಿಕೊಳ್ಳಲು, ಒತ್ತಾಯಿಸಿ ಪಶ್ಚಿಮ ಬಂಗಾಳದಲ್ಲಿ "ಆಗಸ್ಟ್ 30, 1989 ರಂದು ಸಾರ್ವತ್ರಿಕ ಮುಷ್ಕರ ಮತ್ತು ಬಂದ್ ಆಚರಿಸಲಾಯಿತು..

ಸಮಾಜವಾದ ಮಾತ್ರವೇ ಮೋದಿಯನ್ನು ಸೋಲಿಸಬಲ್ಲದು

ಪುಟ 13 ರಿಂದ

ತಯಾರಕರು ಸಾಮಾನ್ಯ(ಜೆನೆರಿಕ್) ಔಷಧಗಳನ್ನು ಬೃಹತ್ ಪ್ರಮಾಣದಲ್ಲಿ ಉತ್ಪಾದಿಸುವ ಮತ್ತು ಉತ್ತಮ ಕಾರ್ಯವಿಧಾನಗಳನ್ನು ಕಂಡುಹಿಡಿಯುವ ಒತ್ತಡ ಸೃಷ್ಟಿಯಾಯಿತು. ಪರಿಣಾಮವಾಗಿ, ಔಷಧಗಳ ಬೆಲೆಗಳೂ ಇಳಿಯುವಂತಾಯಿತು.

ದೊಡ್ಡ ಬಂಡವಾಳ ಮತ್ತು ಮುಕ್ತ ಮಾರುಕಟ್ಟೆಯೊಂದಿಗಿನ ಮೋದಿ ಅವರ ಪ್ರೇಮ ಪ್ರಕರಣವು ಅವರನ್ನು ಭಾರತದ ಔಷಧ ವಲಯದಲ್ಲಿ ಅಮೆಜಾನ್‌ನಂತಹ ಚಿಲ್ಲರೆ ಇ-ಕಾಮರ್ಸ್ ದೈತ್ಯರಿಗೆ ಹಸಿರು ನಿಶಾನೆ ತೋರಿಸುವತ್ತ ಕೊಂಡೊಯ್ದಿದೆ. ಈ ಕ್ರಮವು ನೇರವಾಗಿ 8, 50,000 ಸಣ್ಣ ಮತ್ತು ಮಧ್ಯಮ ಗಾತ್ರದ ಔಷಧ ಮಳಿಗೆಗಳಿಗೆ ಮತ್ತು ಅವುಗಳಲ್ಲಿ ಕೆಲಸ ಮಾಡುವ ಹತ್ತು ಲಕ್ಷಕ್ಕೂ ಹೆಚ್ಚು ಉದ್ಯೋಗಿಗಳಿಗೆ ಅಪಾಯವನ್ನುಂಟುಮಾಡುತ್ತದೆ. ಒಟ್ಟಾರೆಯಾಗಿ ಹೇಳುವುದಾದರೆ, ಮೋದಿ ಅವರ ಪರಿಕಲ್ಪನೆಯ ಮುಕ್ತ ಮಾರುಕಟ್ಟೆಯೆಂದರೆ ಭರ್ಜಿಗಳಿಗೆ ತಿವಿಯುವ ಸ್ವಾತಂತ್ರ್ಯ ಮತ್ತು ಪುಟ್ಟ ಮೀನುಗಳಿಗೆ ಸಾವು.

ಮೋದಿ ವಿರೋಧಿ ಮೈತ್ರಿಯ ಕಾರ್ಮೋಡಗಳು ದಟ್ಟೈಸುತ್ತಿವೆ. ಕೆಲವು ದಿನಗಳ ಹಿಂದೆ, ಟ್ವಿಟರ್‌ನಲ್ಲಿ # ಪ್ರಧಾನಿಯಾಗಿ ಮಮತಾ ಒಂದು ಟ್ರೆಂಡ್ ಆಗಿ ಕಾಣಿಸಿಕೊಂಡರು. 2022ರ ಉತ್ತರ ಪ್ರದೇಶ ಚುನಾವಣೆಯಲ್ಲಿ ಬಿಜೆಪಿಗೆ ಹಿನ್ನಡೆಯಾಗುವ ಸಾಧ್ಯತೆಗಳು ಹೆಚ್ಚಿದ ನಂತರ, ಹೊಸ ಹ್ಯಾಶ್‌ಟ್ಯಾಗ್(#) ಗಳು ಟ್ರೆಂಡ್ ಆಗುವುದ ಖಂಡಿತ. ಆದರೆ, ಭಾರತದ ರಾಜಕೀಯ ಇತಿಹಾಸವು ಸೂಚಿಸುವಂತೆ, ಜನ-ಪರ ಮತ್ತು ಸಮಾಜವಾದಿ ಕಾರ್ಯಕ್ರಮ ಆಧಾರಿತ ರಾಜಕೀಯ ಪಕ್ಷಗಳ ಒಂದು ಮೈತ್ರಿ ಕೂಟವು ಈವರೆಗೂ ಉದಯಿಸುವ ಲಕ್ಷಣಗಳಿಲ್ಲ. ಇಂತಹ ಪರಿಸ್ಥಿತಿಯಲ್ಲಿಯೇ ಮೋದಿ ತಮ್ಮ ಸಾಟಿಯಿಲ್ಲದ ವಾಕ್ಚಾತುರ್ಯದ ಸಾಮರ್ಥ್ಯವನ್ನು ಹಿಗ್ಗಾ ಮುಗ್ಗಾ ಬಳಸಿಕೊಳ್ಳುತ್ತಾರೆ. ಹಿಂದೂ ಧರ್ಮಕ್ಕೆ ಎರಗಿದ ಕಾಲ್ಪನಿಕ ಬೆದರಿಕೆಯನ್ನು ಜನರ ಮುಂದಿಟ್ಟು, "ಮೋದಿಗೆ ಎದುರಾಳಿ ಯಾರು?" ಎಂಬ ಪ್ರಶ್ನೆಯನ್ನು ಜನರ ಮುಂದಿಡುತ್ತಾರೆ. ಈ ಚಾಣಾಕ್ಷ ವಿದ್ಯಮಾನವನ್ನು ತಡೆಗಟ್ಟಬಹುದಾದ ಏಕೈಕ ಮಾರ್ಗವೆಂದರೆ, ಒಬ್ಬ ವ್ಯಕ್ತಿಯ ಬದಲಿಗೆ ಒಂದು ಕಾರ್ಯಕ್ರಮವನ್ನು ಎದುರು ನಿಲ್ಲಿಸಬೇಕಾಗುತ್ತದೆ. ಸಮಾಜವಾದದ ಮರುಹಂಚಿಕೆಯ ರೂಪವು ಆ ಕಾರ್ಯಕ್ರಮದ ತಿರುಳು ಆಗಿರಬೇಕು. ಆಟವನ್ನೇ ಬದಲಿಸಬಹುದಾದ ಅಂಥಹ ಒಂದು ಕಾರ್ಯಕ್ರಮವೆಂದರೆ, ಸಾರ್ವತ್ರಿಕ ಆರೋಗ್ಯ ರಕ್ಷಣೆಯೇ.

ಸಾರ್ವತ್ರಿಕ ಆರೋಗ್ಯ ಸೇವಾ ವ್ಯವಸ್ಥೆಯ ಅನೇಕ ಯಶಸ್ವಿ ಉದಾಹರಣೆಗಳು ನಮ್ಮ ಮುಂದಿವೆ. ಕ್ರಾಂತಿಕಾರಿ ಸಮಾಜವಾದದ ಪ್ರೇರಣೆಯಿಂದ ಹುಟ್ಟಿದ ಕ್ಯೂಬಾದಲ್ಲಿ ಆರೋಗ್ಯಸೇವೆಗಳನ್ನು ಎಲ್ಲಾ ನಾಗರಿಕರಿಗೂ ಉಚಿತವಾಗಿ ಒದಗಿಸಲಾಗಿದೆ. ಕ್ಯೂಬಾದಲ್ಲಿ ಶಿಶು ಮರಣ ಪ್ರಮಾಣವು (ಐಎಂಆರ್) ಪ್ರತಿ ಸಾವಿರ ಜನನಗಳಲ್ಲಿ 4.2. ಆದರೆ, ಭಾರತದಲ್ಲಿ, 2018 ರಲ್ಲಿ, ಇದೇ ಪ್ರಮಾಣವು 32ರಷ್ಟಿತ್ತು. ವಿಶ್ವದಲ್ಲೇ ಅತಿದೊಡ್ಡ ಮತ್ತು ಶ್ರೀಮಂತ ಬಂಡವಾಳಶಾಹಿ ಶಕ್ತಿ ಎನಿಸಿದ ಅಮೇರಿಕಾದಲ್ಲಿ ಶಿಶು ಮರಣ ಪ್ರಮಾಣವು 6.5ರಷ್ಟಿದ್ದು ಅದು ಕ್ಯೂಬಾಗಿಂತಲೂ ಹಿಂದಿದೆ. ಶಿಶು ಮರಣ ಪ್ರಮಾಣವು 3.5 ರಷ್ಟಿರುವ



ಇಂಗ್ಲೆಂಡ್‌ನೊಂದಿಗೆ ಹೋಲಿಸಿದಾಗ ಮಾತ್ರ ಕ್ಯೂಬಾ ಹಿಂದೆ ನಿಲ್ಲುತ್ತದೆ. ಇಂಗ್ಲೆಂಡ್ ಮುಂದಿರುವ ಕಾರಣವೆಂದರೆ ಅದು ಅನುಸರಿಸುತ್ತಿರುವ ಬಂಡವಾಳಶಾಹಿ ವ್ಯವಸ್ಥೆಯಲ್ಲ. ಇಂಗ್ಲೆಂಡ್ ಹೊಂದಿರುವ ಒಂದು ಸದೃಢ ಸಾರ್ವಜನಿಕ-ಧನಸಹಾಯದ ರಾಷ್ಟ್ರೀಯ ಆರೋಗ್ಯ ಸೇವೆ(ಎನ್ ಎಚ್ ಎಸ್) ಯೋಜನೆಯಿಂದಾಗಿಯೇ ಅದು ಮುಂದಿದೆ. ಕ್ಯೂಬಾದ ಆರೋಗ್ಯ ಸೇವಾ ವ್ಯವಸ್ಥೆಯ ಅತ್ಯಂತ ಆಸಕ್ತಿದಾಯಕ ಅಂಶವೆಂದರೆ, ಅದು ಆರೋಗ್ಯ ಸೇವೆಗಾಗಿ ತಲಾ \$300-\$400 ಖರ್ಚು ಮಾಡುತ್ತದೆ. ವೈದ್ಯರಿಗೆ ತಿಂಗಳಿಗೆ \$64 ರಷ್ಟು ಸಣ್ಣ ಮೊತ್ತವನ್ನು ಸಂಬಳವಾಗಿ ಪಾವತಿಸುತ್ತದೆ. ಸಾಗರೋತ್ತರ ವೈದ್ಯಕೀಯ ಸೇವೆಗಳಿಗೆ ಪ್ರತಿಫಲವಾಗಿ ವಾರ್ಷಿಕ \$8 ಬಿಲಿಯನ್ ಆದಾಯ ಗಳಿಸುತ್ತದೆ. ಈ ಗಳಿಕೆಯ ದೊಡ್ಡ ಭಾಗವನ್ನು ರಾಷ್ಟ್ರೀಯ ಆರೋಗ್ಯ ಸೇವೆಗಳ ವರ್ಧನೆಗಾಗಿ ಮರು ಹೂಡಿಕೆ ಮಾಡುತ್ತದೆ.

ಅನೇಕ ಸಮಾಜವಾದಿ ನೀತಿಗಳಲ್ಲಿ ಈ ಒಂದು ನೀತಿಯ, ಸಾರ್ವತ್ರಿಕ ಆರೋಗ್ಯ ಸೇವೆಯ ಸುತ್ತ ವಿರೋಧಿ ರಾಜಕೀಯ ಪಕ್ಷಗಳು ನೆನರೆಯಲು ಸಾಧ್ಯವಿದೆ. ಭಾರತದ ಜನರು ಹಿಂದುತ್ವ ಮತ್ತು ಅದರ ಗಡ್ಡಧಾರಿ ದ್ಯೋತಕದಿಂದ ಬೇಸತ್ತಿದ್ದಾರೆ. ಅವರಿಂದ ತಮ್ಮ ಮುಕ್ತಿಯ ದಿನಕ್ಕೆ ಕಾಯುತ್ತಿದ್ದಾರೆ.

ಕೇಂದ್ರ ಸರಕಾರ ಸಾರ್ವತ್ರಿಕ ಉಚಿತ ಲಸಿಕೀಕರಣದ ಕ್ರಮ ಕೈಗೊಳ್ಳುವಂತೆ ರಾಜ್ಯಗಳ ಕಡೆಯಿಂದ ಐಕ್ಯ ಪ್ರಯತ್ನ ಅಗತ್ಯವಾಗಿದೆ

-11 ಮುಖ್ಯಮಂತ್ರಿಗಳಿಗೆ ಪಿಣರಾಯಿ ವಿಜಯನ್ ಪತ್ರ

ಇಡೀ ದೇಶ ಎರಡನೇ ಕೊವಿಡ್ ಅಲೆಯನ್ನು ಎದುರಿಸುತ್ತಿರುವಾಗ, ಅದಕ್ಕೆ ಸಾರ್ವತ್ರಿಕ ಲಸಿಕೀಕರಣ ಅತ್ಯಗತ್ಯವಾಗಿರುವಾಗ, ಕೇಂದ್ರ ಸರಕಾರ ಲಸಿಕೆಗಳನ್ನು ಪಡೆಯುವ ಮತ್ತು ಉಚಿತ ಸಾರ್ವತ್ರಿಕ ಲಸಿಕೀಕರಣವನ್ನು ಖಾತ್ರಿಪಡಿಸುವ ತನ್ನ ಕರ್ತವ್ಯದಿಂದ ನುಣುಚಿಕೊಳ್ಳುತ್ತಿದೆ. ಇದು ದುರದೃಷ್ಟದ ಸಂಗತಿ. ಇಂತಹ ಸಂದರ್ಭದಲ್ಲಿ ರಾಜ್ಯಗಳ ಕಡೆಯಿಂದ ತಮ್ಮ ನೈಜ ಆಗ್ರಹವನ್ನು ಕೇಂದ್ರ ಸರಕಾರದ ಮುಂದಿಡುವ ಐಕ್ಯ ಪ್ರಯತ್ನ ನಡೆಸಬೇಕಾಗಿದೆ ಎಂದು ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಹನ್ನೊಂದು ರಾಜ್ಯಗಳ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದಾರೆ.

ಸಮೂಹ ಸೋಂಕು-ಪ್ರತಿರೋಧವನ್ನು ಕಟ್ಟಲು ಅತ್ಯುತ್ತಮ ದಾರಿಯೆಂದರೆ ಸಾರ್ವತ್ರಿಕ ಲಸಿಕೀಕರಣ ಎಂದು ಎಲ್ಲರಿಗೂ ಗೊತ್ತಿದೆ. ಆದರೆ ಈಗ ಲಸಿಕೆಗಳ ಬೇಡಿಕೆಗೆ ಹೋಲಿಸಿದರೆ ಪೂರೈಕೆಯ ಕೊರತೆ ಇದೆ. ಕೇಂದ್ರ ಸರಕಾರ ಕೊವಿಡ್-19 ಲಸಿಕೆಗಳನ್ನು ಪಡೆಯಲು ರಾಜ್ಯಗಳು ತಾವೇ ಕ್ರಮಗಳನ್ನು ಕೈಗೊಳ್ಳಬೇಕು ಎಂಬ ನಲುವನ್ನು ತಳೆದಿದೆ.

"ಕೇಂದ್ರ ಸರಕಾರ ರಾಜ್ಯಗಳ ಲಸಿಕೆ ಆವಶ್ಯಕತೆಗಳನ್ನು ಗಮನಕ್ಕೆ ತಗೊಂಡು ಒಂದು ಜಾಗತಿಕ ಟೆಂಡರ್ ಕರೆಯುವ ನೇತೃತ್ವವನ್ನು ವಹಿಸಬೇಕಾಗಿದೆ ಎಂದು ನಾನು ಈಗಾಗಲೆ ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿದ್ದೇನೆ" ಎಂದು ತಿಳಿಸಿರುವ ಪಿಣರಾಯಿ ವಿಜಯನ್ ಲಸಿಕೆ ಒಂದು ಸಾರ್ವಜನಕ ಒಳಿತಿನ ವಸ್ತುವಾದ್ದರಿಂದ ಅದನ್ನು ಉಚಿತವಾಗಿ ಕೊಡಬೇಕಾಗಿದೆ, ಹಣಕಾಸು ಸೌಕರ್ಯ ಇಲ್ಲ ಎಂಬ ಕಾರಣಕ್ಕೆ ಯಾರೂ ಅದರಿಂದ ವಂಚಿತರಾಗಬಾರದು ಎಂದು ಅವರು ತಮ್ಮ ಪತ್ರದಲ್ಲಿ ಅಭಿಪ್ರಾಯ ಪಟ್ಟಿದ್ದಾರೆ.

ಎರಡನೇ ಅಲೆಯ ಪರಿಣಾಮ ಅಭೂತಪೂರ್ವ, ಇದು ನಾವೆಲ್ಲರೂ ಎಚ್ಚರಿಕೆಯಿಂದ ಇರುವಂತೆ ಮಾಡಿದೆ. ಅಲ್ಲದೆ, ಪರಿಣಿತರು ಮೂರನೇ ಅಲೆ ಬಂದೆರಗುವ ಬಗ್ಗೆಯೂ ಎಚ್ಚರಿಸಿದ್ದಾರೆ. ಇಂತಹ ಸಂದರ್ಭದಲ್ಲಿ, ಲಸಿಕೆಗಳನ್ನು ಪಡೆಯುವ ಹೊರೆಯನ್ನು ಪೂರ್ಣವಾಗಿ, ಅಥವ ಭಾಗಶಃವಾಗಿಯಾದರೂ ರಾಜ್ಯಗಳ ಮೇಲೆಯೇ ಬಿಟ್ಟಿರುವುದು ಅವುಗಳ ಹಣಕಾಸು ಪರಿಸ್ಥಿತಿಯನ್ನು ಶೋಚನೀಯಗೊಳಿಸುತ್ತದೆ. ಒಂದು ಆರೋಗ್ಯಕರ ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯಗಳ ಹಣಕಾಸು ಶಕ್ತಿ ಒಂದು ಅಗತ್ಯ ಭಾಗ. ರಾಜ್ಯಗಳ ಹಣಕಾಸು ಬಲಕ್ಕೆ ಕುಂದು ಬಂದರೆ ಅದರಿಂದ ಒಕ್ಕೂಟತತ್ವವೇ ದುರ್ಬಲಗೊಳ್ಳುತ್ತದೆ, ಇದು ನಮ್ಮಂತಹ ಪ್ರಜಾಪ್ರಭುತ್ವ ರಾಜಕೀಯ ವ್ಯವಸ್ಥೆಗೆ ಒಳ್ಳೆಯದಲ್ಲ.

ಅಲ್ಲದೆ ಸಮೂಹ ಸೋಂಕು-ಪ್ರತಿರೋಧವನ್ನು ಬೇಗನೇ ಕಟ್ಟುವುದಕ್ಕೂ ಇದು ಅಡ್ಡಿಯಾಗುತ್ತದೆ; ಏಕೆಂದರೆ ಅದು ಪರಿಣಾಮಕಾರಿಯಾಗುವುದು ಜನಸಂಖ್ಯೆಯ ಒಂದು ಗಮನಾರ್ಹ ವಿಭಾಗ ಲಸಿಕೆ ಪಡೆದಾಗ ಮಾತ್ರ., ಆದರೆ ಇದುವರೆಗೆ ಕೇವಲ 3.1% ಜನಗಳಿಗೆ ಮಾತ್ರ ಲಸಿಕೆಗಳ ಎರಡು ಡೋಸುಗಳನ್ನು ಹಾಕಲಾಗಿದೆ ಎಂದು ಪಿಣರಾಯಿ ವಿಜಯನ್ ಮುಖ್ಯಮಂತ್ರಿಗಳಿಗೆ ಬರೆದಿರುವ ಪತ್ರದಲ್ಲಿ ನೆನಪಿಸಿದ್ದಾರೆ.

ಲಸಿಕೆ ತಯಾರಕ ಕಂಪೆನಗಳು ಲಸಿಕೆಗಳ ಕೊರತೆಯಿಂದ ಹಣಕಾಸು ಪ್ರಯೋಜನ ಪಡೆಯುವಲ್ಲಿ ತೊಡಗಿವೆ. ವಿದೇಶಿ ಔಷಧಿ ಕಂಪನಗಳು ರಾಜ್ಯ ಸರಕಾರಗಳೊಂದಿಗೆ ಲಸಿಕೆ ಖರೀದಿ ಬಗ್ಗೆ ಒಪ್ಪಂದಗಳನ್ನು ಮಾಡಿಕೊಳ್ಳಲು ಹಿಂಜರಿಯುತ್ತಿವೆ. ಇಂತಹ ಸಂದರ್ಭದಲ್ಲಿ, ಸಾರ್ವಜನಿಕ ವಲಯದಲ್ಲಿ ಲಸಿಕೆಗಳನ್ನು ತಯಾರಿಸುವ ಸಾಮರ್ಥ್ಯವುಳ್ಳ ಕಂಪನಗಳನ್ನು ಹೊಂದಿರುವ ಭಾರತದ ಸರಕಾರ



ಕೊವಿಡ್-19 ಲಸಿಕೆಗಳನ್ನು ತಯಾರಿಸಲು ಬೌದ್ಧಿಕ ಹಕ್ಕುಗಳು, ಪೇಟೆಂಟ್ ಕಾಯ್ದೆಗಳು ಮತ್ತು ವಿಧಿ-ವಿಧಾನಗಳು ಅಡ್ಡಿಯಾಗದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಏಕೆಂದರೆ ಈ ಲಸಿಕೆ ಒಂದು ಸಾರ್ವಜನಕ ಒಳಿತಿನ ಸ್ಥಾನಮಾನ ಹೊಂದಬೇಕಾಗಿದೆ. ಕೇಂದ್ರ ಸರಕಾರ ಕಡ್ಡಾಯ ಲೈಸೆನ್ಸಂಗ್‌ನ ಸಾಧ್ಯತೆಗಳನ್ನು ಅನ್ವೇಷಿಸುವಂತೆ ಆಗ್ರಹಿಸಬೇಕು ಎಂದು ಕೇರಳದ ಮುಖ್ಯಮಂತ್ರಿಗಳು ತಮ್ಮ ಪತ್ರದಲ್ಲಿ ಹೇಳಿದ್ದಾರೆ.

"ಲಸಿಕೆಗಳನ್ನು ಒದಗಿಸುವ ಹೊಣೆಗಾರಿಕೆ ಸಂಪೂರ್ಣವಾಗಿ ರಾಜ್ಯಗಳ ವ್ಯಾಪ್ತಿಗೆ ಬರುತ್ತದೆ ಎಂಬಂತಹ ಹೇಳಿಕೆಗಳನ್ನು ಕೊಡಲಾಗುತ್ತಿದೆ. ಇದು ಸಹಕಾರಿ ಒಕ್ಕೂಟ ವ್ಯವಸ್ಥೆಯ ಆಧಾರವನ್ನೇ ನರಾಕರಿಸುತ್ತದೆ. ಈ ಕ್ಷಣದ ಆವಶ್ಯಕತೆಯೆಂದರೆ, ಕೇಂದ್ರ ಸರಕಾರ ರಾಜ್ಯಗಳಿಗೆ ಬೇಕಾದ ಲಸಿಕೆಗಳನ್ನು ಪಡೆಯಬೇಕು ಮತ್ತು ಅವನ್ನು ಉಚಿತವಾಗಿ ಹಂಚಬೇಕು ಎಂಬ ನೈಜ ಬೇಡಿಕೆಯನ್ನು ನಮ್ಮ ಕಡೆಯಿಂದ ಮುಂದಿಡಲು ಐಕ್ಯ ಪ್ರಯತ್ನ ನಡೆಯಬೇಕಾಗಿದೆ. ಇದರಿಂದ ಖರ್ಚು ಕೂಡ ಕಡಿಮೆಯಾಗುತ್ತದೆ" ಎಂದು ಪಿಣರಾಯಿ ವಿಜಯನ್ ಹನ್ನೊಂದು ಮುಖ್ಯಮಂತ್ರಿಗಳಿಗೆ ಬರೆದ ಪತ್ರದಲ್ಲಿ ಹೇಳಿದ್ದಾರೆ.

ದೇಶದೆಲ್ಲೆಡೆ ಉಚಿತ ಲಸಿಕೆಗಾಗಿ ಕೇಂದ್ರಕ್ಕೆ ಒತ್ತಾಯ: ಕೇರಳ ವಿಧಾನಸಭೆಯಲ್ಲಿ ನಿರ್ಣಯ ಅಂಗೀಕಾರ

ದೇಶದ ಎಲ್ಲೆಡೆ ಎಲ್ಲಾ ಜನತೆಗೆ ಉಚಿತವಾಗಿ ಕೋವಿಡ್ ಲಸಿಕೆ ವಿತರಿಸುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಲು ಕೇರಳ ವಿಧಾನಸಭೆಯಲ್ಲಿ ಮಂಡಿಸಿದ ನಿರ್ಣಯ ಸರ್ವಾನುಮತದಿಂದ ಅಂಗೀಕಾರಗೊಂಡಿದೆ.

ಕೇರಳ ರಾಜ್ಯದಲ್ಲಿ ತೀವ್ರವಾಗಿ ಕೋವಿಡ್ ಲಸಿಕೆ ಕೊರತೆ ಉಂಟಾಗಿರುವ ಹಿನ್ನೆಲೆಯಲ್ಲಿ ಆರೋಗ್ಯ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವ ವೀಣಾ ಜಾರ್ಜ್ ಅವರು ಸದನದಲ್ಲಿ ಈ ನಿರ್ಣಯವನ್ನು ಮಂಡಿಸಿದರು. ಇದೇ ವೇಳೆ ಸಕಾಲಿಕವಾಗಿ ಲಸಿಕೆ ವಿತರಿಸುವಂತೆ ನಿರ್ಣಯವನ್ನು ಮಂಡಿಸಿ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದರು.

'ಕೋವಿಡ್-19 ವಿರುದ್ಧ ಹೋರಾಡುವುದಕ್ಕಾಗಿ ನಾವು ಸಮಾಜದ ಎಲ್ಲ ವರ್ಗದವರಿಗೂ ಉಚಿತವಾಗಿ ಲಸಿಕೆ ಒದಗಿಸಬೇಕು. ಇದರಿಂದ ಸಮಾಜವನ್ನು ವೈರಸ್‌ನಿಂದ ರಕ್ಷಿಸಿದಂತಾಗುತ್ತದೆ' ಎಂದು ಸಚಿವೆ ವೀಣಾ ಜಾರ್ಜ್ ಹೇಳಿದ್ದಾರೆ.

ಕೋವಿಡ್ 19 ಸಾಂಕ್ರಾಮಿಕದ ಮೊದಲ ಅಲೆ, ದೇಶದ ಆರ್ಥಿಕತೆಯನ್ನು ದುರ್ಬಲಗೊಳಿಸಿದೆ. ಈಗ ದೇಶವು ಎರಡನೇ ಅಲೆಯನ್ನು ಎದುರಿಸುತ್ತಿದೆ. ಈ ಸಂದರ್ಭದಲ್ಲಿ ಲಸಿಕೆ ನೀಡುವುದನ್ನು ವೇಗಗೊಳಿಸಿದರೆ, ದೇಶದ ಆರ್ಥಿಕತೆಯ ಸುಧಾರಣೆಗೆ ಸಹಾಯವಾಗುತ್ತದೆ' ಎಂದು ಅವರು ಹೇಳಿದರು. ಸಾಂಕ್ರಾಮಿಕ ರೋಗದ ವಿರುದ್ಧ ಹೋರಾಡಲು ಮತ್ತು ಸಮಾಜದ ಎಲ್ಲ ವರ್ಗದವರಿಗೂ ಲಸಿಕೆ ನೀಡುವುದಕ್ಕಾಗಿ ಎಲ್ಲರೂ ಕೈಜೋಡಿಸಬೇಕು ಎಂದು ಅವರು ಮನವಿ ಮಾಡಿದರು.

ಕೇಂದ್ರ ಸರ್ಕಾರದ ಲಸಿಕೆ ನೀತಿಯಿಂದ ಕಾಳಸಂತೆಗೆ ಉತ್ತೇಜನೆ

ಕೋವಿಡ್ ಲಸಿಕೆ ನೀತಿಯಲ್ಲಿ ಕೇಂದ್ರ ಸರಕಾರ ಧೋರಣೆಯು ಕಾಳಸಂತೆಗೆ ನೆರವು ನೀಡುವಂತದ್ದಾಗಿದೆ. ಖಾಸಗಿ ಸಂಸ್ಥೆಗಳು ಮತ್ತು ಲಸಿಕೆ ತಯಾರಕರು ಸಾಂಕ್ರಾಮಿಕ ರೋಗದ ಸಂದರ್ಭದಲ್ಲಿ ಜನರೊಂದಿಗೆ ಆರೋಗ್ಯದ ವಿಚಾರದಲ್ಲಿ ಚೆಲ್ಲಾಟ ವಾಡುತ್ತಿದ್ದಾರೆ ಎಂದು ಕೇರಳ ಸರ್ಕಾರವು ಕೇಂದ್ರ ಸರ್ಕಾರದ ವಿರುದ್ಧ ಕೇರಳ ಉಚ್ಚ ನ್ಯಾಯಾಲಯದಲ್ಲಿ ವಿಚಾರಣೆ ಸಂದರ್ಭದಲ್ಲಿ ತಿಳಿಸಿದೆ.

ಕೇರಳ ರಾಜ್ಯದಲ್ಲಿ ಕೋವಿಡ್ ಲಸಿಕೆ ಕೊರತೆ ಎದುರಾಗಿರುವುದಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಅರ್ಜಿ ವಿಚಾರಣೆ ಕೈಗೊಂಡ ನ್ಯಾಯಮೂರ್ತಿಗಳಾದ ಎ ಮೊಹಮ್ಮದ್ ಮುಷ್ತಾಕ್ ಮತ್ತು ಕೌಸರ್ ಎಡಪ್ಪಾಗಡ್ ಅವರಿದ್ದ ವಿಭಾಗೀಯ ಪೀಠದ ಮುಂದೆ ರಾಜ್ಯ ಸರಕಾರದ ಪರವಾಗಿ ಈ ಹೇಳಿಕೆ ಸಲ್ಲಿಸಲಾಗಿದೆ.

ರಾಜ್ಯ ಸರ್ಕಾರದ ಪರ ವಕೀಲ ಕೆ ವಿ ಸೋಹನ್ ಅವರು "ಕೇಂದ್ರ ಸರ್ಕಾರವು ಕಾಳಸಂತೆಗೆ ಬೆಂಬಲ ನೀಡುತ್ತಿದೆ. ಲಸಿಕೆಗೆ ವಿಭಿನ್ನ ದರಗಳನ್ನು ಏಕೆ ವಿಧಿಸಲಾಗುತ್ತಿದೆ? ಉತ್ಪಾದನೆಯ ದರವನ್ನು ಆಧರಿಸಿ ಲಸಿಕೆಗೆ ದರ ನಿಗದಿ ಮಾಡಬೇಕು. ಸಾಂಕ್ರಾಮಿಕತೆಯ ಸಂದರ್ಭದಲ್ಲಿ ಕಂಪೆನಿಗಳ ಕೈಚಳಕಕ್ಕೆ ಅವಕಾಶ ಮಾಡಿಕೊಡಬಾರದು. ಖಾಸಗಿ ಕಂಪೆನಿಗಳು ಕಾಳಸಂತೆ ವ್ಯವಹಾರ ನಡೆಸಲು ಹೇಗೆ ತಾನೆ ಅವಕಾಶ ಮಾಡಿಕೊಡಲು ಸಾಧ್ಯ? ದುಬಾರಿ ದರಗಳನ್ನು ವಿಧಿಸಲಾಗುತ್ತಿದೆ" ಎಂದು ಪೀಠಕ್ಕೆ ವಿವರಿಸಿದರು.

ಖಾಸಗಿ ವಲಯದಲ್ಲಿ ಲಸಿಕೆ ನೀಡಿಕೆ ಇದುವರೆಗೆ ಕೇವಲ 7.5%: ಮೋದಿ ಸರಕಾರದ ಲಸಿಕೆ ಧೋರಣೆಯ "ತರ್ಕಹೀನ"ತೆಯ ಪ್ರತಿಫಲನ?

ಮೋದಿ ಸರಕಾರದ "ಉದಾರೀಕೃತ ಲಸಿಕೆ ಧೋರಣೆ" ಒಟ್ಟು ಉತ್ಪಾದಿತ ಲಸಿಕೆ ಡೋಸುಗಳಲ್ಲಿ ಖಾಸಗಿ ವಲಯಕ್ಕೆ 25% ಕೋಟವನ್ನು ಕೊಟ್ಟಿತ್ತು. ಆದರೆ ಮೇ 30ರ ವೇಳೆಗೆ ದೇಶದಲ್ಲಿ ನೀಡಿದ ಒಟ್ಟು 20.8 ಕೋಟಿ ಡೋಸುಗಳಲ್ಲಿ ಖಾಸಗಿ ವಲಯ ನೀಡಿದ್ದು ಕೇವಲ 1.6 ಕೋಟಿ ಡೋಸುಗಳು ಮಾತ್, ಅಂದರೆ ಸುಮಾರು7.5% ಮಾತ್ರ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ.

ಏಳು ರಾಜ್ಯಗಳಲ್ಲಿ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಹಾಗೂ ದೇಶದ ಒಟ್ಟು ಸುಮಾರು 750 ಜಿಲ್ಲೆಗಳಲ್ಲಿ 80ರಲ್ಲಿ ಮಾತ್ರವೇ ಈ ಪ್ರಮಾಣ 10%ವನ್ನು ದಾಟಿದೆ.

ಅಲ್ಲದೆ, ಖಾಸಗಿ ವಲಯ ನೀಡಿದ ಡೋಸುಗಳಲ್ಲಿ ಬಹುಪಾಲು, 54% ದಷ್ಟು 25 ದೊಡ್ಡ ನಗರಗಳಿರುವ ಜಿಲ್ಲೆಗಳಲ್ಲೇ.

ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ಈಶಾನ್ಯ ರಾಜ್ಯಗಳಲ್ಲಿ, ಒಟ್ಟು 50%ದಷ್ಟು ಜಿಲ್ಲೆಗಳಲ್ಲಿ ಖಾಸಗಿ ವಲಯದಿಂದ ಲಸಿಕೆ ನೀಡಿಕೆ 1%ಕ್ಕಿಂತಲೂ ಕಡಿಮೆ

ಸರಕಾರದ ಕೊವಿನ್ ವೆಬ್ ತಾಣದ ಪ್ರಕಾರ 80% ಜಿಲ್ಲೆಗಳಲ್ಲಿ ಸಾರ್ವಜನಿಕ ವಲಯ ,ಅಂದರೆ ಸರಕಾರೀ ಅಸ್ಪತ್ರೆಗಳು ಮತ್ತು ಸರಕಾರಗಳು ನಿರ್ಮಿಸಿದ ಲಸಿಕೆ ಕೇಂದ್ರಗಳಲೇ 95% ದಷ್ಟು ಡೋಸುಗಳನ್ನು ನೀಡಲಾಗಿದೆ.

ಈ ಸಂದರ್ಭದಲ್ಲಿ ಸುಪ್ರಿಂ ಕೋರ್ಟ್ ಸ್ವಯಂಪ್ರೇರಣೆಯಿಂದ ಎತ್ತಿಕೊಂಡ ವಿಚಾರಣೆಯಲ್ಲಿ ಮೋದಿ ಸರಕಾರ ದ ಅಫಿಡವಿಟ್ ಬಗ್ಗೆ ಟಿಪ್ಪಣಿ ಮಾಡುತ್ತ ಹೇಳಿರುವ ಮಾತುಗಳು ವಿಶೇಷ ಮಹತ್ವ ಪಡೆಯುತ್ತವೆ.

ಕೇಂದ್ರ ಸರಕಾರ ಎಪ್ರಿಲ್ ನಲ್ಲಿ ಪ್ರಕಟಿಸಿದ ಉದಾರೀಕೃತ ಲಸಿಕೆ ನೀತಿ ರಾಜ್ಯ ಸರಕಾರಗಳು ಲಸಿಕೆ ಉತ್ಪಾದಕರೊಂದಿಗೆ ಮಾತುಕತೆ ನಡೆಸುವಂತೆ ಬಲವಂತ ಮಾಡುತ್ತದೆ. ಇದು 18-44 ವಯೋಗುಂಪಿನವರಿಗೆ, ಲಸಿಕೆ ನೀಡಿಕೆಗೆ ಹಾನಿಕಾರಕವಗಬಹುದು ಎಂದು ಸುಪ್ರಿಂ ಕೋರ್ಟ್ ಹೇಳಿತ್ತು. ಈ ವಯೋಗುಂಪಿನ ಬಹುಜನರು ಅಥವ ಅಂಚಿಗೆ ತಳ್ಳಲ್ಪಟ್ಟಿರುವ ವಿಭಾಗಗಳ ವ್ಯಕ್ತಿಗಳು ಹಣತೆತ್ತು ಲಸಿಕೆ ಪಡೆಯುವುದು ಕಷ್ಟಕರವಾಗಬಹುದು ಎಂದು ಸುಪ್ರಿಂ ಕೋರ್ಟ್ ಹೇಳಿತ್ತು. ಇದು ಮೇಲ್ನೋಟಕ್ಕೇ "ಸ್ವೇಚ್ಛಾಚಾರಿ ಮತ್ತು ತರ್ಕಹೀನ" ಎಂದನಿಸುತ್ತದೆ ಎಂದು ಅದು ಖಾರವಾಗಿಯೆ ಹೇಳಿತ್ತು.

ರಾಜ್ಯ ಸರಕಾರಗಳು, ತಮ್ಮ ಹಣಕಾಸಿನ ಆಧಾರದಲ್ಲಿ ಈ ವಿಭಾಗಗಳಿಗೆ ಲಸಿಕೆಗಳನ್ನು ಉಚಿತವಾಗಿ ಕೊಡಲು ಸಾಧ್ಯವಾಗುತ್ತದೆಯೇ? ಇದು ದೇಶದಲ್ಲಿ ತಾರತಮ್ಯವನ್ನು ಉಂಟು ಮಾಡುತ್ತದೆ ಎಂಬ ಸಂದೇಹವನ್ನು ಸರ್ವೋಚ್ಚ ನ್ಯಾಯಾಲಯ ವ್ಯಕ್ತಪಡಿಸಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

45 ವರ್ಷದ ಮೇಲಿನವರಿಗೆ ಕೇಂದ್ರ ಸರಕಾರ ತಾನು 150ರೂ. ದರದಲ್ಲಿ ಪಡೆದ ಲಸಿಕೆಗಳನ್ನು ಕೊಡುತ್ತದೆ, 45 ವರ್ಷದ ಕೆಳಗಿನವರಿಗೆ ರಾಜ್ಯ ಸರಕಾರಗಳು ಲಸಿಕೆ ತಯಾರಕ ಕಂಪನಿಗಳೊಂದಿಗೆ ವ್ಯಾಪಾರೀ ನಿಯಮಗಳ ಪ್ರಕಾರ ಮಾತುಕತೆ ನಡೆಸಿ 300-600 ರೂ. ದರದಲ್ಲಿ ಪಡೆಯುವ ಲಸಿಕೆಗಳನ್ನು ಕೊಡಬೇಕು ಎನ್ನುವುದು ನಾಗರಿಕರ ವಿವಿಧ ವಿಭಾಗಗಳಲ್ಲಿ ತಾರತಮ್ಯ ಮಾಡಿದಂತಾಗುತ್ತದೆ, ಇದನ್ನು ನ್ಯಾಯಾಲಯ ಸಂವಿಧಾನದ ಕಲಮು 14 (ಸಮಾನತೆಯ ಹಕ್ಕು) ರ ಅಡಿಯಲ್ಲಿ ಪರಿಶೀಲಿಸಬೇಕಾಗುತ್ತದೆ ಎಂದು ಮೂವರು ನ್ಯಾಯಾಧೀಶರ ಪೀಠ ಟಿಪ್ಪಣಿ ಮಾಡಿತ್ತು ಎಂಬುದನ್ನೂ ನೆನಪಿಸಿಕೊಳ್ಳಬಹುದು.

ಈ ವಿಭಿನ್ನ ದರಗಳು ಏಕೆ ಎಂದು ಸಮಜಾಯಿಷಿ ಕೊಡುತ್ತ ಕೇಂದ್ರ ಸರಕಾರ ತನ್ನ ಅಫಿಡವಿಟ್‌ನಲ್ಲಿ ತಾನು ದೊಡ್ಡ ಪ್ರಮಾಣದಲ್ಲಿ ಖರೀದಿಸುವುದರಿಂದಾಗಿ ಭಾರೀ ಡಿಸ್ಕೌಂಟ್ ಸಿಗುತ್ತದೆ ಎಂದು ಹೇಳಿತ್ತು.

ಹಾಗಿದ್ದರೆ ಕೇಂದ್ರ ಸರಕಾರವೇ ಏಕೆ ಎಲ್ಲ ಲಸಿಕೆಗಳನ್ನು ಖರೀದಿಸಬಾರದು ಎಂದು ನ್ಯಾಯಾಲಯ ಕೇಂದ್ರ ಸರಕಾರವನ್ನು ಪ್ರಶ್ನಿಸಿತು.

ಕೇಂದ್ರ ಸರಕಾರ ಲಸಿಕೆಗೆಂದು ಬಜೆಟಿನಲ್ಲಿ 35,000 ಕೋಟಿ ರೂ.ಗಳನ್ನು ಕೊಟ್ಟಿದೆ. ಆದರೆ ಈಗ ಉದಾರೀಕೃತ ಲಸಿಕೆ ಧೋರಣೆಯ ಪ್ರಕಾರ ಇದ್ದಕ್ಕಿದ್ದಂತೆ ರಾಜ್ಯ ಸರಕಾರಗಳೇ 18-44 ವಯೋಗುಂಪಿನವರರಿಗೆ ಖರ್ಚು ಮಾಡಬೇಕಾಗಿದೆ. ಹೀಗಿರುವಾಗ ಕೇಂದ್ರ ಸರಕಾರ 35,000 ಕೋಟಿ ರೂ.ಗಳನ್ನು ಹೇಗೆ ಖರ್ಚು ಮಾಡಿದೆ/ ಮಾಡುತ್ತಿದೆ, ಈ ಹಣವನ್ನು 18-44 ವಯೋಗುಂಪಿನವರ ಲಸಿಕೀಕರಣಕ್ಕೆ ಬಳಸಲು ಏಕೆ ಸಾಧ್ಯವಿಲ್ಲ ಎಂಬ ಬಗ್ಗೆ ಸ್ಪಷ್ಟೀಕರಣ ನೀಡುವಂತೆ ಸುಪ್ರಿಂ ಕೋರ್ಟ್ ಜೂನ್ 2 ರಂದು ಕೇಳಿತ್ತು.

ಈ ಹಿನ್ನೆಲೆಯಲ್ಲಿ ಕೇಂದ್ರ ಸರಕಾರ ತನ್ನ ಲಸಿಕೆ ನೀತಿಯ ಮರು ಪರಾಮರ್ಶೆ ನಡೆಸಿ ಈ ವರ್ಷದ ಅಂತ್ಯದೊಳಗೆ ಸಾರ್ವತ್ರಿಕ ಲಸಿಕೀಕರಣಕ್ಕೆ ಲಸಿಕೆಗಳು ಹೇಗೆ ಲಭ್ಯವಗುತ್ತವೆ ಎಂಬುದರ ಮಾರ್ಗಸೂಚಿಯೂ ಸೇರಿದಂತೆ ಆರು ನಿರ್ದಿಷ್ಟ ಅಂಶಗಳ ಮೇಲೆ ಸ್ಪಷ್ಟೀಕರಣ ಗಳನ್ನು 15 ದಿನಗಳ ಒಳಗೆ ಸಲ್ಲಿಸಬೇಕು ಎಂದು ಆದೇಶ ನೀಡಿದೆ.

JANASHAKTHI KANNADA VARA PATRIKE June 07-13, 2021 Price: Rs. 10/- Date of Publication: 04 June 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21

ರಾಜ್ಯದಾದ್ಯಂತ ಎಡ ಮತ್ತು ಜಾತ್ಯಾತೀತ ಪಕ್ಷಗಳ ಪ್ರತಿಭಟನೆ




ಸಿಪಿಐಎಂ, ಬೆಂಗಳೂರು



ಸಿಪಿಐ


ಸ್ವರಾಜ ಇಂಡಿಯಾ



ಟಿಯುಸಿಸಿ



ಸಿಪಿಐ(ಎಂಎಲ್)


ಕುಂದಾಪುರ


ರಾಯಚೂರು


ಕಲಬುರಗಿ


ಕೋಲಾರ



ಎಸ್‌ಯುಸಿಐ


ದಾವಣಗೆರೆ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**